# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಡಿಸೆಂಬರ್, ೨೦೧೯** **ಸಂಪಾದಕ : ಡಿ.ಎಸ್. ನಾಗಭೂಷಣ** **ಸಂಪುಟ: ೮ ಸಂಚಿಕೆ: ೧೧**

**ಚಂದಾ ರೂ. ೨೦೦/- (೨೦೧೯ರ ಅಕ್ಟೋ.ನಿಂದ ಸೆಪ್ಟಂ. ೨೦೨೦ರವರೆಗೆ) ಸಂಸ್ಥೆಗಳಿಗೆ** ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೭ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಾನು ಈ ಟಿಪ್ಪಣಿಗಳನ್ನು ಬರೆಯುವ ಹೊತ್ತಿನಲ್ಲಿ ಮಹಾರಾಷ್ಟ್ರದಲ್ಲಿನ 'ವಿವಾದಾಸ್ಪದ' ರಾಜಕಾರಣ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೊರಬಂದಿದೆ. ಅನಿಶ್ಚಿತತೆಯ ಸಂದರ್ಭಗಳಲ್ಲಿ ಸರ್ಕಾರ ರಚಿಸುವ 'ಅರ್ಹತೆ' ಯಾರಿಗಿದೆ ಎಂಬುದು ತೀರ್ಮಾನವಾಗಬೇಕಾದದ್ದು ವಿಧಾನ ಮಂಡಲದ ಬಹುಮತ ಪರೀಕ್ಷೆಯ ಮೂಲಕ ಎಂಬ ಪ್ರಜಾಪ್ರಭುತ್ವದ ಮೂಲಪಾಠವನ್ನು ಮೊಕದ್ದಮೆ ದಾಖಲಾದ ಮೂರನೇ ದಿನ ನ್ಯಾಯಾಲಯ ಹೇಳಿದೆ. ಬಹುಶಃ ಅದಕ್ಕೆ ರಾಜ್ಯದಲ್ಲಿ ರಾಜಕೀಯ ಸ್ಥಿತಿ ಅನಿಶ್ಚಿತವಾಗಿದೆ ಎಂದು ಮನವರಿಕೆ ಮಾಡಿಕೊಳ್ಳಲು ಇಷ್ಟು ಅವಧಿ ಬೇಕಾಯಿತೆಂದು ಕಾಣುತ್ತದೆ. ನ್ಯಾಯಾಲಯಗಳ ವಿಧಾನಗಳೇ ಹಾಗೆ. ಆದರೆ ಈ ವಿಧಾನಗಳೇ ದುಷ್ಟ ರಾಜಕಾರಣಿಗಳಿಗೆ ವರವಾಗಿದೆ ಎಂಬುದು ಬೇರೆ ವಿಷಯ. ಹಾಗಾಗಿ ಈ ತೀರ್ಪಿನಲ್ಲಿ ಯಾವ ಸಡಿಲ ಕುಣಿಕೆಗಳನ್ನು ನಮ್ಮ ರಾಜಕಾರಣಿಗಳು ಸ್ಪರ್ಧಾತ್ಮಕ ದರಗಳಿಗೆ ಮಾರಾಟಕ್ಕಿರುವ ವಕೀಲ ವೃಂದದ ಪ್ರಚಂಡ ಬುದ್ಧಿಮತ್ತೆಯ ನೆರವಿನಿಂದ ಅವನ್ನು ತೆಗೆದು ನಮ್ಮ ಪ್ರಜಾಪ್ರಭುತ್ವದ ಕುತ್ತಿಗೆಗೆ ತೊಡಿಸುವರೋ ಎಂಬುದನ್ನು ಕಾದು ನೋಡಬೇಕಾಗಿದೆಯಾದರೂ ಈ ತೀರ್ಪು ಸದ್ಯಕ್ಕಾದರೂ ಬಿಜೆಪಿಯ ನಿರ್ಲಜ್ಜ ರಾಜಕಾರಣಕ್ಕಾಗಿ ಅದಕ್ಕೆ ಕಪಾಳ ಮೋಕ್ಷ ಮಾಡಿದೆ ಎಂದು ಹೇಳಬಹುದು. ಅದೇ ವೇಳೆಯಲ್ಲಿ ಈ ರಾಜ್ಯದಲ್ಲಿ ಶಿವಸೇನಾ-ಎನ್‌ಸಿಪಿ-ಕಾಂಗ್ರೆಸ್‌ಗಳ ಹೊಸ ತ್ರಿಪಕ್ಷ ಕೂಟದ ಸರ್ಕಾರ ರಚನೆಯಾದರೂ ಅದು ಎಷ್ಟು ದಿನ ಉಳಿಯುವುದೋ ಎಂಬ ಸಂದೇಹವೂ ಇದೆ. ಏಕೆಂದರೆ, ಈ ಪಕ್ಷಗಳು ತಮ್ಮ ಶಾಸಕರನ್ನು ಬಹುಮತ ಪರೀಕ್ಷೆಗಾಗಿ ಕುರಿ ಮಂದೆಯಂತೆ ರೆಸಾರ್ಟು-ಹೋಟೆಲ್‌ಗಳೊಳಗೆ ಕೂಡಿಟ್ಟುಕೊಳ್ಳಬೇಕಾದ ಪರಿಯೇ ಇಂದಿನ ರಾಜಕಾರಣದ ಎಲ್ಲ ಪರಿಯನ್ನೂ ಹೇಳುವಂತಿದೆ. ಕರ್ನಾಟಕದಲ್ಲಿ ಏನಾಯಿತು ಎಂಬುದನ್ನು ಎಲ್ಲರೂ ಬಲ್ಲರು. ಇದಕ್ಕೆ ಮೂಲತಃ ಕಾಂಗ್ರೆಸ್ ಮತ್ತು ಅದೇ ಸಂಸ್ಕೃತಿಯ ಅದರ ಸೋದರ ಪಕ್ಷಗಳು ತಾತ್ವಿಕವಾಗಿ ದಿವಾಳಿ ಎದ್ದು ಅವೀಗ ಎಲ್ಲ ತರಹದ ಜನರ ಆಶ್ರಯದಾಣಗಳಾಗಿರುವುದೇ ಕಾರಣವಾಗಿದೆ ಎಂದು ಹೇಳಬಹುದಾದರೂ,ೂ ಬಿಜೆಪಿ ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಮ್ಮ ಪ್ರಜಾಪ್ರಭುತ್ವದ ಅಡಿಗಲ್ಲುಗಳಿಗೇ ಕೈ ಹಾಕಿರುವುದು ಒಂದು ಅಕ್ಷಮ್ಯ ಅಪರಾಧವೇ ಆಗಿದೆ. ಅದು ಒಂದು ಕಡೆ 'ಕಾಂಗ್ರೆಸ್ ಮುಕ್ತ ಭಾರತ'ದ ಮಾತನಾಡುತ್ತಾ ನಡೆಯಲ್ಲಿ ಕಾಂಗ್ರೆಸ್‌ನ ಹಾದಿಯನ್ನೇ ಹಿಡಿದಿರುವುದು ನಿರ್ಲಜ್ಜೆಯ ಪರಮಾವಧಿಯೇ ಆಗಿದೆ.

ಎಲ್ಲೆಲ್ಲೂ ಇಂತಹ ನಿರ್ಲಜ್ಜೆ ತಾಂಡವವಾಡುತ್ತಿರುವಾಗ ಸಾರ್ವಜನಿಕ ಬದುಕಿನಲ್ಲಿ ಏನು ಬೇಕಾದರೂ ಆಗಬಹುದು. ಏಕೆಂದರೆ ನಿರ್ಲಜ್ಜೆ ಎಂದರೆ ನೈತಿಕತೆಯನ್ನು ಕಾಪಾಡಬೇಕಾದ ಮನಸ್ಸಾಕ್ಷಿಯನ್ನು ಅಮಾನತ್ತಿನಲ್ಲಿಡಲಾಗಿದೆ ಎಂದೇ ಅರ್ಥ. ಚುನಾವಣೆ ಆದ ಒಂದೂವರೆ ವರ್ಷದಲ್ಲೇ ನಮ್ಮ ಶಾಸಕರು ತಮ್ಮ ಪಕ್ಷಗಳನ್ನು ತೊರೆದು ಹಿಂದೆ ಯಾವ ಪಕ್ಷದ ವಿರುದ್ಧ ಸ್ಪರ್ಧಿಸಿದ್ದರೋ ಅದೇ ಪಕ್ಷದ ಹುರಿಯಾಳಾಗುತ್ತಿದ್ದಾರೆ ಮತ್ತು ಸಂವಿಧಾನದಲ್ಲಿ ಇದಕ್ಕೆ ಅವಕಾಶವಿದೆ ಎಂದು ಸರ್ವೋಚ್ಚ ನ್ಯಾಯಾಲಯ ಭಾವಿಸುತ್ತದೆ ಹಾಗೂ ಇದರಲ್ಲಿ ಹಲವರಾದರೂ ಮತ್ತೆ ಗೆದ್ದು ಬರಲಿದ್ದಾರೆ ಎಂಬ ಸಂಗತಿಯೇ ಈ ದುರಂತದ ಎಲ್ಲ ಪಕ್ಕಗಳನ್ನು ಬಿಚ್ಚಿಡುತ್ತಿದೆ..

ಇದಕ್ಕೆ ಕಾರಣ, ನಾವು ಸಾರ್ವಜನಿಕ ಬದುಕನ್ನು ಅಕ್ಷರಗಳಲ್ಲಿ ಬರೆದಿಟ್ಟ ಕಾನೂನುಗಳ ಆಟವೆಂದೇ ಬಗೆದಿರುವುದು. ಹಾಗಾಗಿಯೇ ಎಲ್ಲರೂ ಅನೈತಿಕತೆ ಎಂಬುದು ಒಂದು ಮನದ ಕಲ್ಪನೆ ಮಾತ್ರ ಎಂಬಂತೆ ಏನು ಕೇಳಿದರೂ ಇದರಲ್ಲಿ ತಪ್ಪೇನಿದೆ ಎಂದು ಹೇಳಿ, ಅವರದೇ ತರ್ಕದಿಂದ ನಿಮ್ಮನ್ನು ದಂಗುಬಡಿಸುತ್ತಾರೆ. ಇದರಿಂದ ತಲೆಕೆಟ್ಟು ನೀವೇನಾದರೂ ನ್ಯಾಯಾಲಯಕ್ಕೆ ಹೋದರೆ ಅದು ಈಗ ತಾನೇ ಹೇಳಿದಂತೆ ತನ್ನದೇ ಮಹಾತರ್ಕದಿಂದ ನಿಮ್ಮನ್ನು ಇನ್ನಷ್ಟು ದಂಗುಬಡಿಸಬಹುದು! ಇದು ಮಾನವ ಸತ್ವದ ಮೂಲ ಸ್ರೋತವಾದ ಮನಸ್ಸಾಕ್ಷಿ ಎಂಬುದನ್ನು ಒಂದುಅಮೂರ್ತ ಅಪಾಯವೆಂದು ಭಾವಿಸಿ ಅದು ನಿರ್ಧರಿಸಬೇಕಾದ ಸರಿ ತಪ್ಪುಗಳೆಂಬ ನೈತಿಕತೆಯ ಪರೀಕ್ಷೆಯನ್ನು ಒಣ ತರ್ಕವನ್ನವಲಂಬಿಸಿದ ಕಾನೂನುಗಳೆಂಬ ಒರೆಗಲ್ಲಿಗೆ ಒಪ್ಪಿಸಿರುವುದು. ಈ ಕಾನೂನುಗಳನ್ನು ರೂಪಿಸಿದ ಹಿರಿಯರು ತಮ್ಮ ಮುಂದಿನ ಜನಾಂಗ ಮಾನವ ಘನತೆಗೆ ಸಂಬಂಧಿಸಿದ ಎಲ್ಲ ಮಾನ ಮರ್ಯಾದೆಗಳನ್ನೂ ತ್ಯಜಿಸಿ ಕೇವಲ ಕಾನೂನಿನ ಅಕ್ಷರಾರ್ಥಗಳ ಮಧ್ಯೆ ಆಶ್ರಯ ಪಡೆಯುವಷ್ಟು ದುಷ್ಟರಾಗುತ್ತಾರೆ ಎಂದು ಊಹಿಸಿರಲಾರರು.

ಆದರೆ ಎಲ್ಲ ಊಹೆಗಳೂ ತಲೆಕೆಳಗಾಗುತ್ತಿರುವ ದಿನಗಳಿವು. ಇದಕ್ಕೆ ಬಹು ಮುಖ್ಯ ಕಾರಣ, ನಮ್ಮ ಸಾರ್ವಜನಿಕ ಜೀವನದಲ್ಲಿ ಹಡಬೆ ಹಣದ ಆಟ ಎಲ್ಲ ಮಿತಿಗಳನ್ನೂ ದಾಟಿ ಹೋಗಿರುವುದು. ಈ ಹಡಬೆ ಹಣ ಎಲ್ಲಿಂದ, ಯಾವಾಗಿನಿಂದ ಹರಿಯತೊಡಗಿತು ಎಂದು ಯೋಚಿಸಿದಾಗ ಗೊತ್ತಾಗುವುದು, ಮುಕ್ತ ಮಾರುಕಟ್ಟೆಯ ಆರ್ಥಿಕತೆಗೆ ಬಾಗಿಲು ತೆರೆದಾಗಿನಿಂದ ಇದು ಅಲ್ಲಲ್ಲಿ ಮಡುಗಟ್ಟುತ್ತಾ ಬಂದು ಈಗ ಎಲ್ಲೆಂದರಲ್ಲಿ ಚೆಲ್ಲಾಡುತ್ತಿದೆ; ಅಯೋಗ್ಯರ ಕೈಗೆ ಮಿತಿಯಿಲ್ಲ ಹಣ ಹೋಗಿದೆ ಎಂದು,

ಸಂಪತ್ತಿಗೂ ನೈತಿಕತೆಗೂ ಸಂಬಂಧವಿದೆ ಎಂಬುದು ಹಳೆಯ ಮಾತು. ನೈತಿಕತೆ ಎಂಬುದು ಸಮಾಜವೊಂದರ ಶಾಂತಿ-ಸುಸ್ಥಿರತೆಗಳನ್ನು ಕಾಪಾಡಿಕೊಳ್ಳಲು ಮಾನವ ಕುಲ ಕಾಲಾನುಕಾಲದಿಂದ ಮನದಟ್ಟು ಮಾಡಿಕೊಂಡು ಬಂದಿರುವ ಒಂದು ಮೌಲ್ಯ ವ್ಯವಸ್ಥೆ. ಅಂದರೆ ಮಾನವ ಸಮಾಜದ ಶಾಂತಿ ಮತ್ತು ಸುವ್ಯವಸ್ಥೆ ಎಂಬುದು ಮೂಲದಲ್ಲಿ ಮತ್ತು ನಿಜಾರ್ಥದಲ್ಲಿ ಅವನ ಮನಸ್ಸಿನ ಸುವ್ಯವಸ್ಥೆಗೆ ಸಂಬಂಧಪಟ್ಟ ವಿಷಯ. ಹಾಗಾಗಿಯೇ ನಮ್ಮ ಎಲ್ಲ ಪೂರ್ವವಿವೇಕ ಮನದ ನಿಯಂತ್ರಣದ ಮಹತ್ವದ ಬಗ್ಗೆ ಹೇಳುತ್ತಿತ್ತು. ಮನದ ಹರಿವಿನ ಶಕ್ತಿ ಅನಂತವಾದದ್ದಾಗಿದ್ದು, ಒಂದು ಮಿತಿಯಲ್ಲಿ ಅದನ್ನು ನಿಯಂತ್ರಿಸದಿದ್ದರೆ ಅದು ಅದರ ಒಡೆಯನನ್ನೇ ಕೊಚ್ಚಿಕೊಂಡು ಹೋಗುತ್ತದೆ ಎಂದೂ ಅದು ಹೇಳಿತ್ತು. ಆದರೆ ಆಧುನಿಕತೆಯ ಹೆಸರಿನಲ್ಲಿ ನಾವು ಆಹ್ವಾನಿಸಿದ್ದು ಮನದ ಸ್ವಚ್ಛಂದತೆಯನ್ನು. ಅದು ಇಂದು ಬೆಳೆದು ಮುಕ್ತ ಮಾರುಕಟ್ಟೆ ಎಂಬ ಆರ್ಥಿಕ ಪರಿಭಾಷೆಯಲ್ಲಿ ಸುಖದ ಹೊಸ ಶಬ್ದಕೋಶವೊಂದನ್ನು ರಚಿಸಿಕೊಂಡು ಎಲ್ಲಕ್ಕೂ ಒಂದು ಅರ್ಥ ಮಾನ್ಯತೆಯನ್ನು ದೊರಕಿಸಿಕೊಟ್ಟಿದೆ. ಹಾಗಾಗಿ ಯಾರೂ, ಏನು ಮಾಡಲು ಹೇಸರು. ಭೋಗಕ್ಕೆ ಮಿತಿಯೇ ಇಲ್ಲದಾಗಿದೆ. ಈ ಕಾರಣದಿಂದಲೇ ಜಗತ್ತು ಪ್ರಾಕೃತಿಕ ಪ್ರಳಯಕ್ಕೆ ಸಿಕ್ಕಿ ಮನುಷ್ಯನ ಬದುಕು ಮೂರಾಬಟ್ಟೆಯಾಗಲಿದೆ ಎಂದು ಪರಿಸರ ವಿಜ್ಞಾನಿಗಳು ಪದೇ ಹೇಳುತ್ತಿದ್ದರೂ ಜನಕ್ಕೆ ಅದು ಕೇಳದಾಗಿದೆ. ಸಮಾಜದ ಚಿಂತನಾಕ್ರಮವೇ ಅದರ ಮೌಲ್ಯ ವ್ಯವಸ್ಥೆಯೇ ಒಂದು ದೊಡ್ಡ ಬಿಕ್ಕಟ್ಟಿಗೆ ಒಳಗಾಗಿದೆ.

ಸಮಾಜದ ಭಾಗವೇ ಆಗಿರುವ ನಮ್ಮ ನ್ಯಾಯಾಂಗವೂ ಈ ಬಿಕ್ಕಟ್ಟಿನಿಂದ ಹೊರತಾಗಿರಲು ಹೇಗೆ ಸಾಧ್ಯ? ಈ ದೃಷ್ಟಿಯಿಂದ ನಮ್ಮ ಸರ್ವೋಚ್ಚ ನ್ಯಾಯಾಲಯ ಪಕ್ಷಾಂತರ, ರಾಮಜನ್ಮಭೂಮಿ-ಬಾಬ್ರಿ ಮಸೀದಿ ಮತ್ತು ಶಬರಿಮಲೈ ದೇವಾಲಯ ಪ್ರವೇಶಗಳಿಗೆ ಸಂಬಂಧಪಟ್ಟಂತೆ ನೀಡಿರುವ ಇತ್ತೀಚಿನ ತೀರ್ಪುಗಳು ಚರ್ಚೆಗೆ ಒಳಗಾಗಿರುವುದು ಸಹಜವೇ ಆಗಿದೆ. ಈ ಚರ್ಚೆಗೆ ಕಾರಣವಾಗಿರುವುದು ಈ ಚರ್ಚೆಗಳೇ ಎತ್ತಿ ತೋರಿಸುತ್ತಿರುವ ಅವುಗಳಲ್ಲಿನ ವಿರೋಧಾಸಗಳು. ನಮ್ಮ ನ್ಯಾಯಾಲಯಗಳಿಗೆ ಸುಸಂಬದ್ಧ ತೀರ್ಪುಗಳನ್ನು ನೀಡುವುದು ಕಷ್ಟವಾಗುತ್ತಿದ್ದಂತೆ ತೋರುತ್ತದೆ. ಇದೆಲ್ಲವೂ ಕಾನೂನುಗಳಿಂದಷ್ಟೇ ರಾಜ್ಯವಾಳಬಹುದೆಂಬ ಕಲ್ಪನೆಯ ಕಾಲ ಮುಗಿಯುತ್ತಿದೆ ಎಂದು ಸೂಚಿಸುತ್ತಿರುವಂತಿದೆ. ಹಾಗಾಗಿ ಮುಂದೇನು ಎಂಬ ಪ್ರಶ್ನೆಯನ್ನು ಎದುರಿಸುತ್ತಲೇ ನಾವೆಲ್ಲ ೨೦೨೦ರ ಹೊಸ ವರ್ಷವನ್ನು ಸ್ವಾಗತಿಸಬೇಕಿದೆ.

**-ಸಂಪಾದಕ**

# ಅಗಲಿದ ಹಿರಿಯ ಸಮಾಜವಾದಿ ವೈಜನಾಥ ಪಾಟೀಲ : ಒಂದು ನೆನಪು



ಅಸಮಾನತೆ, ಜಾತೀಯತೆಯ ವಿರುದ್ಧ ಸದಾ ಸಿಡಿದೆದ್ದು ನಿಲ್ಲುತ್ತಿದ್ದ ಸಮಾಜವಾದಿ, ವೈಜನಾಥ ಪಾಟೀಲರ ಅಗಲಿಕೆ ನಿಜಾರ್ಥದಲ್ಲಿ ಕಲ್ಯಾಣ ಕರ್ನಾಟಕಕ್ಕೆ ತುಂಬಲಾರದ ನಷ್ಟ. ಬೀದರಿನ ಹಕ್ಯಾಳದ ಗೌಡಿಕೆ ಮನೆತನದಲ್ಲಿ ಹುಟ್ಟಿದ್ದರೂ ಅವರು ಅಪ್ಪಟ ಸಮಾಜವಾದಿಯಾಗಿ ರೂಪುಗೊಂಡಿದ್ದರು. ಉದ್ದು, ತೊಗರಿ ಬೆಳೆವ ಬೀದರಿನ ಪರಿಸರವೇ ಹಾಗೆ. ಸಮಾನತೆಯನ್ನಾಧರಿಸಿದ ಸಮಾಜದಲ್ಲಿ ಮಾತ್ರ ಮನುಷ್ಯ ಘನತೆಯಿಂದ ಬದುಕಬಲ್ಲ ಎಂದು ಸಾರಿದ ಬಸವಣ್ಣನ ವೈಚಾರಿಕ ಕ್ರಾಂತಿಯ ಹಿನ್ನೆಲೆಯ ಈ ಭಾಗಕ್ಕೆ ಲೋಹಿಯಾ ಚಿಂತನೆಗಳು ಅಪ್ಯಾಯಮಾನವೆನಿಸಿರಬೇಕು. ಈ ಗಟ್ಟಿ ಭೂಮಿಯಲ್ಲಿ ಆರ್.ವಿ. ಬಿಡಪ್, ಕಾಶಿನಾಥರಾವ್ ಬೇಲೂರೆ, ದಯಾನಂದರಾವ್, ಹೀರಾಚಂದ್ ವಾಗ್ಮಾರೆ, ಕಿಶನ್ ರಾವ್, ವೈಜನಾಥ ಪಾಟೀಲ್ ಮುಂತಾದವರು ಸಮಾಜವಾದಿ ಚಳುವಳಿಯಲ್ಲಿ ಸಕ್ರಿಯರಾಗಿದ್ದರು.

ಲಾತೂರಿನಲ್ಲಿ ಮರಾಠಿಯಲ್ಲಿ ಓದುತ್ತಿದ್ದಾಗ ಕನ್ನಡ ನಾಡಹಬ್ಬವನ್ನು ಸಂಘಟಿಸುತ್ತಿದ್ದ ತಮ್ಮನ್ನು ಗುರುತಿಸಿದ ಭಾಲ್ಕಿಯ ಚನ್ನಬಸವ ಪಟ್ಟದ್ದೇವರು ಭಾಲ್ಕಿಗೆ ಕರೆತಂದು ಕನ್ನಡದಲ್ಲಿ ಕಲಿಯುವಂತೆ ಮಾಡಿದ್ದನ್ನು ನನ್ನೊಂದಿಗೆ ತುಂಬ ಕೃತಜ್ಞತೆಯಿಂದ ನೆನೆಯುತ್ತಿದ್ದ ವೈಜನಾಥರು ನಂತರ ಕಾನೂನು ಶಿಕ್ಷಣ ಪೂರೈಸಿ ವಕೀಲಿ ವೃತ್ತಿಯ ಮೂಲಕ ರಾಜಕೀಯಕ್ಕೆ ಧುಮಕಿದರು. ಒಂದು ಅವಧಿಗೆ ಶಿಕ್ಷಕರ ಕ್ಷೇತ್ರದಿಂದ ಪರಿಷತ್ತಿಗೆ, ಎರಡು ಅವಧಿಗಳಿಗೆ ವಿಧಾನಸಭೆಗೆ ಆರಿಸಿ ಬಂದು, ಎರಡು ಬಾರಿ ಮಂತ್ರಿಯೂ ಆದರು. ಹೆಗಡೆ ಸರ್ಕಾರದಲ್ಲಿ ಸಚಿವರಾದಾಗ ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಆ ಭಾಗದ ಶಿಕ್ಷಕರ ವೇತನ ತಾರತಮ್ಯವನ್ನು ಸರಿಪಡಿಸಿದರು. ಪ್ರಾದೇಶಿಕ ಅಸಮಾನತೆಯ ನಿವಾರಣ ಕ್ರಮಕ್ಕೆಗೊಳ್ಳಲು ಸರ್ಕಾರ ಸ್ಪಂದಿಸದಿದ್ದಾಗ, ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರದಲ್ಲೇ ಹೈದರಾಬಾದಿನ ಸಮಾಜವಾದಿ ಚಿಂತಕ ಕೇಶವರಾವ್ ಜಾಧವ್ ಅವರ ಮಾರ್ಗದರ್ಶನದಲ್ಲಿ, ವಿದರ್ಭ, ತೆಲಂಗಾಣ ಪ್ರದೇಶಗಳನ್ನು ಸುತ್ತಿ ಅಧ್ಯಯನ ಮಾಡಿ ಪ್ರಾದೇಶಿಕ ತಾರತಮ್ಯಗಳ ನಿವಾರಣೆಗೆ ಸಂಬಂಧಿಸಿದ ವರದಿ ಸಿದ್ಧಪಡಿಸಿ ವಿಧಾನಸಭೆಯಲ್ಲಿ ಖಾಸಗಿ ಮಸೂದೆ ಮಂಡಿಸಿದರು. ಸರ್ಕಾರ ಸ್ಪಂದಿಸದಿದ್ದಾಗ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ರಚಿಸಿಕೊಂಡು ನಿರಂತರ ಮೂರು ದಶಕಗಳ ಕಾಲ ಹೋರಾಡಿ ಯಶಸ್ಸನ್ನು ಸಾಧಿಸಿದ್ದು ಈಗ ಇತಿಹಾಸ. ದೌರ್ಜನ್ಯ–ದಬ್ಬಾಳಿಕೆಯ ವಿರುದ್ಧ ಸಿಡಿದು ನಿಲ್ಲುತ್ತಿದ್ದ ವೈಜನಾಥರು ಆಳಂದದ ಕಮಲಾಕರ್ ಲಾಕಪ್ ಡೆತ್ ಪ್ರಕರಣದ ವಿರುದ್ಧ ಹೋರಾಡಿದ್ದು ಇನ್ನೂ ಆ ಭಾಗದ ಜನ ಮರೆತಿಲ್ಲ.

ಒಂದೆರಡು ಸಂದರ್ಭಗಳಲ್ಲಿ ಎಡಬಿಡಂಗಿಯಾಗಿ ಪಕ್ಷ ಬದಲಾಯಿಸಿದರಾದರೂ, ಅದಕ್ಕೆ ಜನಸೇವೆಯು ಕಾರಣವಾಗಿತ್ತೇ ಹೊರತು ಸ್ವಾರ್ಥ ಇರಲಿಲ್ಲ. ಇದೇ ಸೆಪ್ಟಂಬರ್ ೨೨ರಂದು ಕಲಬುರ್ಗಿಯಲ್ಲಿ ಜಿಲ್ಲಾ ಕ.ಸಾ.ಪ. ಏರ್ಪಡಿಸಿದ್ದ "ಮನದಾಳದ ಮಾತು" ಕಾರ್ಯಕ್ರಮದಲ್ಲಿ ಅನಾರೋಗ್ಯದ ಮಧ್ಯೆಯೂ ಗಾಲಿ ಖುರ್ಚಿಯಲ್ಲೇ ಕುಳಿತು ಒಂದೂವರೆ ತಾಸು, ಪ್ರಾದೇಶಿಕ ತಾರತಮ್ಯ ನಿವಾರಣೆಗಾಗಿ ೩೭೧ (ಜೆ) ಜಾರಿಗೆ ಬಂದಿದ್ದರೂ ಸಮರ್ಪಕವಾಗಿ ಜಾರಿಯಾಗದಿರುವುದು, ಕೇಂದ್ರ ಸರ್ಕಾರ, ವಿಧರ್ಭ– ತೆಲಂಗಾಣಗಳಿಗೆ ಕೊಟ್ಟಿರುವ ಅನುದಾನದಂತೆ ನಮ್ಮ ರಾಜ್ಯಕ್ಕೆ ಕೊಡುತ್ತಿಲ್ಲವೆಂದು ಎಳೆಎಳೆಯಾಗಿ ವಿವರಿಸಿದ್ದನ್ನು ಮರುದಿನದ ಪತ್ರಿಕೆಯಲ್ಲಿ ಓದಿ ಅಭಿಮಾನದಿಂದ ಅಭಿನಂದಿಸಿದೆ. ಕನ್ನಡದ ಪ್ರಪ್ರಥಮ ಲಾಕ್ಷಣಿಕ ಕೃತಿ "ಕವಿರಾಜ ಮಾರ್ಗ" ಹುಟ್ಟಿದ, ಕಾಯಕದ ಮೂಲಕ ಛಲದಿಂದ ಬದುಕನ್ನು ಕಟ್ಟಿಕೊಳ್ಳುವಂತೆ ಬೋಧಿಸಿದ ಶರಣರ ಈ ಪ್ರದೇಶದಲ್ಲಿ ೩೭೧ ಮೀಸಲಾತಿ ದೀರ್ಘಕಾಲ ಇರುವುದು ಅಪಮಾನಕರ ಎಂದು ಭಾವಿಸಿ ನಾಡ ನಾಳುವವರು ಅಸಮಾನತೆ ಇಲ್ಲವಾಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದೇ ವೈಜನಾಥರಿಗೆ ಸಲ್ಲಿಸುವ ಗೌರವ.

**–ಸಿ. ಚನ್ನಬಸವಣ್ಣ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಎಂದಿನಂತೆ ನವೆಂಬರ್ ಸಂಚಿಕೆಯಲ್ಲಿನ ನಿಮ್ಮ ಸಂಪಾದಕೀಯ ಟಿಓಣಿಗಳು ಸಮತುಲಿತವಾಗಿದ್ದು, ಆದುದದರಿಂದ ಪರಿಣಾಮಕಾರಿಯೂ ಆಗಿದೆ. ಇಂದು ಬಿಜೆಪಿ ಅಥವಾ ಸಂಘ ಪರಿವಾರವನ್ನು ದೂಷಿಸಿ ಪ್ರಯೋಜನವಿಲ್ಲ. ಏಕೆಂದರೆ ಅವರಿಗೆ ದಾರಿ ಮಾಡಿಕೊಟ್ಟದ್ದೇ ಕಾಂಗ್ರೆಸ್ಸಿಗರ ದುರಾಚಾರಗಳ ರಾಜಕಾರಣ. ಇಂದು ಕೂಡ ಅವರು ಯಾವ ಪಾಠವನ್ನೂ ಕಲಿತಂತಿಲ್ಲ. ಹಾಗಾಗಿಯೇ ದೇಶದ ಮೇಲಿನ ಮೋದಿ–ಶಾ ಅವರ ಬಿಗಿಮುಷ್ಟಿಗೆ ಬಾಧಕವಿಲ್ಲದಾಗಿದೆ. ಕಾಶ್ಮೀರದ ಜನತೆಯ ಅಳಲಿಗೆ ಪರಿಹಾರವೇ ಇಲ್ಲದಂತಾಗಿದೆ. ಗಣೇಶ್ ದೇವಿ ಮತ್ತು ಪ್ರಭಾತ್ ಪಟ್ನಾಯಕ್ ಅವರ ಲೇಖನಗಳೂ ಇದನ್ನೇ ತಮ್ಮದೇ ರೀತಿಯಲ್ಲಿ ವಿವವರಿಸಿವೆ. ಇವುಗಳ ಅನುವಾದಗಳೂ ಚೆನ್ನಾಗಿದ್ದು, ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು

**–ಆರ್. ದೇವರಾಜು,** ದಾವಣಗೆರೆ

ನವೆಂಬರ್ ತಿಂಗಳಿನ ಸಂಚಿಕೆಗೆ ಧರ್ಮವಿಚಾರ ಪುಟಕ್ಕಾಗಿ ಕನ್ನಡ ಧರ್ಮವೆಂಬ ವಿಷಯ ಆರಿಸಿದ್ದು ಮೆಚ್ಚುಗೆಯ ಸಂಗತಿಯಾದರೂ, ಅದರಲ್ಲಿ ಅಲ್ಲಮ, ರಾಘವಾಂಕ, ಸರ್ವಜ್ಞ, ನಿಜಗುಣ ಶಿವಯೋಗಿ, ಮಾಸ್ತಿ, ಬೇಂದ್ರೆ, ಕಾರಂತರ ವಿಚಾರಗಳಿಗೆ ಎಡೆಯಿಲ್ಲದೆ ಅದು ಅಪೂರ್ಣವೂ, ಸ್ಥೂಲವೂ ಆಗಿದೆ. ಕೆಲವು ಉಲ್ಲೇಖಗಳು ಉದಾ: ವಚನ, ಶಾಸನ ಮತ್ತು ದಾಸರ ಪದ ನೀತಿ ಮಾತುಗಳಂತಿದ್ದು, ಧರ್ಮದ ಚೌಕಟ್ಟಿಗೆ ಬಾರದವಾಗಿವೆ

ಇದೇ ಸಂಚಿಕೆಯಲ್ಲಿನ ನಿಮ್ಮ 'ಮೊಲೆಹಾಲು ನಂಜಾಗಿ, ತಾಯ್ನುಡಿಗೆ ಸೋಂಕಾಗಿ...' ಬರಹ ಕನ್ನಡವನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ನಿರ್ಣಾತಕವಾಗಿ ಎರಡನೇ ದರ್ಜೆಯ ಭಾಷೆಯಂತೆ ಕೆಳಕ್ಕೆ ತಳ್ಳುವ ಕಾರ್ಯಾಚರಣೆ ನಡೆಸಿದ ಬೆಂಗಳೂರಿನ ಕೆಲ ಬುದ್ಧಿಜೀವಿಗ:ಳ ಮತ್ತು ರಾಜ್ಯಾದ್ಯಂತ ಇರುವ ಅವರ ಚೇಲಾಗಳ ಖೂಳತನವನ್ನು ಮಾರ್ಮಿಕವಾಗಿ ಹೇಳುತ್ತದೆ. ನೀವು ಹೇಳಿದಂತೆ ಕನ್ನಡ ಮಾಧ್ಯಮದ ಪ್ರಶ್ನೆ ಇನ್ನೂ ಅಂತಿಮವಾಗಿ ಬಗೆಹರಿದಿಲ್ಲ ಎಂಬ ಅರಿವನ್ನು ಮನದಟ್ಟು ಮಾಡಿಕೊಂಡೇ ನಾವು ಕನ್ನಡಪರ ಹೋರಾಟವನ್ನು ಮುಂದುವರೆಸಬೇಕಿದೆ. ಈ ಸಂಬಂಧವಾಗಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಹಲವು ಚಿಂತಕರ ಅಭಿಪ್ರಾಯ ಮತ್ತು ನಿಲುವುಗಳೇ ನಮಗೆ ಸ್ಫೂರ್ತಿಯಾಗಬೇಕು.

. – **–ಎನ್. ಆರ್.ಅಶೋಕಕುಮಾರ್,** ಹೊಸಪೇಟೆ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಸವಿತಾ ನಾಗಭೂಷಣ ಅವರ 'ಅತಿ ಸಣ್ಣ ಕಥೆಗಳು' ಹಲವು ಪುಟಗಳ ಬರಹ ಹೇಳಲಾರದ್ದನ್ನು ಮನಮುಟ್ಟುಂತೆ ಹೇಳಿವೆ. ಲೇಖಕಿಗೆ ಅಭಿನಂದನೆಗಳು,

**–ಅಶ್ವಥ್ ಶಿಕಾರಿಪುರ,** ಬೆಂಗಳೂರು

ಕಳೆದ ಸಂಚಿಕೆಯಲ್ಲಿ ನೀನಾಸಂ ಸಂಸ್ಕೃತಿ ಶಿಬಿರ ಮತ್ತು ಅದರಲ್ಲಿ ಪ್ರದರ್ಶಿತವಾದ ಎರಡು ನಾಟಕಗಳ ಬಗ್ಗೆ ನೀವು ಬರೆದಿರುವುದು ಸರಿಯಾಗಿದೆ. ಕನ್ನಡ ರಂಗಭೂಮಿಯಲ್ಲಿ ಇತ್ತೀಚೆಗೆ ನಾವು ನೋಡುತ್ತಿರುವ ಪ್ರಯೋಗಗಳು ಯಕ್ಷಗಾನ ರೂಪ ಪಡೆಯುತ್ತಿರುವುದು ಒಳ್ಳೆಯದಲ್ಲ. ಎಲ್ಲ ತಂತ್ರಗಳನ್ನೂ ಮೀರಿ ನಾಟಕಗಳು ನಾಟಕಗಳಂತಿರಬೇಕು.

**–ಜಯರಾಮ ಪಾಟೀಲ,** ಹದಜನ (ಮೈಸೂರು ಜಿಲ್ಲೆ)

ಪುಸ್ತಕಾವಲೋಕನನ ಪುಟದಲ್ಲಿ ನನ್ನ 'ಗಾಂಧಿ ಕಥನ' ಪುಸ್ತಕದ ವಿಮರ್ಶೆ ಮಾಡಿರುವ ಲಕ್ಷ್ಮೀಶ ತೋಳ್ಪಾಡಿಯವರು ಪುಸ್ತಕವನ್ನು ಬಹುವಾಗಿ ಮೆಚ್ಚುತ್ತಲೇ ಹೇಳಿರುವಂತೆ ಪುಸ್ತಕದಲ್ಲಿ ಹಲವು ದೋಷಗಳು–ಮುಖ್ಯವಾಗಿ ವಾಕ್ಯ ರಚನೆಯ, ಸಂಸ್ಕೃತ ಶ್ಲೋಕವೊಂದರ ಮತ್ತು ಕರಡು ತಿದ್ದುಪಡಿಯ– ಹಲವು ದೋಷಗಳು ನುಸುಳಿರುವುದು ನಿಜ. ಈ ಸೂಚನೆಗಾಗಿ ಅವರಿಗೆ ಕೃತಜ್ಞ ಮತ್ತು ಅವರ ಆಶಯದಂತೆಯೇ ಕೃತಿಯ ಪರಿಷ್ಕೃತ ಆವೃತ್ತಿಯಲ್ಲಿ ಅವನ್ನೆಲ್ಲ ಸರಿಪಡಿಸಲಾಗುವುದು. ಆದರೆ ಕೆಲವೆಡೆ ಹೆಚ್ಚಿನ ವಿವರಣೆ ಅಗತ್ಯವಿತ್ತು, ಅದನ್ನು ನೀಡಲು ಲೇಖಕರು ಸಮರ್ಥರಿದ್ದರೂ ಏಕೋ ನೀಡಿಲ್ಲ ಎಂದು ಅವರು ಒಂದು ಉದಾಹರಣೆ ಸಹಿತ ತಮ್ಮ ಮಾತನ್ನು ವಿವರಿಸಿದ್ದಾರೆ. ಆದರೆ ತಪ್ಪು ತಿಳುವಳಿಕೆಗೆ ಕಾರಣವಾಗಬಹುದೆಂಬ ಸಂದೇಹ ಹುಟ್ಟಿಸುವ ಸಂದರ್ಭಗಳ ಹೊರತಾಗಿ, ಇಂತಹ ಹೆಚ್ಚುವರಿ ವಿವರಣೆ ಪುಸ್ತಕ ರಚನೆಯ ಉದ್ದೇಶವನ್ನೇ ಭಂಗಗೊಳಿಸುತ್ತದೆ ಎಂಬ ಎಚ್ಚರದಿಂದ ಅದಕ್ಕೆ ನಾನು ಕೈಹಾಕಿಲ್ಲವಷ್ಟೆ.

ಇನ್ನು ಲಕ್ಷ್ಮೀಶರು ಒಂದು ಇಂಗ್ಲಿಷ್ ವಾಕ್ಯದ ಅನುವಾದ ಅರ್ಥವಾಗದಂತಿದೆ ಎಂದು ನನ್ನ ಪುಸ್ತಕದಲ್ಲಿನ ಒಂದು ವಾಕ್ಯವನ್ನು ಉಲ್ಲೇಖಿಸುವಾಗ ಅವರೇ ಒಂದರಡು ತಪ್ಪುಗಳನ್ನೆಸಗಿದ್ದಾರೆ. ಆ ಉಲ್ಲೇಖ ನನ್ನ ಪುಸ್ತಕದಲ್ಲಿ ಹೀಗಿದೆ: 'ಅನುಭಾವ ಮತ್ತು ಕುಶಲತೆಗಳ ಕುತೂಹಲಕಾರಿ ಕಸಿಯನ್ನು ಆಧರಿಸಿರುವಂತೆ ತೋರುವ ಆತನ ನೈತಿಕತೆ ಮತ್ತು ಬೌದ್ಧಿಕತೆಗಳು ಆಲೋಚನೆಯ ಸಾಮಾನ್ಯ ಪ್ರಕ್ರಿಯೆಗಳನ್ನು ದಿಕ್ಕೆಡಿಸಿಬಿಡುತ್ತವೆ.' ಇದು ಸಂಬಂಧಿತ ಇಂಗ್ಲಿಷ್ ವಾಕ್ಯದ ಸರಿಯಾದ ಅನುವಾದವೇ ಆಗಿದೆ ಎಂದು ನನ್ನ ಭಾವನೆ.

**–ಡಿ.ಎಸ್. ನಾಗಭೂಷಣ,** ಶಿವಮೊಗ್ಗ

(೧೫ನೇ ಪುಟದಲ್ಲಿ ಇನ್ನೆರಡು ಪತ್ರಗಳು)

ಯುವ ಲಹರಿ

# ‘ಅಭಿವೃದ್ಧಿ’ಯ ದಿಕ್ಕನ್ನು ಬದಲಿಸುವುದೆಂತು?

–ಚ.ಶ್ರೀ. ಜನಾರ್ದನ



ಪರಿಸರದ ಒಟ್ಟು ನೋಟ ಮತ್ತು ನಾವದರ ಒಂದು ಸಣ್ಣ ಭಾಗ ಎಂಬ ತಿಳಿವು ನಮ್ಮ ನಾಗರೀಕತೆಯು (ಕೊಳ್ಳುಬಾಕ ನಾಗರೀಕತೆ ಎಂದು ಹೆಸರಿಸಬಹುದೇನೋ) ಪಯಣವನ್ನು ಸರಿಯಾದ ದಿಕ್ಕಿಗೆ ತಿರುಗಿಸಲು ತೊಡಗಿಸಬಹುದೇನೋ. ಆದರೆ ನಮ್ಮ ಶಾಲಾ ಶಿಕ್ಷಣ ಎಷ್ಟು ಪ್ರಬಲವಾಗಿ ನಮ್ಮನ್ನು ಹುಂಬರನ್ನಾಗಿ, ಮೂಢರನ್ನಾಗಿ ಮಾಡಿದೆಯೆಂದರೆ, ಒಂದು ವಿಷಯವನ್ನು ಒಟ್ಟಾಗಿ ಗ್ರಹಿಸುವ ಸಾಮರ್ಥ್ಯವನ್ನೇ ಕಸಿದುಕೊಂಡಿದೆ.

ನಮ್ಮ ಪಯಣದ ದಿಕ್ಕು ಬದಲಿಸುವ ಮೊದಲ ಹೆಜ್ಜೆ ಯಾವುದಿರಬಹುದು? ಆರ್ಥಿಕ ಮಾದರಿಯ ಬದಲಾವಣೆಯೇ; ಇಲ್ಲವೇ ರಾಜಕೀಯ ವ್ಯವಸ್ಥೆಗಳ ಪುನರ್ರಚನೆಯೇ ; ಇಲ್ಲವೇ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳ ಬದಲಾವಣೆ – ಅಥವಾ ಇವೆಲ್ಲವುಗಳೂ ಮಿಳಿತವಾದದ್ದೋ? ಇವತ್ತಿನ ಸಂಕೀರ್ಣ ಮತ್ತು ಜಾಗತೀಕೃತ ಜೀವನಶೈಲಿಯ ಹಿನ್ನೆಲೆಯಲ್ಲಿ, ಈ ಎಲ್ಲದರಲ್ಲಿಯೂ ದಿಕ್ಕು ಬದಲಿಸಬೇಕು ಮತ್ತು ಅವುಗಳು ಒಂದಕ್ಕೊಂದು ಪೂರಕವಾಗಿರಬೇಕು.

ಮೊದಲಲ್ಲಿ ಆಗಬೇಕಾದದ್ದು ನಮ್ಮ “ಆಭಿವೃದ್ಧಿಯ ಪರಿಭಾಷೆಯ” ಬದಲಾವಣೆ. ಅಭಿವೃದ್ಧಿ ಎನ್ನುವುದು ಸಂಪತ್ತಿನ ವೃದ್ಧಿ ಮತ್ತದು ಸಮಾಜದ ಸಂಪತ್ತಿನದ್ದಕ್ಕಿಂತ ಹೆಚ್ಚಾಗಿ ವೈಯಕ್ತಿಕ ಸಂಪತ್ತಿನದು ಎಂಬುದು ಒಂದು ಮುಖವಾದರೆ, ಅದರ ಮತ್ತೊಂದು ಮುಖ ಮನುಷ್ಯನ ವೈಯಕ್ತಿಕ ಶ್ರಮವನ್ನು ಕಡಿಮೆ ಮಾಡಿ ದೈಹಿಕ ಲಾಲಸೆಯೆಡೆಗೆ ತಳ್ಳುವುದು . ಕೊಳ್ಳುಬಾಕ ನಾಗರೀಕತೆ ನಿಂತಿರುವುದು ನಿರಂತರ ಮತ್ತು ಅತಿ ಹೆಚ್ಚು ಉತ್ಪಾದನೆ ಹಾಗೂ ನಿರಂತರ ಬಳಕೆ. (ಕೊಳ್ಳುವಿಕೆ). ಈ ಉತ್ಪಾದನೆಯು ಕೃಷಿ ಉತ್ಪನ್ನಗಳಾದ ಸಕ್ಕರೆ, ರಬ್ಬರ್ ಮುಂತಾದ ವಿಷಗಳದ್ದಿರಬಹುದು, ಕೈಗಾರಿಕಾ ಉತ್ಪನ್ನಗಳಾದ ದಿನ ಬಳಕೆಯ ವಸ್ತುಗಳೆನಿಸಿಕೊಳ್ಳುವ ಸಾಬೂನು, ಟೂತ್ ಪೇಸ್ಟ್ ಇಂತಹವಿರಬಹುದು, ಮನರಂಜನೆಯ ಉಪಕರಣಗಳಾದ ಟಿವಿ, ಮೊಬೈಲ್ ಮುಂತಾದ ಎಲೆಕ್ಟ್ರಾನಿಕ್ ಉಪಕರಣಗಳಿರಬಹುದು. ಐಷಾರಾಮಿ ಆಸನಗಳೋ, ದೊಡ್ಡ ದೊಡ್ಡ ವಾಹನಗಳೋ ಇರಬಹುದು, ಸಾರ್ವಜನಿಕ ಬಳಕೆಯ ರಸ್ತೆಗಳ ಅಗಲೀಕರಣ, ಹೊಸ ರಸ್ತೆಗಳು, ಆಧುನಿಕ ರೈಲು ಬಂಡಿಗಳು, ಹೊಸ ಸುರಂಗಗಳು, ದೊಡ್ಡ ದೊಡ್ಡ ಆಸ್ಪತ್ರೆಗಳು ಇತ್ಯಾದಿ. ಒಟ್ಟಿನಲ್ಲಿ ಯಾವುದೇ ರೀತಿಯ ಬಳಕೆಗಾದರೂ (ವೈಯಕ್ತಿಕ, ಸಾಮಾಜಿಕ) ಬರುವಂತವು.

ಆರ್ಥಿಕ ಪ್ರಗತಿಯನ್ನು ಅಳೆಯುವ ಇಂದಿನ ಮಾಪಕಗಳೂ, ಸೂಚಿಗಳು ಪರಿಗಣಿಸುವುದು ಹಣ ಎಲ್ಲಿಂದ ಎಲ್ಲಿಗೆ ಎಷ್ಟು ಹರಿದು ಬರುತ್ತದೆ ಎನ್ನುವುದನ್ನು. ಎಲ್ಲ ಸರಕುಗಳ ಮೌಲ್ಯವರ್ಧನೆಯೇ ಹೆಚ್ಚು ಹೆಚ್ಚು ಆರ್ಥಿಕ ವೃದ್ಧಿ ಎಂದು ಪರಿಗಣಿತವಾಗುತ್ತದೆ. ಆ ಎಲ್ಲದಕ್ಕೂ ಮೂಲವಿರುವುದೇ ನಿಸರ್ಗದಲ್ಲಿ. ನಿಸರ್ಗದಲ್ಲಿನ ಯಾವುದೇ ವಸ್ತುವನ್ನು ತೆಗೆದುಕೊಂಡು ಅದನ್ನು ರೂಪಾಂತರಿಸಿ ಮಾರಿದರೆ ಅತ್ಯಧಿಕ ವೃದ್ಧಿಯಾಗುತ್ತದೆ. ಹೆಚ್ಚಿನೆಲ್ಲ ಸರಕುಗಳಿಗೆ ಮೂಲವಿರುವುದು ಒಂದೋ ಭೂಮಿಯೊಳಗೆ ದೊರೆಯುವ ಖನಿಜ, ಶಿಲೆ ಇಲ್ಲವೇ ಪಳೆಯುಳಿಕೆ ಇಲ್ಲವೇ ನೆಲ ಮೂಲವನ್ನುಪಯೋಗಿಸಿ ಬೆಳೆಯುವ ಸಸ್ಯ ಸಂಪತ್ತಿನಲ್ಲಿ. ಈ ನೈಸರ್ಗಿಕ ಸಂಪತ್ತುಗಳ ಮೇಲೆ ಹಕ್ಕು ಹೊಂದಿರುವ ಸರ್ಕಾರವೋ ಖಾಸಗಿ ಸಂಸ್ಥೆಗಳೋ ಇವನ್ನು ಹಣವನ್ನಾಗಿ ಪರಿವರ್ತಿಸುತ್ತಿವೆ. ಆದರೆ ಕಳೆದುಕೊಳ್ಳುತ್ತಿರುವ ನೈಸರ್ಗಿಕ ಸಂಪತ್ತನ್ನು ಅರ್ಥ ವ್ಯವಸ್ಥೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳುತ್ತಲೇ ಇಲ್ಲ. ಹಾಗಾಗಿ ಸರ್ಕಾರವಾಗಲೀ ವಿಶ್ವಸಂಸ್ಥೆಯಾಗಲೀ ನೀಡುವ ಆರ್ಥಿಕ ಅಂಕಿ ಅಂಶಗಳು ಪರಿಪೂರ್ಣ ಚಿತ್ರಣವನ್ನು ನೀಡುವುದಿಲ್ಲ. ಕೆಲವು ಆರ್ಥಿಕ ಸಿದ್ಧಾಂತಗಳು ಈ ಎಲ್ಲವನ್ನು ಒಳಗೊಳ್ಳುವಂತಹ ಪ್ರಮೇಯಗಳನ್ನು ನೀಡಿದ್ದರೂ ಕೂಡ ಅಭಿವೃದ್ಧಿ ಸೂಚಿಗಳು ಇವನ್ನು ಒಳಗೊಳ್ಳುತ್ತಿಲ್ಲ. ಹಾಗಾಗಿ ಜನಮಾನಸಕ್ಕೆ ಈ ಪರಿಸರಮೇಧವು ಆರ್ಥಿಕ ಮೌಲ್ಯದ ಮೂಲವಾಗಿಯೇ ತೋರುತ್ತಿದೆ.

ಇಡೀ ಆರ್ಥಿಕ ಪರಿಕಲ್ಪನೆ ನಿಂತಿರುವುದು ನಿರಂತರ ಉತ್ಪಾದನೆ, ನಿರಂತರ ಕೊಳ್ಳುವಿಕೆ, ಬಳಸುವಿಕೆ, ಎಸೆಯುವಿಕೆ ಮತ್ತು ಕೊಳ್ಳಲು ಅಶಕ್ತರಾದವರನ್ನು ಕೊಳ್ಳುವವರನ್ನಾಗಿ ಮಾರ್ಪಡಿಸುವುದು – ಇವುಗಳ ಆಧಾರದ ಮೇಲೆ. ಈ ನಿಟ್ಟಿನಲ್ಲಿ ಓಡಲು ಆರಂಭಿಸಿದ ಮೇಲೆ “ಮಾರುಕಟ್ಟೆ ಆಧಾರಿತ” ಮಾದರಿಗಳಿಗೆ ವರವಾಗಿ ಸಿಕ್ಕಿದ್ದೇ ಪ್ಲಾಸ್ಟಿಕ್ಕಿನ ಭೂತ. ಕೈಗಾರಿಕೀಕರಣಕ್ಕೆ ಪೆಟ್ರೋಲಿಯಂ, ಕಲ್ಲಿದ್ದಲು ಮುಂತಾದುವು ಇಂಬಾದರೆ, ಕೊಳ್ಳುಬಾಕತನ ಉತ್ತೇಜಿಸಲು ಪೆಟ್ರೋಲಿಯಂ ಉತ್ಪನ್ನ, ಪ್ಲಾಸ್ಟಿಕ್ಟ್ ಮತ್ತು ಎಲ್ಲ ಬಗೆಯ ರಾಸಾಯನಿಕಗಳಿಂದ ಉತ್ಪಾದಿಸುವ ವಿವಿಧ ಸರಕುಗಳೇ ಇಂಧನ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಲ್ಲವರ ಇತರ ವಿಷಯಗಳ ಬಗೆಗಿನ ಪರಿಜ್ಞಾನದ ಕೊರತೆ, ದೂರಗಾಮೀ ಚಿಂತನೆಗಳಿಲ್ಲದಿರುವುದು, ಸಮಗ್ರ ದೃಷ್ಟಿಕೋನದ ಕೊರತೆ, ಎಲ್ಲವನ್ನೂ ಹಣದ ಲೆಕ್ಕಚಾರದಲ್ಲಿ ನೋಡುವುದು ಮತ್ತು ಮನುಷ್ಯನ ಶಕ್ತಿಯ ಬಗೆಗಿನ ದರ್ಪ? ಇವೆಲ್ಲ ಸೇರಿ ನಮ್ಮನ್ನು ಈ ಕೂಪಕ್ಕೆ ದೂಡಿರುವುದಲ್ಲದೇ, ಇಡಿಯಾಗಿ ಈ ನಾಗರೀಕತೆ ಯೋಚಿಸುವ ದಿಕ್ಕೇ ಇಷ್ಟು ಸಂಕುಚಿತ ಮತ್ತು ಸ್ವಕೇಂದ್ರಿತ ಆಗುತ್ತಿದೆ.

ನಮ್ಮ ಮುಂದಿನ ಜನಾಂಗದೆಡೆಗೆ ನಮಗಿರುವ ಜವಾಬ್ದಾರಿ ಮತ್ತು ಋಣದ ಅರಿವಿದ್ದಿದ್ದರೂ , ಸ್ವಲ್ಪವಾದರೂ ಯೋಚಿಸಿ ಹೆಜ್ಜೆ ಇಡುತ್ತಿದ್ದೇವೇನೋ. ತಮಗೆ, ತಮ್ಮ ವಂಶಕ್ಕೆ ಹಣ ಕಾಪಿಡುವ, ಕೂಡಿಡುವ ಮಂದಿ, ಮುಂದೆ ಆ ದುಡ್ಡಿನಿಂದ ಏನೂ ಆಗದ ಸ್ಥಿತಿ ಬರಬಹುದೆಂಬ ಪರಿರಿಜಿದಂನವನ್ನೇ ಕಳೆದು ಕೊಂಡಿದ್ದಾರೆ.

೧೦೦೦ರು ಸಣ್ಣ ಸಣ್ಣ ಸಮುದಾಯಗಳಲ್ಲಿ, ಪ್ರದೇಶಕ್ಕೆ ಅನುಗುಣವಾಗಿ, ಸ್ವಯಂ ಪರಿಪೂರ್ಣವಾದ ಶ್ರಮ ಜೀವನವನ್ನೇ ಗೌರವಿಸುವ ಬದುಕು ಮತ್ತು ವ್ಯಕ್ತಿತ್ವ ವಿಕಾಸವಾಗುವಂತಹ ಹಾಗೂ ಕೌಶಲಗಳು ಬೆಳೆಯುವಂತಹ ಶಿಕ್ಷಣವಷ್ಟೇ ನಮ್ಮನ್ನುಳಿಸೀತು. ಅದಕ್ಕೆ ನಮ್ಮ ನಮ್ಮ ಮಟ್ಟಿನ ಪ್ರಯತ್ನಗಳನ್ನಾರಂಭಿಸಬೇಕಿದೆ.

೧. ಯಂತ್ರದಲ್ಲಿ ತಯಾರಾದ ಉತ್ಪನ್ನಗಳ ಬಳಕೆ ಕಡಿತಗೊಳಿಸುವುದು.

೨. ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು ಬಿಡುವುದು.

೩. ನಮ್ಮ ಸಂಸ್ಕೃತಿಯ ಬೇರುಗಳಿಗೇ ಮರಳುವುದು.

೪. ಗಾಂಧಿಯವರು ಸೂಚಿಸಿದ ‘ಅನ್ನ ಶ್ರಮ’ವನ್ನು ಪಾಲಿಸುವುದು

೫. ಅನಗತ್ಯ ತಿರುಗಾಟ ಬಿಡುವುದು, ಅಗತ್ಯ ಓಡಾಟಗಳಿಗೆ ಸ್ವ ಚಾಲಿತ ಯಂತ್ರದ ಸಹಕಾರವನ್ನು ಪಡೆಯದೆ, ಪರ್ಯಾಯ ವ್ಯವಸ್ಥೆಯನ್ನು ರೂಪಿಸಕೊಳ್ಳುವುದು

೬. ನೀರು, ಗಾಳಿ, ಭೂಮಿ ಇವನ್ನು ಯಾವದೇ ರೀತಿ ಕಲುಷಿತಗೊಳಿಸದಂತಹ ಜೀವನ ಕ್ರಮದೆಡೆಗೆ ನಡೆಯುವುದು

೭. ನೈತಿಕ ಔನ್ನತ್ಯದೆಡೆಗೆ ನಮ್ಮ ವ್ಯಕ್ತಿತ್ವವನ್ನು ತಿರುಗಿಸುವುದು

ಇವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಅಳವಡಿಸಿಕೊಂಡರೆ – ನಮ್ಮ ನಾಗರೀಕತೆಗೆ ಉಳಿಗಾಲವಿದ್ದೀತು. ಎಲ್ಲ ನಾಗರೀಕತೆಗಳೂ ನಾಶ ಹೊಂದಿವೆ. ನಮ್ಮ ನಾಗರೀಕತೆಯ ನಾಶ ವೇಗವಾಗಿ, ನೋವಿನಿಂದ ನರಳುವಂತೆ ಆಗಬಾರದೆಂದಿದ್ದರೆ, ನಾವು ಎಚ್ಚೆತ್ತುಕೊಳ್ಳಬೇಕಿದೆ. ಈ ಎಲ್ಲದರೆಡೆಗೆ ನಮ್ಮನ್ನು ತಿರುಗಿಸಲು ಸಾಧ್ಯವಾಗುವುದು ಕೇವಲ ಉತ್ತಮ ಸಮಗ್ರ ಶಿಕ್ಷಣದಿಂದ. ಸಮಗ್ರ ಕೇವಲ ಶಾಲೆಯಿಂದ , ಶಾಲೆಯಲ್ಲಿ ಆಗುವಂತಹುದಲ್ಲಿ. ಸಮಾಜ ಕುಟುಂಬ ಇವು ನೇರವಾಗಿ ಪಾಲ್ಗೊಳ್ಳಬೇಕಾಗುತ್ತದೆ. ಸಮಾಜದ ಕುಟುಂಬದ ನಂಬಿಕೆಗಳು ಆಚರಣೆಗಳು ಬದಲಾದಂತೆ ಕಲಿಕೆಯ ರೀತಿ ಬದಲಾಗುತ್ತದೆ. ಮತ್ತೊಮ್ಮೆ ಪರಿಸರದೊಟ್ಟಿಗೆ, ನೈತಿಕ ತಳಹದಿಯ ಮೇಲೆ ಕಲಿಯುವ ಅವಕಾಶ ದೊರೆಯುತ್ತದೆ.



**(ಮಾಹಿತಿ ತಂತ್ರಜ್ಞಾನ ಕೇತ್ರದಲ್ಲಿ ಸಾಕಷ್ಟು ಕಾಲ ಸೇವೆ ಸಲ್ಲಿಸಿದ ನಂತರ ಜನಾರ್ದನ ಅವರು ಈಗ ಮೈಸೂರಿನ ಅರಿವು ಶಾಲೆಯ ಮತ್ತು ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಧರ್ಮದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)**

# ಕುಪ್ಪಳಿಯಲ್ಲಿ “ಪರ್ಯಾಯ ಅಭಿವೃದ್ಧಿ ಮಾದರಿ” ಕುರಿತ ಅಧ್ಯಯನ ಶಿಬಿರ: ಒಂದು ವರದಿ



ಇದೇ ನವೆಂಬರ್ ೧೬ ಹಾಗೂ ೧೭ರಂದು ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನವು ತನ್ನ ದಶಮಾನೋತ್ಸವ ಸಂದರ್ಭದಲ್ಲಿ ಕುಪ್ಪಳ್ಳಿಯ ರಾಷ್ಟಕವಿ ಕುವೆಂಪು ಪ್ರತಿಷ್ಠಾನದ ಸಹಯೋಗಬಂದಿಗೆ ಕುಪ್ಪಳ್ಳಿಯಲ್ಲಿ “ಪರ್ಯಾಯ ಅಭಿವೃದ್ಧಿ ಮಾದರಿ” ವಿಷಯ ಕುರಿತಂತೆ ಚಿಂತನ–ಮಂಥನ ಶಿಬಿರವೊಂದನ್ನು ಆಯೋಜಿಸಿತ್ತು. ರಾಜ್ಯದ ವಿವಿಧ ಭಾಗಗಳಿಂದ ಹೆಸರು ನೊಂದಾಯಿಸಿಕೊಂಡಿದ್ದ ಇದರಲ್ಲಿ ಇಪ್ಪತ್ತು ಜನ ಮಹಿಳೆಯರು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ಇನ್ನೂ ಇಪ್ಪತ್ತು ಜನ ವಿದ್ಯಾರ್ಥಿಗಳೂ ಸೇರಿದಂತೆ ಸುಮಾರು ಎಪ್ಪತ್ತು ಜನ ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಈ ಅಧ್ಯಯಮಶಿಬಿರದ ಐದು ಗೋಷ್ಠಿಗಳಲ್ಲಿ ಅಭಿವೃದ್ಧಿ ಮೀಮಾಂಸೆ ಕುರಿತಂತೆ ವಿವಿಧ ಕ್ಷೇತ್ರಗಳ ಪರಿಣತರುಉಪನ್ಯಾಸಗಳನ್ನು ನೀಡಿ ಚರ್ಚೆಗಳನ್ನು ನಡೆಸಿಕೊಟ್ಟರು. ಇದಕ್ಕೆ ಪೂರಕವಾಗಿ ಚಲನ ಚಿತ್ರಗಳ ಪ್ರದರ್ಶನವೂ ಇತ್ತು.

ಶಿಬಿರವನ್ನು ಕುವೆಂಪು ಭಾವಚಿತ್ರಕ್ಕೆ ಹೂಗಳನ್ನರ್ಪಿಸಿ ಉದ್ಘಾಟಿಸಿದ ಹಿರಿಯ ವಿದ್ವಾಂಸ ಡಾ. ಬಿ.ಎ. ವಿವೇಕ ರೈ ಅವರು ತಮ್ಮ ಯೌವ್ವನ ಮತ್ತು ಶಿಕ್ಷಣದ ದಿನಗಳಲ್ಲಿ ರಾಜಕೀಯ–ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಕರ್ನಾಟಕವನ್ನು ದಟ್ಟವಾಗಿ ಪ್ರಭಾವಿಸಿದ್ದ ಲೋಹಿಯಾ ಅವರ ಚಿಂತನೆಗಳನ್ನು ನೆನಪಿಸಿಕೊಳ್ಳುತ್ತಾ, ಆ ಚಿಂತನೆಗಳ ಮರು ಮಥನಕ್ಕಾಗಿ ಸ್ಥಾಪಿತವಾಗಿರುವ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ದಶಮಾನಾತ್ಸವವನ್ನು ಆಚರಿಸುತ್ತಿರುವುದು ಸಂತಸದ ವಿಷಯವೆನ್ನುತ್ತಾ ಪ್ರತಿಷ್ಠಾನಕ್ಕೆ ಶುಭ ಹಾರೈಸಿದರು.

ತಮ್ಮ ಉದ್ಘಾಟನಾ ನುಡಿಗಳನ್ನು ಮುಂದುವರೆಸುತ್ತಾ ರೈ ಅವರು ಜಗತ್ತು ಇಂದು ಹಿಂದೆಂದಿಗಿಂತಲೂ ಹೆಚ್ಚು ತೀವ್ರವಾದ ಪ್ರಾಕೃತಿಕ ಅಪಾಯವನ್ನು ಎದುರಿಸುತ್ತಿದ್ದು ಮನುಷ್ಯ ಇನ್ನಾದರೂ ಎಚ್ಚೆತ್ತು ತನ್ನ ಪ್ರಗತಿಯ ಕಲ್ಪನೆಯನ್ನು ಮೂಲಭೂತವಾಗಿ ಬದಲಿಸಿಕೊಂಡಲ್ಲಿ ಮಾತ್ರ ತನ್ನ ಗ್ರಹವನ್ನು ವಾಸ ಯೋಗ್ಯವಾಗಿ ಉಳಿಸಿಕೊಳ್ಳಬಹುದಾಗಿದೆ ಎಂದರು. ಈ ಸಂಬಂಧ ಅವರು ಲೋಹಿಯಾ ಅವರ ಸಣ್ಣ ಘಟಕಗಳ ತಂತ್ರಜ್ಞಾನದ ಪ್ರತಿಪಾದನೆಯನ್ನು ನೆನಪಿಸಿ ಇಂದು ಇದು ಹೆಚ್ಚು ಚರ್ಚಿತವಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹಿರಿಯ ವಿಜ್ಞಾನ ಲೇಖಕ ಮತ್ತು ಪರಿಸರ ಚಿಂತಕ ನಾಗೇಶ ಹೆಗಡೆಯವರು, ಇಂದು ನಾವೆಲ್ಲರೂ ನಿಕೇತನರಾಗಿ ನಿಸರ್ಗದ ಸಂಪರ್ಕವನ್ನು ಕಡಿದುಕೊಂಡು ನಗರ ಜೀವನದ ಬಗ್ಗೆ ವ್ಯಾಮೋಹ ಬೆಳೆಸಿಕೊಂಡು ಬದುಕುತ್ತಿದ್ದೇವೆ ಎಂದು ವಿಷಾದಿಸುತ್ತಾ, ಇದರ ಬದಲು ನಿಸರ್ಗದ ಜೊತೆ ಅನುಸಂಧಾನ ಮಾಡಿಕೊಂಡು ಅನಿಕೇತನರಾಗಿ ಬದುಕುವ ಅಗತ್ಯವಿದೆ ಎಂದು ಹೇಳಿದರು. ರಸ್ತೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಿಕೊಳ್ಳುತ್ತಾ ಸವಲತ್ತುಗಳನ್ನು ಹೆಚ್ಚು ಮಾಡಿಕೊಳ್ಳುತ್ತಾ ಬದುಕುತ್ತಿರುವ ನಮ್ಮೊಳಗೆ ಅದೇ ಅಭಿವೃದ್ಧಿ ಎಂಬ ಭ್ರಮೆ ಮನೆ ಮಾಡಿಕೊಂಡಿದೆ. ನಾವುಗಳು ಬಳಸುತ್ತಿರುವ ಬೃಹದಾಕಾರದ ಯಂತ್ರಗಳು ನಮ್ಮ ಯುವಜನರ ಉದ್ಯೋಗಗಳನ್ನು ಕಸಿದುಕೊಳ್ಳುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದ ಅವರು ನದಿ, ಕೆರೆ, ಬೆಟ್ಟ, ಬಂಡೆ, ಮರ ಹಾಳು ಮಾಡುವ ಮೂಲಕ ಜೀವ ವೈವಿಧ್ಯತೆಯನ್ನು ನಾಶ ಮಾಡುತ್ತಾ ಅಭಿವೃದ್ಧಿ ಸಾಧಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ ಎಂದು ಎಚ್ಚರಿಸಿದರು

ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಖಜಾಂಚಿ ಮನುದೇವ ಅವರು ವೇದಿಕೆಯಲ್ಲಿದ್ದರು. ಉದ್ಘಾಟನಾ ಸಮಾರಂಭದ ನಂತರ ಶಿಬಿರಾರ್ಥಿಗಳು ಪರಸ್ಪರ ಪರಿಚಯಸಿಕೊಳ್ಳುವ ಕಾರ್ಯಕ್ರಮ ನಡೆಯಿತು. ನಂತರ ಶಿಬಿರದ ಪ್ರವೇಶ ಭಾಷಣ ಮಾಡಿದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷರು ಹಾಗೂ ಶಿಬಿರದ ನಿರ್ದೇಶಕರೂ ಆದ ಡಿ.ಎಸ್.ನಾಗಭೂಷಣ ಅವರು ಅಪೂರ್ಣಗಳನ್ನೆಲ್ಲ ಸೇರಿಸಿ ಒಂದು ಪೂರ್ಣವನ್ನು ಸಾಧಿಸಲಾಗುವುದಿಲ್ಲ ಎಂಬ ಪುಕೊವುಕಾನ ಮಾತನ್ನು ಉಲ್ಲೇಖಿಸುತ್ತಾ, ಪಶ್ಚಿಮದ ಜ್ಞಾನಯುಗದ ಸಂಶೋಧನೆಗಳಿಂದ ಪ್ರೇರಿತವಾದ ಅಭಿವೃದ್ಧಿಯ ಕಲ್ಪನೆ ಹಲವು ಅಪೂರ್ಣಗಳ ಕಲಸುಮೇಲೋಗರವಾಗಿದ್ದು ಅದರಿಂದಾಗಿ ಇಂದು ಆಧುನಿಕ ಮನುಷ್ಯ ಅವನಿಗೇ ಗೊತ್ತಿಲ್ಲದಂತೆ ಅಪೂರ್ಣತೆಯಿಂದ ನರಳುವ ಸ್ಥಿತಿ ಉಂಟಾಗಿದೆ ಎಂದರು. ನಿಸರ್ಗವನ್ನು ಜಡ ವಸ್ತುವಿನಂತೆ ನಿರ್ವಹಿಸುತ್ತಿರುವ ಆಧುನಿಕ ವಿಜ್ಞಾನ–ತಂತ್ರಜ್ಞಾನಗಳು ಮನುಷ್ಯನನ್ನು ಕೇವಲ ದೇಹಿಯಾಗಿ ನೋಡತ್ತಾ ಆತನ ಚೇತನ–ಆತ್ಮಶ್ರೀಯನ್ನು ಉಪೇಕ್ಷಿಸಿ ಮಾಡಿರುವ ಈ ಅಪೂರ್ಣತೆ ಎಂಬ ಅನಾಹುತದ ಚಿತ್ರಣ ಗಾಂಧಿಯವರ ‘ಹಿಂದ್ ಸ್ವರಾಜ್’ನಲ್ಲಿದ್ದು, ಈ ಕೃತಿ ನಮ್ಮ ಪರ್ಯಾಯ ಅಭಿವೃದ್ಧಿ ಮಾದರಿಗೆ ಸ್ಫೂರ್ತಿಯಾಗಬೇಕೆಂದರು.

ಮಧ್ಯಾಹ್ನದ ಊಟದ ಬಿಡುವಿನ ನಂತರ ಪ್ರಾರಂಭವಾದ ಶಿಬಿರದ ಮೊದಲ ಗೋಷ್ಠಿಯಲ್ಲಿ ಶಿರಸಿಯ ಸಂರಕ್ಷಣೆ ಮತ್ತು ಸುಸ್ಥಿರ ಅಬಿವೃದ್ಧಿ ಅಧ್ಯಯನ ಕೇಂದ್ರದ ಕೇಶವ ಎಚ್.ಕೋರ್ಸೆಯವರು ‘ನಮ್ಮ ಅಭಿವೃದ್ಧಿಯ ಕಲ್ಪನೆಯೂ ಹವಾಮಾನ ವೈಪರೀತ್ಯವೂ’ ಎಂಬ ವಿಷಯದ ಬಗ್ಗೆ ಮಾತನಾಡತ್ತಾ ತನಗೆ ತಾನೇ ಪುನರಜ್ಜೀವನಗೊಳ್ಳುವ ಚಕ್ರೀಯ ಜೈವಿಕ ವ್ಯವಸ್ಥೆಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಅಸ್ತವ್ಯಸ್ತಗೊಳಿಸಿ ಸರಳರೇಖಾತ್ಮಕಗೊಳಿಸಿರುವುದೇ ಇಂದಿನ ಎಲ್ಲ ಸಮಸ್ಯೆಗಳ ಮೂಲವಾಗಿದೆ ಎಂದು ವಿವವರಿಸಿದರು. ಈ ಎಲ್ಲಾ ಸಮಸ್ಯೆಗಳಿಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಅಭಿವೃದ್ಧಿ ಯೋಜನೆಗಳ ಪುರ್ನವಿನ್ಯಾಸದಲ್ಲಿ ಪರಿಹಾರವಿದೆ ಎಂದ ಅವರು, ಗಾಂಧೀಜಿಯವರು ಹೇಳುವ ಏಳು ಮಹಾ ಪಾತಕಗಳಿಗೆ ಕೈಹಾಕದೆ ಎಚ್ಚರ ವಹಿಸುವುದೇ ನಮ್ಮ ಮುಂದನ ಪ್ರಗತಿಯ ಮಾರ್ಗದ ಕೈದೀವಿಗೆಯಾಗಬೇಕು ಎಂದು ಅಭಿಪ್ರಾಯಪಟ್ಟರು.

ಶಿಬಿರದ ಎರಡನೇ ಗೋಷ್ಠಿಯಲ್ಲಿ ‘ಅಭಿವೃದ್ಧಿಯೂ, ಬದಲಾಗಬೇಕಾದ ನಮ್ಮ ಅರ್ಥಶಾಸ್ತ್ರೀಯ ಪರಿಕಲ್ಪನೆಗಳೂ’ ವಿಷಯದ ಬಗ್ಗೆ ಮಾತನಾಡಿದ ಮೇಲುಕೋಟೆಯ ಗಾಂಧಿವಾದಿ ಚಿಂತಕ ಮತ್ತು ಕಾರ್ಯಕರ್ತ ಸಂತೋಷ್ ಕೌಲಗಿಯವರು ಗಾಂಧಿಯವರ ಆರ್ಥಿಕ ಸಲಹೆಗಾರರಾಗಿದ್ದ ಜೆ.ಸಿ.ಕುಮಾರಪ್ಪನವರ ಶಾಶ್ವತ ಅರ್ಥಶಾಸ್ತ್ರದ ಪರಿಕಲ್ಪನೆಯನ್ನು ಪರಿಚಯಿಸಿ, ಅದರ ಇಂದಿನ ಅಗತ್ಯತೆಯನ್ನು ಒತ್ತಿ ಹೇಳಿದರು ವಿವಿಧ ಜೀವಿತಾವಧಿಯನ್ನು ಹೊಂದಿ ಭೂಮಿಯ ಮೇಲೆ ಬದುಕಿರುವ ಅನೇಕ ಪ್ರಾಣಿಗಳನ್ನು ಪೊರೆಯುವ ಪ್ರಕೃತಿಗೆ ಒಂದು ಶಾಶ್ವತ ನಿಯಮಾವಳಿ ಮತ್ತು ಲಯವಿದ್ದು ಅದನ್ನರಿತು ಮನುಷ್ಯ ತನ್ನ ಆರ್ಥಿಕ ಚಟುವಟಿಕೆಗಳ ಮಾದರಿಗಳನ್ನು ರೂಪಿಸಿಕೊಳ್ಳಬೇಕಾಗಿದೆ ಎಂದ ಕುಮಾರಪ್ಪ ಪ್ರತಿಪಾದಿಸದರು. ಆದರೆ ಸ್ವಾರ್ಥಿಯೂ ದುರಾಶೆಯವನ್ನೂ ಆದ ಮನುಷ್ಯ ಈ ಶಾಶ್ವತ ನಿಯಮವಳಿ ಮತ್ತು ಲಯವನ್ನು ಹಾಳು ಮಾಡಿ ಕೃತಘ್ನತಾ ಅರ್ಥಶಾಸ್ತ್ರವೆಂದು ಕರೆಯಬಹುದಾದ ಆಧುನಿಕ ಅರ್ಥಶಾಸ್ತ್ರವನ್ನು ರೂಪಿಸಿಕೊಂಡು ಭೂಮಿಯನ್ನು ವಾಸಕ್ಕೆ ಅನರ್ಹವನ್ನಾಗಿ ಮಾಡತ್ತಿರುವುದರ ಬಗ್ಗೆ ಅವರು ಎಚ್ಚರಿಕೆ ನೀಡಿದ್ದರು ಎಂದು ಕೌಲಗಿ ಹೇಳಿದರು. ಶಾಶ್ವತ ಸತ್ಯ ಮತ್ತು ಅಹಿಂಸೆಗಳನ್ನಾಧರಿಸಿ ನಿಸರ್ಗವನ್ನು ನಿರ್ವಹಿಸುವ ಸರಳ ಮತ್ತು ನೇರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಕುಮಾರಪ್ಪ ಅವರು ರೂಪಿಸಿದ ಹಲವು ಸಾಧನನ–ಸಲಕರಣೆಗಳತ್ತ ಈಗ ನಮ್ಮ ಗಮನ ಹರಿಯಬೇಕಾಗಿದೆ ಎಂದು ಅವರು ಹೇಳಿದರು.

ಮರುದಿನ ಅಂದರೆ ೧೭ ರಂದು ಬೆಳಿಗ್ಗೆ ಹಿಂದಿನ ರಾತ್ರಿ ಪ್ರದರ್ಶಿಸಲಾಗಿದ್ದ ಆನಂದ್ ಪಟವರ್ಧನ್ ನಿರ್ಮಿಸಿದ ;’ವಾರ್ ಅಂಡ್ ಪೀಸ್’ ಸಾಕ್ಷ್ಯ ಚಿತ್ರದ ಬಗ್ಗೆ ಶಿಬಿರಾರ್ಥಿಗಳಿಂದ ಅಭಿಪ್ರಾಯ ಮಂಡನೆಯೊಂದಿಗೆ ಶಿಬಿರದ ಎರಡನೆಯ ದಿನದ ಕಾರ್ಯಕಲಾಪಗಳು ಆರಂಭವಾದವು. ಶಿಬಿರಾರ್ಥಿಗು ಒಟ್ಟಾರೆಯಾಗಿ ಈ ಸಾಕ್ಷ್ಯ ಚಿತ್ರ ನೋಡಿ ದೇಶ ಭಕ್ತಿ ಹಾಗೂ ಯುದ್ಧೋನ್ಮಾಗಳ ನಡುವಣ ಸಂಬಂಧ ಮತ್ತು ಅಹಿಂಸೆಯ ಅರ್ಥ ತಮಗೆ ಹೆಚ್ಚು ಸ್ಪಷ್ಟವಾಯಿತು ಎಂದರು. ೧೬ ರಾತ್ರಿ ಪ್ರದರ್ಶಿಸಲಾಗಿದ್ದ ಅಲ್‌ಗೋರ್‌ಅವರ ‘ಅನ್ ಇನ್‌ಕನ್ವೀನಿಯೆಂಟ್ ಟ್ರುತ್’ನ ಕನ್ನಡ ಅವತರಣಿಕೆ ‘ಒಂದು ನಿಷ್ಠುರ ಸತ್ಯ’ ಕೂಡ ಶಿಬಿರಾರ್ಥಿಗಳ ಈ ಅನ್ನಿಸಿಕೆಗೆ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ

ನಂತರ ಆರಂಭವಾದ ಶಿಬಿರದ ಮೂರನೇ ಗೋಷ್ಠಿಯಲ್ಲಿ ‘ಪರ್ಯಾಯ ಜೀವನ ಕ್ರಮವೂ, ಪರ್ಯಾಯ ಅಭಿವೃದ್ಧಿ ತಾಂತ್ರಿಕತೆಯೂ’ ಎನ್ನುವ ವಿಷಯದ ಬಗ್ಗೆ ಮಾತನಾಡಿದ ಸೌರಶಕ್ತಿ ಅಭಿವೃದ್ಧಿ ಕ್ಷೇತ್ರದ ಕಾರ್ಯಕರ್ತೆ ಭಾರತಿ ಹೆಗಡೆಯವರು ಮಾತನಾಡಿ ಬಹು ಹಿಂದೆಯೇ ಮಲೆನಾಡಿನ ಮೂಲೆ ಹಳ್ಳಿಗಳಲ್ಲೂ ಸ್ಥಳೀಯ ಸಾಧನ ಸಲಕರಣೆಗಳನ್ನು ಬಳಸಿ ವಿದ್ಯುತ್ ಉತ್ಪಾದನೆ ಸೇರಿದಂತೆ ಹಲವು





ಸಾಹಸಗಳನ್ನು ಮಾಡುತ್ತಿದ್ದ ನಮ್ಮ ಗ್ರಾಮೀಣ ಜನರ ಸಾಹಸ–ಸೃಜನಶೀಲತೆಗಳು ಬಡತನ ನಿವಾರಣೆಯ ಹೆಸರಿನಲ್ಲಿ ಆಧುನಿಕತೆಯ ದಾಪುಗಾಲುಗಳಾಗಿ ಹೆಜ್ಜೆ ಇಟ್ಟ ಅಭಿವೃದ್ಧಿಯ ಜಾಗತೀಕರಣ–ಉದಾರೀಕರಣ–ಖಾಸಗೀಕರಣಗಳ ಹೊಸ ತಂತ್ರಜ್ಞಾನ ಬಲಿ ತೆಗೆದುಕೊಂಡ ದುರಂತ ಕಥೆಯನ್ನು ವಿವವರಿಸಿದರು. ಇಂದು ಆಗ ರೂಢಿಯಲ್ಲಿದ್ದ ಹೈನುಗಾರಿಕೆ, ಮರಗೆಲಸ, ಕುಂಬಾರಿಕೆ ಮುಂತಾದ ಗುಡಿ ಕೈಗಾರಿಕೆಗಳಂತಹ ಸ್ವ–ಉದ್ಯೋಗಗಳನ್ನು ಹಾಳುಮಾಡುವುದಲ್ಲದೆ ನಿಸರ್ಗದಲ್ಲಿದ್ದ ಸಂಪನ್ಮೂಲಗಳನ್ನೂ ಬರಿದಾಗಿಸಿದ ಹೊಸ ತಂತ್ರಜ್ಞಾನಕ್ಕೆ ಬದಲಿಯಾಗಿ ನಾವು ಇಂದು ನಮ್ಮನ್ನು ಪೊರೆಯುತ್ತಾ ಬಂದಿರುವ ನಿಸರ್ಗವನ್ನು ಉಳಿಸಿಕೊಳ್ಳಲು ಸೂರ್ಯ ಶಾಖ, ಗಾಳಿ ಯಂತ್ರ ಹಾಗೂ ಗೋಬರ್ ಗ್ಯಾಸ್‌ಗಳ ಮೂಲಕ ಇಂಧನ ತಯಾರಿಸಿ ಮನೆ ಬಳಕೆಗಷ್ಟೆ ಅಲ್ಲದೆ ಅನೇಕ ಸಣ್ಣ ಕೈಗಾರಿಕೆಗಳಿಗೂ ಬಳಸಬಹುದಾಗಿದೆ ಹಾಗೂ ಈ ದಿಸೆಯಲ್ಲಿ ಹೆಚ್ಚೆಚ್ಚು ಕೆಲಸವಾಗಬೇಕಿದೆ ಎಂದರು. ಭಾರತಿಯವರು ಚಾಮರಾಜನಗರದ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮ ಸಂಸ್ಥೆ ಸೌರಶಕ್ತಿ ಸಾಧನಗಳನ್ನು ಅಳವಡಿಸಿ ಸ್ಥಳೀಯರ ಬದುಕಿಗೆ ನೆರವಾಗಿದೆ ಎಂದು ಹೇಳಿದಾಗ ಆ ಪ್ರದೇಶದಿಂದ ಬಂದಿದ್ದ ಹಲವು ಶಿಬಿರಾರ್ಥಿಗಳು ಅವರೊಂದಿಗೆ ಬಿಸಿ ಬಿಸಿ ಚರ್ಚೆಗೆ ಇಳಿದಿದ್ದು ಶಿಬಿರದ ಜೀವಂತಿಕೆಗೆ ಸಾಕ್ಷಿಯಂತಿತ್ತು,

ನಾಲ್ಕನೇ ಗೋಷ್ಠಿಯಲ್ಲಿ "ಸ್ವಾವಲಂಬಿ ಗ್ರಾಮದ ಸಾಧ್ಯಾಸಾಧ್ಯತೆಗಳು: ಕೆಲವು ಪ್ರಯೋಗಗಳು" ವಿಷಯಯವಾಗಿ ಮಾತನಾಡಿದ ಪರಿಸರ ಹಾಗೂ ಗ್ರಾಮಾಭಿವೃದ್ಧಿ ಚಿಂತಕ ಶಿವಾನಂದ ಕಳವೆಯವರು ನಗರಗಳತ್ತ ಮಾತ್ರವಲ್ಲ, ಜಾಗತಿಕ ವಲಸೆಗಳಿಂದಲೂ ಬರಿದಾಗಿರುವ ಇಂದಿನ ಗ್ರಾಮಗಳು ಪೂರ್ಣ ಸ್ವಾವಲಂಬಿಯಾಗುವ ಪರಿಸ್ಥಿತಿ ಇಲ್ಲವೆನ್ನುತ್ತಾ ಮಲೆನಾಡು, ಬಯಲು ಸೀಮೆಗಳ ಹಲವು ಹಳ್ಳಿಗಳ ಉದಾಹರಣೆಗಳ ಸಮೇತ ವಿಷಯದ ಮೇಲೆ ಬೆಳಕು ಚೆಲ್ಲಿದ ಅವರು, ಖಾಲಿಯಾಗುತ್ತಿರುವುದು ಹಳ್ಳಿಗಳು ಮಾತ್ರವಲ್ಲ, ಅದರ ಜೊತೆಗೆ ಅಲ್ಲಿನ ವೈವಿಧ್ಯಮಯ ಸಂಸ್ಕೃತಿ ಮತ್ತು ಜ್ಞಾನ ಕೂಡ ಎಂದು ಆತಂಕ ವ್ಯಕ್ತಪಡಿಸಿದರು. ಯುವಜನರಲ್ಲಿ ಕೃಷಿಯ ಕಡೆ ಒಲವು ಕಡಿಮೆಯಾಗುತ್ತಿರುವ ಪ್ರಸ್ತುತ ದಿನಗಳಲ್ಲಿ ಶಾಲೆಗಳಲ್ಲಿನ ಶಿಕ್ಷಕರು ಮಕ್ಕಳಲ್ಲಿ ಗ್ರಾಮ ಜೀವನ ಮತ್ತುಕೃಷಿಯ ಬಗ್ಗೆ ಸಕಾರಾತ್ಮಕವಾಗಿ ಮಾತನಾಡಿ ಅದರ ಮೇಲೆ ಪ್ರೀತಿ ಮೂಡುವಂತೆ ಮಾಡಬೇಕು ಎಂದು ಕರೆ ಕೊಟ್ಟರು. "ಕೃಷಿಕರಿದ್ದರೆ ಚೆನ್ನ ದುಡಿಯುವವರಿದ್ದರೆ ಅನ್ನ" ಎಂಬ ಅರ್ಥಪೂರ್ಣ ಸಾಲುಗಳನ್ನು ಹೇಳಿ ಕುಟುಂಬಗಳು ಮತ್ತು ಹಳ್ಳಿಗಳ ಸ್ವಾವಲಂಬನೆಯಾಗಬೇಕಾದರೆ ಕೃಷಿಗೆ ಹಿಂದಿರುಗುವುದು ಅತ್ಯಗತ್ಯ ಎಂದು ಹೇಳಿದರು.

ಕೊನೆಯ ಮತ್ತು ಐದನೆಯ ಗೋಷ್ಠಿಯಲ್ಲಿ ನೀರು ನಿರ್ವಹಣಾ ತಜ್ಞ ಮಲ್ಲಿಕಾರ್ಜುನ ಹೊಸಪಾಳ್ಯ ಅವರು "ಆಧುನಿಕ ಕೃಷಿ ಪದ್ಧತಿಯ ಅನಾಹುತಗಳೂ, ಪರಿಹಾರಗಳೂ" ವಿಷಯವಾಗಿ ತಮ್ಮ ವಿಚಾರ ಮಂಡಿಸುತ್ತಾ ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ಹೆಣ್ಣು ಮಕ್ಕಳಿಂದ ಆರಂಭವಾದ ಕೃಷಿಯು ಸಾವಿರಾರು ವರ್ಷಗಳಿಂದ ಅದನ್ನು ನಂಬಿ ಜೀವನ ಮಾಡುತ್ತಿದ್ದ ರೈತ ಸಮಿದಾಯ ಕೂಡ ಆತ್ಮಹತ್ಯೆಯ ಆಲೋಚನೆ ಮಾಡಿದೆ ಇದ್ದದ್ದು ೧೯೬೦ರ ನಂತರದಲ್ಲಿ ಆರಂಭವಾದ ಆಧುನಿಕ ಕೃಷಿ ಪದ್ದತಿಯ ನಂತರ ಅಸಾಧಾರಣ ಮಟ್ಟದಲ್ಲಿ ರೈತರ ಆತ್ಮಹತ್ಯೆಯತ್ತ ಮನ ಹರಿಸಲು ಇಂತಾದ ಕಾರಣಗಳನ್ನು ನೀಡಿದರು. ಕೇವಲ ಆರ್ಥಿಕ ಕಾರಣಗಳ ಹಿನ್ನೆಲೆಯಿಂದ ಕೃಷಿ ನೋಡಿದ್ದು ಹಾಗೂ ಫಸಲಿನ ಇಳುವರಿ ಹೆಚ್ಚಿಸಲಷ್ಟೆ ಗಮನ ಕೊಟ್ಟ ಕಾರಣದಿಂದಾಗಿ ಆರಂಭವಾದ ಹೊಸ ನೀರಾವರಿ, ಕೃಷಿ ಮತ್ತು ಆಹಾರ ಪದ್ಧತಿಗಳಲ್ಲಿನ ಪಲ್ಲಟ ಕೃಷಿಯನ್ನು ಮಾತ್ರವಲ್ಲ ಕೃಷಿ ಸಮಾಜದ ಅಡಿಗಲ್ಲುಗಳನ್ನಡೇ ಅಲಾಡಿಸಿದ್ದು ಇದರಿಂದಾಗಿ ಈ ಸಮಾಜಕ್ಕೆ ಅಂಟಿಕೊಂಡಿರುವ ಹೊಸ ಆಸೆ–ಆಕ್ಷೆಗಳು, ಚಟಗಳು ಮತ್ತು ರೋಗ ರುಜಿನಗಳ ಇಂದು ಆತಂಕ ಹುಟ್ಟಿಸಿವೆ ಎಂದರು..

ಈ ಐದೂ ಗೋಷ್ಠಿಗಳ ನಂತರ ಸಂಜೆ ನಡೆದ ಸಮಾರೋಪ ಸಮಾರಂಭ ಶಿಬಿರ ಕುರಿತ ಶಿಬಿರಾರ್ಥಿಗಳ ಅಭಿಪ್ರಾಯ ಮಂಡನೆಯೊಂದಿಗೇ ಆರಂಭವಾಯಿತು. ಮಾತನಾಡಿದ ಎಲ್ಲ ಶಿಬಿರಾರ್ಥಿಗಳೂ ಶಿಬಿರದ ಗೋಷ್ಠಿಗಳು ಮತ್ತು ಊಟ–ವಸತಿ ವ್ಯವಸ್ಥೆಗಳ ಬಗ್ಗೆ ಪೂರ್ಣ ತೃಪ್ತಿ ವ್ಯಕ್ತಪಡಿಸಿ ತಾವೆಲ್ಲ ಶಿಬಿರದಿಂದ ಹೊಸ ವಿಚಾರ ಮತ್ತು ಹುರುಪಿನೊಂಇಗೆ ಹಿಂತಿರುಗುತ್ತಿರುವುದಾಗಿ ತಿಳಿಸಿದರು. ಶಿಬಿರದ ನಿರ್ದೇಶಕರಾದ ಡಿ.ಎಸ್. ನಾಗಭೂಷಣ ಅವರು, ಹತ್ತು ವರ್ಷಗಳಿಂದ ಆಯೋಜಿಸುತ್ತಿರುವ ಪ್ರತಿ ವರ್ಷದ ಶಿಬಿರವೂ ತಮಗೆ ಒಂದು ಹೊಸ ಅನುಭವವಾಗುತ್ತಿದ್ದು ಸದರಿ ಶಿಬಿರದಲ್ಲಿನ ಚರ್ಚೆಯಲ್ಲಿ ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸಿದ್ದು ತಮಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ ಎಂದರು.

ಸಮಾರೋಪದ ನುಡಿಗಳನ್ನಾಡಿದ ನಾಗೇಶ ಹೆಗಡೆಯವರು ಶಿಬಿರದ ಮೊದಲ ದಿನ ಶಿಬಿರದ ನಿರ್ದೇಶಕರು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ ಎತ್ತಿದ್ದ ಯುವಜನರಲ್ಲಿನ ಅಭಿವ್ಯಕ್ತಿ ಸಾಮರ್ಥ್ಯದ ಕೊರತೆ ಕುರಿತಂತೆ ತಮ್ಮ ಮಾತುಗಳನ್ನು ಆರಂಭಿಸಿ, ಕೈಗಾದಲ್ಲಿ ಕಳೆದ ಮುವ್ವತ್ತು ವರ್ಷಗಳ ಹಿಂದ, ಸದ್ಯ ಯೂಟ್ಯೂಬ್‌ನಲ್ಲಿ ಲಭ್ಯವಿರುವ "ವನಸಿರಿ" ಹಾಡುಗಳ ಗುಚ್ಛದಲ್ಲಿರುವಂತೆ ಹಾಡುಗಳನ್ನು ಹಾಡಿ, ಕೈಬರಹದ ಕರಪತ್ರಗಳ ಮೂಲಕ ನಾವು ಅರಿವು ಮೂಡಿಸುವ ಕಾರ್ಯ ಕೈಗೊಂಡಿದ್ದೆವು ಎಂದು ತಮ್ಮ ನೆನಪಿನ ಬುತ್ತಿ ಬಿಚ್ಚಿದರು. ಇಂತಹ ಶಿಬಿರಗಳಲ್ಲಿ ಪರ್ಯಾಯ ಅಭಿವೃದ್ಧಿ ಮಾದರಿಗಳನ್ನು ಚರ್ಚಿಸುವ ಜೊತೆಗೆ ಶಾಲಾ ಕಾಲೇಜುಗಳಿಗೆ, ಹಳ್ಳಿಗಳಿಗೆ ತೆರಳಿ ಅರಿವು ಮೂಡಿಸುವ ಅಗತ್ಯವಿದೆ. ಅದಷ್ಟೆ ಅಲ್ಲದೆ ಮಾನ್ಸಾಂಟೊದಂತಹ ಕಂಪನಿಗಳು ಸೃಷ್ಟಿಸುವ ದುರಂತಗಳ ಬಗ್ಗೆ ಹಾಗೂ ಇಂತಹ ಶಿಬಿರಗಳಿಂದ ಕಲಿತ ವಿಚಾರಗಳ ಬಗ್ಗೆ ಸಣ್ಣ ಸಣ್ಣ ಕೂಟಗಳನ್ನು ರಚಿಸಿಕೊಂಡು ಸಮೂಹ ಮಾಧ್ಯಮದ ಮೂಲಕ ಜನಗಳಿಗೆ ವಿಚಾರ ತಲುಪಿಸಬೇಕು ಎಂದು ಕರೆಕೊಟ್ಟರು. ಸದ್ಯದ ಅಭಿವೃದ್ಧಿಯ ನಾಹುತಗಳಿಂದ ಬಳಲುತ್ತಿರುವ ನಾವು ಜಾಗತಿಕ ತಾಪಮಾನ ಏರಿಕೆಯನ್ನು ತಡೆಗಟ್ಟಲು ಹಾಗೂ ಆರೋಗ್ಯ ರಕ್ಷಣೆ ಮುಂತಾದ ಅವಶ್ಯಕತೆಗಳಿಗಾಗಿ ವಿಶ್ವಸಂಸ್ಥೆಯ ಸೂಚನೆಯ ಮೇರೆಗೆ ಬಿಡುಗಡೆಯಾಗಿರುವ ಸಾವಿರಾರು ಕೋಟಿ ರೂಪಾಯಿಗಳ ಹಣ್ಣ ಸದುಪಯೋಗವಾಗುವಂತೆ ಎಚ್ಚರ ವಹಿಸಬೇಕಲಾಗಿದೆ ಎಂದು ಸೂಚಿಸದರು. ಕರೆ ನೀಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಅವರು, ಇಂತಹ ಅಧ್ಯಯನ ಶಿಬಿರಗಳಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ತಮ್ಮ ಪ್ರತಿಷ್ಠಾನ ಎಂದಿನಿಂದಲೂ ಒದಗಿಸುತ್ತಿದೆ ಮತ್ತು ಮುಂದೆಯೂ ಒದಗಿಸುತ್ತದೆ ಎಂಬ ಭರವಸೆಯನ್ನಿತ್ತರು.

ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಸದಸ್ಯರಾದ ಹೊನ್ನಾಳಿ ಚಂದ್ರ ಶೇಖರ್, ಎಂ ರಾಜು ಹಾಗೂ ಮಾಜಿ ಸದಸ್ಯ ಡಿ.ಜಿ. ಪುಟ್ಟರಾಜು ಗೋಷ್ಠಿಗಳನ್ನು ನಿರ್ವಹಿಸಿದರು. ಗೋಷ್ಠಿಗಳ ಪ್ರಸನ್ನ ಕುಮಾರ್, ಶಿವಸ್ವಾಮಿ ಮುಂತಾದವರು ಹಾಡುಗಳನ್ನು ಹಾಡಿದರು. ಸವಿತಾ ನಾಹಭೂಷಣ ಅವರು ಸ್ವರಚಿತ ಕವಿತಾ ವಾಚನ ಮಾಡಿದರು.

ಶಿಬಿರಾರ್ಥಿಗಳು ಶಿಬಿರದಲ್ಲಿ ಮಂಡಿತವಾದ ಹೊಸ ವಿಚಾರಗಳ ಜೊತೆ ಕುಪ್ಪಳಿಯ ಹಸಿರ್ರು ಗಿಡ ಮರ ಪಕ್ಷಿ ಪ್ರಾಣಿಗಳ ರಮಣೀಯ ಸೌಂದರ್ಯದ ಮತ್ತು ಕವಿಮನೆ–ಕವಿಶೈಲ, ತೇಜಸ್ವಿ ಸ್ಮಾರಕಗಳ ಸುಂದರ ನೆನಪುಗಳೊಂದಿಗೆ ಸಾರ್ಥಕತೆಯ ಭಾವದಿಂದ ತಮ್ಮೂರಿಗೆ ತೆರಳಿದರು.

(ವರದಿ: **ಪ್ರಸನ್ನಕುಮಾರ್ ಕೆರಗೋಡು**

**ಚಿತ್ರಗಳು: ಎಂ. ರಾಜು**)

# ಅಯೋಧ್ಯಾ ತೀರ್ಪು : ಒಂದು ವಿಶ್ಲೇಷಣೆ

ಮೂಲ: ಉಪೇಂದ್ರ ಬಕ್ಷಿ
ಕನ್ನಡಕ್ಕೆ: ಎಂ. ರಾಜು

**೧೯೪೯ರ ಡಿಸೆಂಬರ್ ೨೨/೨೩ರ ರಾತ್ರಿ ಬಾಬ್ರಿ ಮಸೀದಿಯ ಕೇಂದ್ರೀಯ ಗುಮ್ಮಟದ ಅಡಿಯಲ್ಲಿ ಹಿಂದು ಪ್ರತಿಮೆಗಳನ್ನು ಸ್ಥಾಪಿಸಿದ್ದು ಮತ್ತು ೧೯೯೨ರಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ್ದು ಕಾನೂನಿನ ಆಡಳಿತದಎಗ್ಗಿಲ್ಲದ ಉಲ್ಲಂಘನೆಯಾಗಿದೆ ಎಂಬುದನ್ನು ನ್ಯಾಯಾಲಯವು ದೃಢವಾಗಿ ನಂಬುತ್ತದೆ. ಮುಂದುವರಿದು ನ್ಯಾಯಾಲಯವು ದೈವಶಾಸ್ತ್ರೀಯ ವಾದವಿವಾದಗಳ ಹೊದರನ್ನು ಪ್ರವೇಶಿಸುವುದನ್ನು ನಿರಾಕರಿಸುತ್ತದೆ. ತಾನು ಸಂವಿಧಾನಿಕ ಆಡಳಿತದ ಅಡಿಯಲ್ಲಿ ಸ್ಥಾಪಿಸಲ್ಪಟ್ಟ ಜಾತ್ಯತೀತ ಸಂಸ್ಥೆಯಾಗಿದ್ದು ಹಲವಾರು ಧಾರ್ಮಿಕ ವಿವರಣೆಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳುವುದರಿಂದ ದೂರವುಳಿಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ......**



**ಮು**ಖ್ಯ ನ್ಯಾಯಮೂರ್ತಿಗಳಾದ ರಂಜನ್ ಗೊಗೋಯ್, ಮತ್ತು ನ್ಯಾಯಮೂರ್ತಿಗಳಾದ ಎಸ್.ಎ. ಬಾಬ್ಡೆ, ಡಾ॥ ಧನಂಜಯ ಚಂದ್ರಚೂಡ್, ಅಶೋಕ್‌ಭೂಷಣ್, ಮತ್ತು ಎಸ್, ಅಬ್ದುಲ್ ನಜೀರ್ ಅವರುಗಳು ಬರೆದ ಅಯೋಧ್ಯಾ ತೀರ್ಪು ಹಲವು ಅಂಶಗಳ ವಿಶ್ಲೇಷಣೆಯ ವಸ್ತುವಾಗಿದೆ. ಜಾಗತಿಕವಾಗಿ, ಎಲ್ಲ ಪ್ರಜಾತಾಂತ್ರಿಕ ಸಂಸ್ಥೆಗಳೂ 'ಪ್ರಭಾವಳೀಯ' ಮೂಲಭೂತವಾದಿ ಸಂಪ್ರದಾಯವಾದಿ ಸಾಂವಿಧಾನಿಕ ನಿರಂಕುಶಾಧಿಕಾರಗಳ ಒತ್ತಡಕ್ಕೆ ಸಿಲುಕುತ್ತಿರುವ; ಮತ್ತು ರಾಜಕೀಯ ಧ್ರುವೀಕರಣ ಹಾಗೂ ಅತಿ ಪಕ್ಷಪಾತಗಳು ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನೂ ಅಥವಾ ಸಂಶಯವನ್ನೂ ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಗಳನ್ನು ವಿಧ್ವಂಸಗೊಳಿಸುವ ಕೃತ್ಯ ಎಂದು ಬಿಂಬಿಸುತ್ತಿರುವ ಕಾಲಘಟ್ಟದಲ್ಲಿ ಈ ತೀರ್ಪು ಹೊರಬರುತ್ತಿದೆ. 'ಆಂದೋಲಮಕಾರರು' ಇದನ್ನು ಮುಕ್ತ ಪ್ರಜಾತಾಂತ್ರಿಕ ಮೌಲ್ಯಗಳ ಪುನರ್‌ಸ್ಥಾಪನೆಯ ರಾಜಕಾರಣ ಎಂದು ಸಮರ್ಥಿಸುತ್ತಿದ್ದಾರೆ. ಸಾರ್ವಜನಿಕ ಸಂಗತಿಗಳ ವಿವೇಚಾಯುಕ್ತ ಚರ್ಚೆಯು ಆದ್ಯ ಕರ್ತವ್ಯವಾಗುತ್ತಿರುವಾಗ, ಅದನ್ನು ಬಹು ಕಷ್ಟಕರವಾಗಿಸುತ್ತಿರುವುದು ಆಶ್ಚರ್ಯದ ಸಂಗತಿಯಲ್ಲ. ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ತನ್ನ ನ್ಯಾಯಾಂಗಪರಿಶೀಲನೆಯ ಅಧಿಕಾರದ ಸಕ್ರಮತೆಯನ್ನು ಯಾವ ಜನರಿಂದ ಪಡೆಯುತ್ತದೆಯೋ ಆ ಜನರ ನಂಬಿಕೆಗಳನ್ನೇ ಭಗ್ನಗೊಳಿಸುತ್ತಿದೆ ಎಂಬ ಟೀಕೆಗೆ ಒಳಗಾಗುತ್ತಿದೆ.

"ನಮ್ಮಲ್ಲೊಬ್ಬರು ಈ ಮೇಲಿನ ವಿಚಾರಗಳು ಮತ್ತು ನಿರ್ದೇಶನಗಳ ಬಗ್ಗೆ ಸಮ್ಮತಿಯನ್ನು ಹೊಂದಿರುವಾಗಲೂ ವಿವಾದಿತ ಕಟ್ಟಡವು ಹಿಂದು ಭಕ್ತರ ಶ್ರದ್ಧೆ ಮತ್ತು ನಂಬಿಕೆಗಳಳ ಪ್ರಕಾರ ಪ್ರಭು ರಾಮನ ಜನ್ಮಸ್ಥಳ ಹೌದೇ ಎಂಬ ವಿಚಾರದಲ್ಲಿ ತಮ್ಮ ವಿವೇಚನೆಯನ್ನು ಒಂದು ಅನುಬಂಧದಲ್ಲಿ (addendum) ಪ್ರತ್ಯೇಕವಾಗಿ ದಾಖಲಿಸಿದ್ದಾರೆ" ಎಂಬ ಮಾತುಗಳೊಂದಿಗೆ ತೀರ್ಪು ಕೊನೆಗೊಳ್ಳುತ್ತದೆ. ಭಾರತೀಯರು ಅನಾಮಿಕ ತೀರ್ಪಿನಿಂದಾಳಲ್ಪಡದೇ ಇರುವಾವಿಸಲ್ಪಡದೇ ಇರುವ ಹಕ್ಕನ್ನೂ ಹೊಂದಿರುವುದರಿಂದ ಇದೊಂದು ಬಹು ಅಸಾಮಾನ್ಯ ಮತ್ತು ಅಸಂವಿಧಾನಿಕವಾದ ಕ್ರಮ. ೧೧೬ ಪುಟಗಳ, ಸಹಿಯಿಲ್ಲದ ಈ ಅನುಬಂಧವು ಅದರ ಮುಂದೆ ಬರುವ ೯೨೯ ಪುಟಗಳ ತೀರ್ಪಿಗೆ ಸಂಬಂಧಿಸಿದಂತೆ ಯಾವುದೇ ಅಭಿಪ್ರಾಯವನ್ನು ತಾ ಳಳು ನೆರವಾಗದ ಕಾರಣ ನಿರ್ಲಕ್ಷಿಸಲು ಅರ್ಹವೇ ಆಗಿದೆ ಕೆಲವು ಟೀಕಾಕಾರರು ಸರಿಯಾಗಿಯೇ ಹೇಳಿರುವಂತೆ ತೀರ್ಪು "ಹಿಂದುಗಳು"ಮತ್ತು "ಮುಸ್ಲಿಮರು" ಎಂದು ಮಾತನಾಡುವ ತಪ್ಪನ್ನು ಮಾಡಿದೆ. ಏಕೆಂದರೆ ಇವೆರಡೂ ಏಕರೂಪಿ ಸಾಮಾಜಿಕ ಮತ್ತು ಧಾರ್ಮಿಕ ಸಮುದಾಯಗಳಾಗಿಲ್ಲ.

ನ್ಯಾಯಾಲಯಗಳನ್ನು ನಿಷ್ಪಕ್ಷಪಾತವಾಗಿ ಮತ್ತು ಸಾಮಾಜಿಕ ಜವಾಬ್ದಾರಿಯೊಂದಿಗೆ ವಿಮರ್ಶಿಸುವುದಕ್ಕೆ ತೀರ್ಪುಗಳ ನಿಕಟವಾದ ಓದು ಅಗತ್ಯ. ಈ ತೀರ್ಪು, ೨೦೧೦ರಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ವಿವಾದಾತ್ಮಕ ರೀತಿಯಲ್ಲಿ, ವಿವಾದಿತ ಸ್ಥಳವನ್ನು ಮೂರು ಭಾಗಗಳನ್ನಾಗಿ ವಿಭಾಗಿಸಿ ಒಂದು ಭಾಗವನ್ನು ಪ್ರಭು ರಾಮನ ಕಾನೂನಾತ್ಮಕ ವ್ಯಕ್ತಿತ್ವಕ್ಕೆ (juristic personality) ಮತ್ತೊಂದು ಭಾಗವನ್ನು ನಿರ್ಮೋಹಿ ಅಖಾರಾಕ್ಕೆ ಮೂರನೆ ಭಾಗವನ್ನು ಸುನ್ನಿ ವಕ್ಫ್ ಮಂಡಳಿಗೆ ನೀಡಿದ್ದಕ್ಕೆವಿರುದ್ಧ ಸಲ್ಲಿಸಲಾಗಿದ್ದ ಮೇಲ್ಮನವಿಗೆ ಸಂಬಂಧಿಸಿತ್ತು. ಸರ್ವೋಚ್ಚ ನ್ಯಾಯಾಲಯವು ಮನವಿಯ ಬಗೆಗಿನ ವಾದವನ್ನು ೪೧ ದಿನಗಳ ಕಾಲ ಆಲಿಸಿ, ಮೊಘಲ್ ಸಾಮ್ರಾಜ್ಯ, ವಸಾಹತು ಆಳ್ವಿಕೆ ಮತ್ತು ಇಂದಿನ ಸಂವಿಧಾನಿಕ ಆಡಳಿತಗಳ ಕಾಲಗಳಲ್ಲಿ ಹರಡಿಕೊಂಡಿರುವ ಘಟನೆಗಳಿಗೆ ಸಂಬಂಧಿಸಿದಂತೆ "ಕಾನೂನು ಬದ್ಧ ತೀರ್ಮಾನದ" ಮೂಲಕ ತನ್ನ ಒಮ್ಮತದ ತೀರ್ಪನ್ನು ನೀಡಿದೆ. ಹಿಂದಿನ ಕೆಲವು ದಶಕಗಳಲ್ಲಿ ವಿಭಿನ್ನ ಅಭಿಪ್ರಾಯಗಳು ಹೆಚ್ಚುತ್ತಾ ನಡೆದ ಹಿನ್ನೆಲೆಯಲ್ಲಿ ನ್ಯಾಯಾಲಯವು ಒಮ್ಮತದ ತೀರ್ಮಾನಕ್ಕೆ ಬಂದಿರುವುದು ಆರೋಗ್ಯಕರ. . ಅಲಹಾಬಾದ್ ಉಚ್ಚ ನ್ಯಾಯಾಲಯದ ತೀರ್ಪು ೪೩೦೪ ಪುಟಗಳಷ್ಟು ದೀರ್ಘವಾಗಿದ್ದುದನ್ನು ನೆನಪಿಸಿಕೊಂಡಾಗ ಅದಕ್ಕೆ ವ್ಯತಿರಿಕ್ತವಾದ ಈ ಒಮ್ಮತದ ತೀರ್ಪು ೯೨೯ ಪುಟಗಳಲ್ಲಿ ಸಾಧಿತವಾಗಿರುವುದು ಪವಾಡಸದೃಶ ಸಂಗತಿಯೇ ಆಗಿದೆ.

ನ್ಯಾಯಾಲಯವು ಆಸ್ತಿ ವಿವಾದವನ್ನು ಮಾತ್ರ ಆಲಿಸಿ, ವಿವಾದದ ಇತರೆ ವ್ಯಾಪಕ ಸಂವಿಧಾನಿಕ ಆಯಾಮಗಳನ್ನು ಪರಿಶಿಲಿಸಬೇಕೆಂಬ ಕರೆಯನ್ನು ತಿರಸ್ಕರಿಸಿದ್ದನ್ನು 'ಆಂದೋಲನಕಾರ'ರ ಆತಂಕ ಪರಿಹಾರದ ನಿಟ್ಟುಸಿರುಗಳ ಮಹಾಪೂರವು ಮರೆಸಿರುವಂತೆ ಕಾಣಿಸುತ್ತದೆ. ಇತರೆ ಎಷ್ಟೋ ಧಾರ್ಮಿಕ, ಸಾಮಾಜಿಕ, ಸರ್ಕಾರೀ ಪ್ರಯತ್ನಗಳು ಮುಗ್ಗರಿಸಿದಾಗ ಅದು ವಿಚಾರವನ್ನು ನ್ಯಾಯಾಲಯ ಆದೇಶದ ಮಧ್ಯಸ್ತಿಕೆಯ ಮೂಲಕ ತೀರ್ಮಾನಿಸಲು ಪ್ರಯತ್ನಿಸಿತು. ಎಲ್ಲ ಸಂಬಂಧಿತ ಪಕ್ಷಗಳೂ ನ್ಯಾಯಾಲಯದ ತೀರ್ಮಾನಕ್ಕೆ ಬದ್ದರಾಗಿರುವುದಾಗಿ ಘೋಷಿಸಿಕೊಂಡವು. "ಕಟ್ಟಡವು ನಿಂತಿರುವ ಸ್ಥಳದಲ್ಲಿ ರಾಮಜನ್ಮಭೂಮಿ ಬಾಬ್ರಿ ಮಸೀದಿಗಳ ನಿರ್ಮಾಣಕ್ಕೆ ಪೂರ್ವದಲ್ಲಿ (ಒಳಗಿನ ಮತ್ತು ಹೊರಗಿನ ಅಂಗಳಗಳ ಆವರಣಗಳೂ ಒಳಗೊಂಡಂತೆ) ಯಾವುದಾದರೂ ಹಿಂದು ದೇವಾಲಯ ಅಥವಾ ಇತರೆ ಹಿಂದು ಧಾರ್ಮಿಕ ಕಟ್ಟಡವು ಇತ್ತೇ ಎಂಬ ವಿಚಾರದಲ್ಲಿ ಸಲಹಾ ಅಭಿಪ್ರಾಯ ಪಡೆಯುವ ವಿಚಾರಕ್ಕೂ ನ್ಯಾಯಾಲಯವು ಸಮ್ಮತಿಸದೇ ಇದ್ದ ಬಗ್ಗೆ ಯಾವುದೇ ಕಡೆಯ ಕಾರ್ಯಕರ್ತರ ಗದ್ದಲಗಳೂ ಕಾಣಲಿಲ್ಲ.

ಬಾಕಿಯಿದ್ದ ಎಲ್ಲಾ ಮೊಕದ್ದಮೆಗಳನ್ನು ರದ್ದು ಮಾಡಿ, ಮಿಕ್ಕವನ್ನು ಮಾತ್ರ ಮಾನ್ಯ ಮಾಡುವ, ಅಯೋಧ್ಯ ವಶಪಡಿಸಿಕೊಳ್ಳುವ ಅಧಿನಿಯಮ ೧೯೯೩, ಪರಿಚ್ಛೇದ ೪ (೩ ) ಕ್ಕೆ ಸಂಬಂಧಿಸಿದ ೧೯೯೪ರ ತೀರ್ಮಾನದ ವಿಚಾರದಲ್ಲೂ ಕೂಡ ಯಾವುದೇ ಪ್ರಮುಖ ಪ್ರತಿಭಟನೆಗಳು ನಡೆದದ್ದೂ ನನಗೆ ನೆನಪಿಲ್ಲ. ರಾಮನ ಜನ್ಮವು ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಅಯೋಧ್ಯೆಯಲ್ಲೇ ಆಯಿತು ಎಂಬ ನಂಬಿಕೆ ಮತ್ತು ವಿಶ್ವಾಸವು ಹಿಂದುಗಳದ್ದು ಎಂಬ ವಿಚಾರದಲ್ಲಿ ನ್ಯಾಯಾಲಯದ ಎದುರು ಯಾವುದೇ ವಿವಾದಗಳಿಲ್ಲ. ವಿವಾದವಿರುವುದು ವಿವಾದಿತ ಬಾಬ್ರಿ ಮಸೀದಿಯ ಕೇಂದ್ರ ಗುಮ್ಮಟದ ಅಡಿಯಲ್ಲಿ ರಾಮನ ಜನ್ಮವಾಯಿತೇ ಎಂಬ ವಿಚಾರಕ್ಕೆ ಮಾತ್ರ ಎಂಬುದನ್ನೂ ಮೊಕದ್ದಮೆಯನ್ನು ಆಲಿಸುವ ಸಮಯಕ್ಕೆ ಸ್ಪಷ್ಟಪಡಿಸಲಾಯಿತು. ಮುಸ್ಲಿಂ ಕಕ್ಷಿದಾರರು ಸ್ಪಷ್ಟವಾಗಿ ಬಾಬ್ರಿ ಮಸೀದಿಯ ಸ್ಥಳದಲ್ಲಿ ರಾಮಜನ್ಮಭೂಮಿ ದೇವಾಲಯ ಇದ್ದುದನ್ನು ನಿರಾಕರಿಸಿದ್ದಾರೆ. ನಾನಿಲ್ಲಿ ಕೆಲವು ಸಮಕಾಲೀನ ನ್ಯಾಯಿಕ ಹಿನ್ನೆಲೆಯ ಛಾಯಾ ರೂ[ರೇಖೆಗಳನ್ನು(silhouetting) ಮಾತ್ರ ರಚಿಸುತ್ತಿದ್ದೇನೆ. ಮತ್ತು ಅಂತಿಮ ತೀರ್ಮಾನದ ಯಾವುದೇ ಮೌಲ್ಯಮಾಪನವು ಇದನ್ನು ಗಮನಿಸಬೇಕು ಎಂಬುದು ನನ್ನ ದೃಢನಂಬಿಕೆ.

ಈ ತೀರ್ಮಾನವು ಭವಿಷ್ಯದಲ್ಲಿ ಇತರೆ ಪೂಜಾ ಸ್ಥಳಗಳನ್ನು ಅಪವಿತ್ರಗೊಳಿಸುವುದನ್ನು ಸಾಧ್ಯಗೊಳಿಸುವುದೆ? ತಾತ್ವಿಕವಾಗಿ ದಾರ್ಮಿಕ ಪೂಜಾ

ಸ್ಥಳಗಳ ಅಧಿನಿಯಮ ೧೯೯೧ನ್ನು ರದ್ದುಗೊಳಿಸುವುದು ಸಾಧ್ಯ. ಆದರೆ ಯಾವುದನ್ನು ಮಾಡುವ ಸಾಧ್ಯತೆ ಬಲವಾಗಿರುತ್ತದೋ ಅದು ಸಾಮಾನ್ಯವಾಗಿ ಮಾಡಲ್ಪಡುವುದಿಲ್ಲ. ಈಗ ನ್ಯಾಯಾಲಯವು ಜಾತ್ಯತೀತತೆಯು ಒಂದು ಸಂವಿಧಾನಿಕ ಬದ್ಧತೆ ಎಂಬುದನ್ನು ಒತ್ತಿ ಹೇಳಿರುವುದರಿಂದ ಮತ್ತು ಎಲ್ಲ ಧರ್ಮಗಳ ಸಮಾನತೆಯನ್ನು ಎತ್ತಿ ಹಿಡಿದಿರುವುದರಿಂದ, ಜಾತ್ಯತೀತತೆಯು ಸಂವಿಧಾನದ ಮೂಲಭೂತ ಲಕ್ಷಣವೆಂಬುದನ್ನು ಸ್ಪಷ್ಟಪಡಿಸಿರುವುದರಿಂದ ಯಾವುದೇ ಸಂಸದೀಯ ಬಹುತ್ವಕ್ಕೆ(ಆಗ ನ್ಯಾಯಾಲಯದ ಮುಂದಿದ್ದ ಅಯೋಧ್ಯಾ ಪ್ರಕರಣವನ್ನು ಹೊರತುಪಡಿಸಿ) ಆಗಸ್ಟ್ ೧೫ ೧೯೪೭ರಲ್ಲಿ ಇದ್ದಂತಹ ಯಾವುದೇ ಪೂಜಾ ಸ್ಥಳದ ಪರಿವರ್ತನೆ ಅಥವಾ ಬದಲಾವಣೆ ಬಹಳ ಕಷ್ಟವಾಗುತ್ತದೆ. ಈ ರೀತಿಯಲ್ಲಿ ಘೋಷಿಸಲಾಗಿರುವ ತತ್ವಗಳು "ಅಕಳಂಕಾತ್ಮಕವು"(Non derogable) ಮತ್ತು "ಹಿಂದಕ್ಕೆ ಬರಲಾರದಂತಹವು." (Non retrogression)

ಯಾವುದೇ ರೀತಿಯ ಕಾನೂನು ಅಥವಾ ಸಕ್ರಮ ನೀತಿ ಸಂಹಿತೆಯ ಆಧಾರ ರಚನೆ ಇರಲೇ ಇಲ್ಲ ಎಂಬ ರೀತಿಯಲ್ಲಿ ಪಕ್ಷ ರಾಜಕಾರಣದ ಪುಂಡರು ನಡೆದುಕೊಳ್ಳಬಹುದಾದ ಭವಿಷ್ಯದ ಒಂದು ಚಿತ್ರವನ್ನು ಈ ತೀರ್ಪಿನ ಟೀಕಾಕಾರು ನಿರೂಪಿಸುವ ಸಾಧ್ಯತೆ ಇದೆ. ಅದರೆ ಅಂತಹುದು ಭವಿಷ್ಯದಲ್ಲಿ ನಡೆಯಬಲ್ಲುದೆ? ದುರದೃಷ್ಟವಶಾತ್ ನಡೆದೇಬಿಟ್ಟರೆ ಇಂತಹ ನಡವಳಿಕೆಯನ್ನು ಕಾನೂನುಬಾಹಿರವೆಂದು ಘೋಷಿರುವ ನ್ಯಾಯಾಲಯವನ್ನು ಅದಕ್ಕೆ ಜವಾಬ್ದಾರವನ್ನಾಗಿ ಮಾಡಬಹುದೆ?

ನ್ಯಾಯಾಲಯವು ಒಡೆತನದ ಹಕ್ಕಿನ (title) ಪ್ರಶ್ನೆಯನ್ನು ಯಾವ ಕೋಮಿನ ನಂಬಿಕೆ ಪ್ರಬಲವಾದುದು ಎಂಬುದರಿಂದ ನಿರ್ಧರಿಸುವ ಮಟ್ಟಕ್ಕೆ ಇಳಿಸಲಾರದು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಅದು ರಾಮಲಲ್ಲಾ ವಿಗ್ರಹಕ್ಕೆ ನ್ಯಾಯಿಕ ವ್ಯಕ್ತಿತ್ವವನ್ನು ನೀಡಿ ಆಸ್ಥಾನ್ ಶ್ರೀರಾಮ ಜನ್ಮಭೂಮಿ ಒಂದು ಕಾನೂನಿನ ವ್ಯಕ್ತಿತ್ವ ಅಲ್ಲ ಎಂಬುದನ್ನು ವಿವರಿಸುತ್ತದೆ. ಒಂದು ಕಷ್ಟಕರ ಸಮಯದಲ್ಲಿ ಜಾತ್ಯತೀತತೆಯ ಈ ಎಲ್ಲಾ ಪ್ರಬಲ ಆಶ್ವಾಸನೆಗಳನ್ನು ಒಂದು ಒಮ್ಮತದ ತೀರ್ಪಿನಲ್ಲಿ ನೀಡಲಾಗಿದೆ. ಒಂದು ನ್ಯಾಯಿಕ ವೇದಿಕೆಯ ತೀರ್ಮಾನಕ್ಕೆ ರಾಜಕೀಯ ಉದ್ದೇಶಗಳನ್ನು ಆರೋಪಿಸುವುದು ಅಥವಾ ಭವಿಷ್ಯದಲ್ಲಿ ಅದು ಸಂವಿಧಾನಿಕ ಜಾತ್ಯತೀತತೆಗೆ ಬಾಹ್ಯವಾದ ಕಾರಣಗಳೊಂದ ಪ್ರಭಾವಿತವಾಗಬಹುದು ಎಂದು ಹೇಳುವುದು ಉಚಿತವಲ್ಲ.

೧೯೯೨ ರ ಡಿಸೆಂಬರ್‌ನಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸುವ ಮೂಲಕ ಮಾಡಿದ ತಪ್ಪಿನ ನಷ್ಟಪರಿಹಾರಾರ್ಥ(restitution) ಅನುಚ್ಛೇದ ೧೪೨ರ ಅಡಿ ತನ್ನ ಅಧಿಕಾರವನ್ನು ಬಳಸಿ ನ್ಯಾಯಾಲಯ ಸುನ್ನಿ ಕೇಂದ್ರೀಯ ವಕ್ಫ್ ಮಂಡಳಿಗೆ ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣಕ್ಕಾಗಿ ಐದು ಎಕರೆ ಪರ್ಯಾಯ ಭೂಮಿಯನ್ನು ನೀಡಲು ನಿರ್ದೇಶಿಸಿದ್ದು ತೀರ್ಪಿನ ಬಹು ಮುಖ್ಯ ವಿವಾದ: ಅದು ಕೇವಲ ಅನುಚ್ಛೇದ ೧೪೨ರ ಅಡಿಯಲ್ಲಿ ಬರುವ ನ್ಯಾಯಿಕ ಅಧಿಕಾರದ ಕೃತ್ಯವಾದರೆ ಆಗ ಈ ತೀರ್ಮಾನದ ಹಿಂದಿರುವ ಅನುಚ್ಛೇದದ ಓದುವಿಕೆ ಸಮರ್ಥನೀಯವೆನ್ನಿಸಬಹುದು. ಆದರೆ ನಾನು ತೀರ್ಮಾನವನ್ನು ಭಿನ್ನವಾಗಿ ಓದಿದ್ದೇನೆ – ಇಲ್ಲಿ ನ್ಯಾಯಾಲಯವು ಸಂವಿಧಾನಿಕ ಅಧಿಕಾರವನ್ನು ಕರ್ತವ್ಯದೊಂದಿಗೆ ಜೋಡಿಸುತ್ತದೆ. ಅಂದರೆ ಇದು ಸಂವಿಧಾನಿಕ ಬಕ್ಷೀಸಿನ ಕೃತ್ಯವಲ್ಲ, ಸಂವಿಧಾನದ ಕರ್ತವ್ಯದ ಮುಂದುವರಿಕೆಯಲ್ಲಿ ಒಂದು ಹೆಜ್ಜೆ. ನ್ಯಾಯಾಲಯವು ಇದನ್ನು ಬಹು ಪರಿಣಾಮಕಾರಿಯಾಗಿ, ಚೆನ್ನಾಗಿ ನಿರ್ವಹಿಸಿದೆ. ನಷ್ಟಪರಿಹಾರ (restitution) ಒಂದು ಬಕ್ಷೀಸಲ್ಲ. ಅದು ೧೯೯೨ ರ ಡಿಸೆಂಬರ್‌ನ ಕರಾಳ ಘಟನೆಗಳಿಂದ ಸುಧಾರಿಸಿಕೊಳ್ಳುತ್ತಿರುವವರಿಗೆ ಸಂಪೂರ್ಣ ನ್ಯಾಯ ಒದಗಿಸಲಾಗಿದೆ ಎಂಬುದನ್ನು ತುಸು ತಡವಾಗಿಯಾದರೂ. ಖಚಿತಪಡಿಸಿಕೊಳ್ಳುವ ಮನೋಸಂಕಲ್ಪದ(realization) ಪ್ರತೀಕ. ಈಗ ಅಪಾಯ ಮತ್ತು ತೊಂದರೆಯಲ್ಲಿರುವ ಸಮುದಾಯಗಳಿಗಾಗಿ ಇನ್ನೂ ಹೆಚ್ಚಿನ ಪರಿಹಾರದ ಕರ್ತವ್ಯಗಳನ್ನು ಮಾಡುವುದು ಕಾರ್ಯಾಂಗ ಮತ್ತು ಶಾಸಕಾಂಗಳ ಕೆಲಸ. ಈ ಗುರಿಯನ್ನು ಸಾಧಿಸಲು ಇರುವ ರಾಜಕೀಯ ಪ್ರಕ್ರಿಯೆಗಳನ್ನು ಅವು ಕ್ರಿಯಾಶೀಲಗೊಳಿಸಬೇಕು.

ಸಾಂವಿಧಾನಿಕವಾಗಿ ಸಮುದಾಯಗಳನ್ನು ಅನ್ಯಗೊಳಿಸುವ(othering) ಕೃತ್ಯವನ್ನು ಎಚ್ಚರದಿಂದ ತಪ್ಪಿಸುವ ಕೆಲಸದಲ್ಲಿ ನ್ಯಾಯಾಲಯವು ಯಶಸ್ವಿಯಾಯಿತೇ? ೧೯೪೯ರ ಡಿಸೆಂಬರ್ ೨೨/೨೩ರ ರಾತ್ರಿ ಬಾಬ್ರಿ ಮಸೀದಿಯ ಕೇಂದ್ರೀಯ ಗುಮ್ಮಟದ ಅಡಿಯಲ್ಲಿ ಹಿಂದು ಪ್ರತಿಮೆಗಳನ್ನು ಸ್ಥಾಪಿಸಿದ್ದು ಮತ್ತು ೧೯೯೨ರಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ್ದು ಕಾನೂನಿನ ಆಡಳಿತದಎಗ್ಗಿಲ್ಲದ ಉಲ್ಲಂಘನೆಯಾಗಿದೆ ಎಂಬುದನ್ನು ನ್ಯಾಯಾಲಯವು ದೃಢವಾಗಿ ನಂಬುತ್ತದೆ. ಮುಂದುವರಿದು ನ್ಯಾಯಾಲಯವು ದೈವಶಾಸ್ತ್ರೀಯ ವಾದವಿವಾದಗಳ ಹೊದರನ್ನು ಪ್ರವೇಶಿಸುವುದನ್ನು ನಿರಾಕರಿಸುತ್ತದೆ: ತಾನು ಸಂವಿಧಾನಿಕ ಆಡಳಿತದ ಅಡಿಯಲ್ಲಿ ಸ್ಥಾಪಿಸಲ್ಪಟ್ಟ ಜಾತ್ಯತೀತ ಸಂಸ್ಥೆಯಾಗಿದ್ದು ಹಲವಾರು ಧಾರ್ಮಿಕ ವಿವರಣೆಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಳ್ಳುವುದರಿಂದ ದೂರವುಳಿಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ತನ್ನ ತೀರ್ಪಿಗೆ ದಾರಿಮಾಡಿದ್ದು ನಂಬಿಕೆಯಲ್ಲ, ಜಾತ್ಯತೀತ ಕಾನೂನು ಮತ್ತು ಸಾಕ್ಷ್ಯಗಳೇ ಎಂಬುದನ್ನು ನ್ಯಾಯಾಲಯವು ಸ್ಪಷ್ಟಪಡಿಸುತ್ತದೆ

ಟೀಕಾಕಾರರು ಎತ್ತಿರುವ ಮತ್ತೊಂದು ತಕರಾರೆಂದರೆ, ನ್ಯಾಯಾಲಯವು ಸಾಕ್ಷ್ಯಗಳ ಬಗ್ಗೆ 'ಸತ್ಯ ಸಾಧ್ಯತೆ'ಗಳ (preponderance of probabilities) ಅಂಶವನ್ನು ಅನ್ವಯ ಮಾಡಿರುವ ರೀತಿಯ ಬಗ್ಗೆ. ಮತ್ತು ಭಾರತದ ಪುರಾತತ್ವ ಸರ್ವೇಕ್ಷಣೆಯ ವರದಿಯನ್ನು ಜಾತ್ಯತೀತ ಸಾಕ್ಷ್ಯವೆಂದು ಪರಿಗಣಿಸಿ ನ್ಯಾಯಾಲಯವು ಅದನ್ನು ಅವಲಂಬಿಸಿರುವ ಬಗ್ಗೆ. ಪುರಾತತ್ವ ಸರ್ವೇಕ್ಷಣ ಇಲಾಖೆಯನ್ನು ನ್ಯಾಯಾಲಯವು ಸತತವಾಗಿ ಎರಡು ಪೂರ್ವ ಎಚ್ಚರಿಕೆಗಳಿಗೆ (caveat) ಒಳಪಡಿಸಿದೆ– ಒಂದು, ಈ ಮೊದಲೇ ಇದ್ದ ಕಟ್ಟಡದ ಬಗ್ಗೆ ಸಾಕ್ಷ್ಯ ದೊರೆತಿರುವ ಬಗ್ಗೆ, ಇನ್ನೊಂದು ಅಡಿಯಲ್ಲಿದ್ದ ಕಟ್ಟಡವನ್ನು ಕೆಡವಿ ಅದರ ಮೇಲೆ ಬಾಬ್ರಿ ಮಸೀದಿಯನ್ನು ನಿರ್ಮಿಸಲಾಗಿದೆ, ಅದರ ಅವಶೇಷಗಳನ್ನು ಬಾಬ್ರಿ ಮಸೀದಿಯ ಅಲಂಕಾರಕ್ಕೆ ಬಳಸಲಾಗಿದೆ ಎಂಬ ವಿಚಾರದಲ್ಲಿ ಯಾವುದೇ ಸಾಕ್ಷ್ಯವಿಲ್ಲದಿರುವ ಬಗ್ಗೆ.

'ಸಾಧ್ಯತೆಗಳ ಸಮತೋಲನ'ದ ತರ್ಕಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು, ಮಸೀದಿ ನಿರ್ಮಾಣವಾದ ನಂತರ ಕಳೆದು ಹೋಗಿರುವ ೩೭೫ ವರ್ಷಗಳಿಂದ ಬ್ರಿಟಿಷರು ಇಟ್ಟಿಗೆ ಗೋಡೆ ನಿರ್ಮಿಸುವವರೆಗೆ ಸುನ್ನಿ ವಕ್ಫ್ ಮಂಡಳಿಯು ವಿವಾದಿತ ಸ್ಥಳದ ಬಗ್ಗೆ ತಾನು ಹೊಂದಿರುವ ಸ್ವಾಮ್ಯದ ಹಕ್ಕಿನ ಮಂಡನೆಗೆ (possessory claim) ಸಂಬಂಧಿಸಿದಂತೆ ಯಾವುದೇ ಸ್ಪಷ್ಟ ಸಾಕ್ಷ್ಯವನ್ನು ನೀಡಿಲ್ಲ. ಅಥವಾ ಈ ಅವಧಿಯಲ್ಲಿ ಅಲ್ಲಿ ನಮಾಜ್ ಮಾಡಿರುವ ಬಗ್ಗೆ ಸಾಕ್ಷ್ಯ ನೀಡಿಲ್ಲ ಎಂದು ತಿಳಿಸಿದೆ. ನಾಗರೀಕ ನ್ಯಾಯಶಾಸ್ತ್ರದಲ್ಲಿ (Civil jurisprudence) ಸಾಧ್ಯತೆಗಳ ಸಮತೋಲನದ '(balance of probabilitie) ತರ್ಕವನ್ನು ಒಪ್ಪಿಕೊಳ್ಳಲಾಗುತ್ತದೆ. ಇದಕ್ಕೆ ಸಮಾನವಾಗಿ ಇಂತಹ ಮೊಕದ್ದಮೆಗಳಲ್ಲಿ ಸ್ವಾಭಾವಿಕವಾಗಿ ತಡೆಯಿಲ್ಲದ, ಸತತವಾದ, ಪ್ರತಿಕೂಲ ಸ್ವಾಮ್ಯಕ್ಕೆ(adverse possession) ಸಾಕ್ಷ್ಯ ನೀಡುವ ಹೊಣೆ, ಹಕ್ಕನ್ನು ಮಂಡಿಸುವ ಪಕ್ಷದ ಮೇಲಿರುತ್ತದೆ.

ಅಯೋಧ್ಯಾ ಮೊಕದ್ದಮೆಯಲ್ಲಿ ಬಾಬ್ರಿ ಮಸೀದಿಗೆ ಹಿಂದುಗಳು ತಡೆಯಿಲ್ಲದ ಪ್ರವೇಶವನ್ನು ಹೊಂದಿದ್ದರು ಎಂಬುದಕ್ಕೆ ಅಲ್ಲಿದ್ದ ಪ್ರತಿಮೆಗಳು ಸಾಕ್ಷಿ ಎಂಬುದನ್ನು ನಿರೂಪಿಸುವಲ್ಲಿ ದೇವತೆಗಳ ವಕೀಲರು ಸಫಲರಾಗಿದ್ದರು. ಆದರೆ ಇಂತಹದೇ ಸಾಕ್ಷ್ಯವನ್ನು ಒದಗಿಸುವಲ್ಲಿ ಸುನ್ನಿ ವಕ್ಫ್ ಮಂಡಳಿಯ ವಕೀಲರು ಸಫಲರಾಗಿರಲಿಲ್ಲ. ಇಲ್ಲಿ ಪುನಃ ೧೮೫೭ರಲ್ಲಿ ಔದ್ ಸಂಸ್ಥಾನವನ್ನು ಬ್ರಿಟಿಷರು ಸೇರ್ಪಡೆ ಮಾಡಿಕೊಳ್ಳುವಾಗ ವಕ್ಫ್ ದಾಖಲೆಗಳು ನಾಶವಾಗಿರಬಹುದು ಎಂಬುದು ಅಥವಾ ಇಸ್ಲಾಮಿಕ್ ಆಳ್ವಿಕೆಯ ಕಾಲದಲ್ಲಿ ಮಸೀದಿಯನ್ನು ಒಂದು ಪ್ರಾರ್ಥನಾ ಸ್ಥಳವಾಗಿ ಬಳಸುವುದು ಸಂಭವನೀಯ ಮತ್ತು ನಂಬಲರ್ಹ; ಆದರೆ ಇಂತಹ ಪ್ರಸಂಗಗಳಲ್ಲಿ ಯಾವುದೇ ದಾಖಲೆಗಳ ಪುರಾವೆ ಇಲ್ಲದ ಬರೀ ಹೇಳಿಕೆಗಳಿಗೆ ನ್ಯಾಯಿಕ ವಿಧಿಗಳಲ್ಲಿ ಸಾಕ್ಷ್ಯದ ಮೌಲ್ಯವಿಲ್ಲ.

ಇತಿಹಾಸ, ತತ್ವಶಾಸ್ತ್ರ, ಮತ್ತು ಧರ್ಮಗಳಿಗೆ ಸಂಬಂಧಿಸಿದಂತೆ ರಾಜಕೀಯ ವಾದವಿವಾದಗಳಿಂದ ಕಾನೂನು ದೂರವುಳಿಯಬೇಕೆಂದು ನ್ಯಾಯಾಲಯವು ದಾಖಲಿಸಿದೆ. ನ್ಯಾಯಾಲಯವು ಶ್ರದ್ಧೆ ಅಥವಾ ನಂಬಿಕೆಗಳ ಮೇಲೆ ತೀರ್ಮಾನ ತೆಗೆದುಕೊಳ್ಳಲಾಗದು. ಸಾಕ್ಷ್ಯಾಧಾರಗಳ ಆಧಾರದ ಮೇಲೆ ಮತ್ತು ಸಾಕ್ಷ್ಯಗಳನ್ನು ಕುರಿತ ನಿರ್ಧರಿತ ತತ್ವಗಳ ಆಧಾರದಲ್ಲಿ ಮಾತ್ರವೇ ಅದು ಒಡೆತನದ ಹಕ್ಕಿನ (title claim) ಬಗ್ಗೆ ನ್ಯಾಯನಿರ್ಣಯ ಮಾಡಬಹುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಒಡೆತನದ ಹಕ್ಕಿನ ವಿವಾದಕ್ಕೆ ಸಂಬಂಧಿಸಿದಂತೆ ತೀರ್ಮಾನ ನೀಡುವಾಗ ನ್ಯಾಯಾಲಯವು ಇದನ್ನೇ ಮಾಡಿದೆ.

ಪ್ರಸ್ತುತ ಮೊಕದ್ದಮೆಯ ವಿಚಾರದಲ್ಲಿ ಆದಂತೆ ಭಾರೀ ಗಾತ್ರದ ತೀರ್ಪು ನೀಡುವಾಗ ಯಾವಾಗಲೂ ತೀರ್ಪಿನ ನೀಡಿಕೆಯ ನಂತರ, ತಕ್ಷಣದಲ್ಲಿ ಬರುವ ಒಂದು ಅಧಿಕೃತ ವಿಶ್ಲೇಷಣೆಯು ದುಡುಕಿನದ್ದಾಗಿರುವ ಅಪಾಯವನ್ನು ಹೊಂದಿರುತ್ತದೆ. ಸಮಾನ ಅಸಾಮನ್ಯತೆ ವಿಷಯಗಳೆನಿಸಿದ – ಧರ್ಮ, ನಂಬಿಕೆ, ಇತಿಹಾಸ, ಪುರಾತತ್ವಶಾಸ್ತ್ರ – ಇವುಗಳ ವಿಶಾಲ ಹರವು ಈ ವಿವಾದದಲ್ಲಿ ಮಿಳಿತವಾಗಿದೆ. ತನ್ನ ತೀರ್ಪಿನಲ್ಲಿ ಅಗ್ರ ನ್ಯಾಯಾಲಯವೇ ಭಾರತದ ಕಲ್ಪನೆಯಷ್ಟೇ ಪುರಾತನವಾದ ಒಂದು ವಿವಾದವನ್ನು ಬಗೆಹರಿಸುವ ಕಾರ್ಯವನ್ನು ತನಗೆ ನೀಡಲಾಗಿದೆ ಎಂಬುದನ್ನು ದಾಖಲಿಸಿದೆ. ಆದರೂ ಬಹುಶಃ ಈ ಮೊಕದ್ದಮೆಯ ಪರಿಣಾಮಗಳನ್ನು ಕಾನೂನು ಮತ್ತು ಸಾಂವಿಧಾನಿಕತೆಗಳ ಸ್ಪಟಿಕದ ಮೂಲಕ ನಿರುದ್ವಿಗ್ನವಾಗಿ ನೋಡಬೇಕೆಂಬುದು ಸೂಕ್ತ.



**(ದೆಹಲಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಪ್ರೊ. ಉಪೇಂದ್ರ ಬಕ್ಷಿಯವರು ಈಗ ಬ್ರಿಟನ್‌ನ ವಾರ್ವಿಕ್ ವಿಶ್ವದ್ಯಾಲಯದಲ್ಲಿ ಕಾನೂನುಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ)**

**(ಕೃಪೆ: ಔಟ್‌ಲುಕ್, ೨೫, ನವೆಂಬರ್, ೨೦೧೯)**

# ಮಹಾತ್ಮ ಗಾಂಧಿ ಮತ್ತು ಶ್ರೀರಮಣ ಮಹರ್ಷಿಗಳು

ಮೂಲ: ಕೆ.ವಿ. ಸುಬ್ರಹ್ಮಣ್ಯನ್
ಕನ್ನಡಕ್ಕೆ: ಬಿ.ಎಸ್. ದಿವಾಕರ

**ಗಾಂಧೀಜಿಯವರ ನಿಯತಕಾಲಿಕ ಒಂದರ ಲೇಖನವನ್ನು ಹಳೆಯ ಸಭಾಂಗಣದಲ್ಲಿ ಓದುತ್ತ ಭಗವಾನರು ಹೇಳುತ್ತಾರೆ, " ನೋಡಿ ನಾವಿಲ್ಲಿ ಕುಳಿತು ಇದನ್ನೆಲ್ಲ ಹೇಳುತ್ತಿದ್ದೇವೆ. ಆದರೆ ಗಾಂಧೀಜಿಯವರೂ ಪ್ರಕ್ಷೋಭೆಗಳ ನಡುವೆ ಬದುಕುತ್ತಾ ಇದನ್ನು ಹೇಳುತ್ತಿದ್ದಾರೆ". ಗಾಂಧೀಜಿಯವರಂತಹ ಸತ್ಯ ಹಾಗೂ ಸ್ವಯಂ ಅರಿವಿನ ಸಾಕ್ಷಾತ್ಕಾರದ ಅನ್ವೇಷಕ, ಸಂಪೂರ್ಣವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗಿಹೋಗಿದ್ದು ಅಸಂಗತ, ಅಸಮಂಜಸ ಎಂದು ಭಗವಾನರಿಗೆ ತೋರಲಿಲ್ಲ. ಅವರು ಒಮ್ಮೆ ಹೇಳುತ್ತಾರೆ, "ಒಬ್ಬ ಗುರುವಿಗೆ, ಯಾರೊ ಮತ್ತೊಬ್ಬ ಏನು ಮಾಡಿದ, ಮಾಡಲಿಲ್ಲ ಎಂಬುದರ ಬಗ್ಗೆ ಆಸಕ್ತಿ ಇರುವುದಿಲ್ಲ. ನಾನು ಮಾಡಿದೆ ಎಂಬ ಭಾವದಿಂದ ಆತ ಮುಕ್ತನಾಗಿದ್ದೇನೆಯೇ ಎಂಬುದನ್ನು ಮಾತ್ರ ಗಮನಿಸುತ್ತಾನೆ."**



ಮಹಾತ್ಮಗಾಂಧಿ, ಭಗವಾನ್ ರಮಣರ ಬಗ್ಗೆ ಅತ್ಯುನ್ನತ ಗೌರವ ಹೊಂದಿದ್ದರು. ಅಂತೆಯೇ ಭಗವಾನ್ ಕೂಡ ಗಾಂಧೀಜಿಯವರ ಬಗ್ಗೆ ಅಪಾರ ಆದರ ಅಚ್ಚರಿ ವ್ಯಕ್ತಪಡಿಸುತ್ತಿದ್ದರು ಎಂಬುದು ಭಗವಾನ್ ರಮಣರ ಶಿಷ್ಯವೃಂದಕ್ಕೆ ತಿಳಿದ ವಿಷಯವೇ ಆಗಿತ್ತು.

ಒಮ್ಮೆ ಗಾಂಧೀಜಿಯವರನ್ನು ಶ್ರೀ ಅರಬಿಂದೋ ಹಾಗೂ ರಮಣ ಮಹರ್ಷಿಗಳಿಗೆ ಹೋಲಿಸಿದಾಗ, -" ಶ್ರೀ ಅರಬಿಂದೋ ಹಾಗೂ ರಮಣರು ತಮ್ಮ ಅರಿವಿನ ನೆಲೆಗಳ ಸಾಕ್ಷಾತ್ಕಾರ ಮಾಡಿಕೊಂಡವರು, ನಾನಿನ್ನೂ ಹಾಗೆ ಆಗಬೇಕಿದೆ" ಎಂದು ಹೇಳಿ ಗಾಂಧೀಜಿ ಹೋಲಿಕೆಯನ್ನು ನಯವಾಗಿ ನಿರಾಕರಿಸುತ್ತಾರೆ. ಭಗವಾನರ ಪ್ರಶಾಂತ ಸಾನಿಧ್ಯದ ಮಡಿಲಲ್ಲಿ ತಮ್ಮ ಅಂತರಂಗದ ಶಾಂತಿ ಸಿದ್ಧಿಸಿ, ತಮ್ಮ ಸಾಮರ್ಥ್ಯ ಶಕ್ತಿಗಳನ್ನು ಮರು ಪಡೆಯುವಷ್ಟು ದೀರ್ಘಕಾಲ ಇಲ್ಲೇ ನೆಲೆಸಿ ಎಂದು ಹೇಳುತ್ತಿದ್ದ ರಮಣರ ಬಗ್ಗೆ ಒಳಗೊಳಗೆ ಹಿಂಜರಿಯುತ್ತಿದ್ದ ತಮ್ಮ ಅನುಯಾಯಿಗಳಾದ ಬಾಬು ರಾಜೇಂದ್ರ ಪ್ರಸಾದ್, ಜಮ್ನಾಲಾಲ್ ಬಜಾಜ್, ಶಂಕರಲಾಲ್ ಬ್ಯಾಂಕರ್ ಮತ್ತಿತರರನ್ನು ಭಗವಾನರ ಆಶ್ರಮಕ್ಕೆ ಗಾಂಧೀಜಿ ಕಳುಹಿಸುತ್ತಿದ್ದರು, ಅಂತೆಯೇ ಅವರೆಲ್ಲರೂ ಹೋಗಿ ಸೇರಿದರು ಕೂಡ. ಒಮ್ಮೆ ಅಲ್ಲಿಂದ ನಿರ್ಗಮಿಸುವಾಗ ಬಾಬು ರಾಜೇಂದ್ರ ಪ್ರಸಾದರು ಭಗವಾನರಿಂದ ಮಹಾತ್ಮರಿಗೆ ಸಂದೇಶ ಕೇಳಿದಾಗ, "ಪರಸ್ಪರ ಹೃದಯಗಳು ಸ್ಪಂದಿಸುತ್ತಾ ಸಂಪರ್ಕದಲ್ಲಿರುವಾಗ ಸಂದೇಶದ ಅವಶ್ಯಕತೆ ಎಲ್ಲಿದೆ?" ಎನ್ನುತ್ತಾರೆ ಭಗವಾನರು. ಸರೋಜಿನಿ ನಾಯ್ಡು, ಮೊರಾರ್ಜಿದೇಸಾಯಿ, ಕಿಶೋರಿ ಲಾಲ್ ಮತ್ತಿತರ ಗಾಂಧಿವಾದಿಗಳು, ಭಗವಾನರ ದರ್ಶನ, ಆಶೀರ್ವಾದ ಪಡೆದು ಅತೀವ ಧನ್ಯತಾ ಭಾವದಿಂದ ಹಿಂತಿರುಗಿದರು.

ತಮ್ಮ ಸತ್ಯಸಂಧತೆ ಹಾಗೂ ನೇರ ನಿಷ್ಠುರ ನಡವಳಿಕೆಗೆ ಪ್ರಸಿದ್ಧರಾದ ಗಾಂಧಿವಾದಿ ಒ.ಪಿ. ರಾಮಸ್ವಾಮಿ ರೆಡ್ಡಿಯಾರ್ ಭಗವಾನರ ಭಕ್ತರಾಗಿದ್ದರು. ಅಂದಿನ ಮದರಾಸು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮತ್ತು ತದನಂತರವೂ ರಮಣರನ್ನು ಭೇಟಿಯಾಗುತ್ತಿದ್ದರು. ಭಗವಾನರ ಭಕ್ತರೂ ಕವಿಗಳೂ ಆಗಿದ್ದ ಗಣಪತಿ ಮುನಿ ಮತ್ತು ಶ್ರೀ ಮುರುಗನಾರ್ ಕೂಡ ಗಾಂಧೀಜಿಯ ಅಭಿಮಾನಿಗಳಾಗಿದ್ದರು. ಇವರು ಗಾಂಧೀಜಿಯವರನ್ನು ವರ್ಣಿಸಿ, ಹೊಗಳಿ ಸಂಸ್ಕೃತ ತಮಿಳಿನಲ್ಲಿ ಹಲವು ಪದ್ಯಗಳನ್ನು ರಚಿಸಿದ್ದರು. ಭಗವಾನರ ಸೋದರಳಿಯ ಹಾಗೂ ೪೦ ವರ್ಷ ಆಶ್ರಮದ ಅಧ್ಯಕ್ಷರಾಗಿದ್ದ ಟಿ ಎಂ ವೆಂಕಟರಾಮನ್ (ನಂತರ ಸ್ವಾಮಿ ರಮಣಾನಂದ) ಹಾಗೂ ರಾಮನಾಥ ಬ್ರಹ್ಮಚಾರಿ ಇವರುಗಳು ಗಾಂಧೀಜಿಯ ಆರಾಧಕರಾಗಿದ್ದರು.

ಭಗವಾನರ ಮಹಾನ್ ಮೇಧಾವಿ ಭಕ್ತ, ಪ್ರೊ ಕೆ ಸ್ವಾಮಿನಾಥನ್ ತಮ್ಮ ಅಂತ್ಯದವರೆಗೂ ಗಾಂಧಿವಾದಿಯಾಗಿದ್ದರು. ಅವರು ತಮ್ಮ ಹಲವಾರು ಡಜನ್‌ಗಟ್ಟಲೆ ಪ್ರತಿಭಾವಂತ ಸಹಾಯಕ ಸಂಪಾದಕರು, ಉಪಸಂಪಾದಕರ ದಕ್ಷ ತಂಡದೊಂದಿಗೆ ಮಹಾತ್ಮರ ಬೃಹತ್ ಹಾಗೂ ಅಗಾಧವಾದ ಸಮಗ್ರ ಬರವಣಿಗೆಗಳ ನೂರು ಸಂಪುಟಗಳ ಪೈಕಿ ತೊಂಬತ್ತರ ಸಂಪಾದಕತ್ವ ನಿರ್ವಹಿಸಿದ ಪರಿ ಅಚ್ಚರಿ ಮೂಡಿಸುವಂತದ್ದು. ಇದನ್ನು ಮುಂದುವರಿಸುತ್ತಲೇ ರಮಣರ ಕುರಿತು ಹಲವು ಲೇಖನಗಳು ಪುಸ್ತಕಗಳನ್ನು ರಚಿಸಿ ಭಗವಾನರ ಸಾಹಿತ್ಯ ಸಂದೇಶಗಳ ಘನವಾದ ಇಂಗ್ಲಿಷ್ ಅನುವಾದ ಮಾಡಿದ್ದಲ್ಲದೆ, ಆಶ್ರಮದ ಪತ್ರಿಕೆ 'ದಿ ಮೌಂಟನ್ ಪಾತ್' ಸಂಪಾದಿಸುವಲ್ಲಿ ಸಹಾಯ ಮಾಡಿ, ಆಶ್ರಮಕ್ಕೆ ನಿಯಮಿತವಾಗಿ ಭೇಟಿ ನೀಡುತ್ತಿದ್ದರು.



ಭವಬಂಧನದಿಂದ ಮುಕ್ತರು ನಿಷ್ಪ್ರಪಂಚಿಕರಾದ ರಮಣರನ್ನು ಹಾಗು ಜಗತ್ತನ್ನೇ ಪರಮ ಸತ್ಯವೆಂದು ಭಾವಿಸಿ ನಿರಂತರ ಹೋರಾಟಗಳಲ್ಲಿ ಸದಾ ಮುಳುಗಿರುತ್ತಿದ್ದ ಗಾಂಧೀಜಿಯವರನ್ನು, ಜೊತೆಜೊತೆಗೆ ಒಂದೇ ಉಸಿರಿನಲ್ಲಿ ಏಕೆ ಪ್ರಸ್ತಾಪಿಸುತ್ತೇನೆ ಎಂದು ಕೆಲವರು ನನ್ನನ್ನು ಕೇಳಬಹುದು. ಅವರು ಹಾಗೆ ಪ್ರಶ್ನಿಸುವುದು ಸರಿಯಾಗಿಯೇ ಇದೆ.

ಮಹಾನ್ ಗಾಂಧಿವಾದಿ ವಿನೋಬಾಜಿ, 'ಈ ಜಗವೇ ಪ್ರತ್ಯಕ್ಷ ಬ್ರಹ್ಮನ್' ಎಂದು ನಂಬಿದ್ದರು. ಅದರರ್ಥ ಈ ಜಗತ್ತಿನಲ್ಲಿ ಬ್ರಹ್ಮನ ಅರಿವು ಮೂಡಿ, ವಿಕಾಸ ಹೊಂದಿ, ಅದರ ಸಾಕ್ಷಾತ್ಕಾರವಾಗಬೇಕು ಎಂಬುದು. ಗಾಂಧೀಜಿ ಕೂಡ ಹಾಗೆಯೇ ನಂಬಿದ್ದರು. ಅಂತೆಯೇ ಪರಮಜ್ಞಾನಿ ರಮಣರನ್ನೊಳಗೊಂಡು ಎಲ್ಲ ವೇದಾಂತಿಗಳು ಕೂಡ. ರಮಣರೇನೊ ಅಚಲವಾಗಿ ಸ್ಥಿರವಾಗಿ ಕುಳಿತುಬಿಟ್ಟಿದ್ದರು. ಬಾಲಕನಾಗಿದ್ದಾಗ ಅರುಣಾಚಲದ ಮೇಲೆ ಅವರನ್ನು ಕಂಡಿದ್ದ ಸುಂದರೇಶನ್, "ಅವರು ಸಾಕ್ಷಾತ್ ದೇವರಂತೆ ಆಸೀನರಾಗಿ ಬಿಟ್ಟಿದ್ದರು" ಅಥವಾ ಮುರುಗನಾರ್ ಬರೆದಂತೆ, "ಅಗೊ! ಕಣ್ತುಂಬಿಕೋ ಈ ಅಚ್ಚರಿಯನ್ನು. ಅವರು ಎಷ್ಟೊಂದು ಅಚಲ- ಅಚಲ ಪರ್ವತಗಳೇ ನಾಚಿ ನೀರಾಗುವಷ್ಟು ಅವರು ಅಚಲ."

ಗಾಂಧೀಜಿಯವರಾದರೊ ಸದಾ ಕ್ರಿಯಾಶೀಲ, ನಿರಂತರ ಚಟುವಟಿಕೆಗಳ ವ್ಯಕ್ತಿ. ಗಾಂಧೀಜಿಯವರೊಡನೆ ಇದ್ದವರು ನನಗೆ ಹೇಳಿದಂತೆ, " ಬಿಕ್ಕಟ್ಟುಗಳ ಮಧ್ಯೆ ಬೇರೆ ದಾರಿಯೇ ಇಲ್ಲದ ವಿಷಮಸ್ಥಿತಿಯಲ್ಲಿ ಗಾಂಧೀಜಿ ಸಂಪೂರ್ಣ ಅಂತರ್ಮುಖಿಗಳಾಗಿಬಿಡುತ್ತಿದ್ದರು. ಆ ನೆಲೆಯಿಂದ ಮತ್ತೆ ಬಾಹ್ಯ ಪ್ರಪಂಚಕ್ಕೆ ಬರುತ್ತಿದ್ದಂತೆ ಅವರ ವರ್ತನೆ, ದೈವೀ ಸ್ವರೂಪದ ಆಯಾಮ ಪಡೆಯುತ್ತಿತ್ತು. ಕಬೀರ್ ಮತ್ತು ನಾನಕರಷ್ಟೇ ಉನ್ನತ ನೆಲೆಯಲ್ಲಿ ಇದ್ದ ಗಾಂಧೀಜಿಯವರು ಅದೇಕೆ ಜಗದ ಗೊಂದಲ ಸಂಘರ್ಷಗಳಿಂದ ಯಾತನೆ ಅನುಭವಿಸಬೇಕು ಎಂದು ಅಸಾಮಾನ್ಯ ವಿದ್ವಾಂಸರಾದ ನೀರಜ್ ಚೌಧರಿ ಅಚ್ಚರಿಪಡುತ್ತಾರೆ.

ಗಾಂಧೀಜಿಯವರ ನಿಯತಕಾಲಿಕ ಒಂದರ ಲೇಖನವನ್ನು ಹಳೆಯ ಸಭಾಂಗಣದಲ್ಲಿ ಓದುತ್ತ ಭಗವಾನರು ಹೇಳುತ್ತಾರೆ, " ನೋಡಿ ನಾವಿಲ್ಲಿ ಕುಳಿತು ಇದನ್ನೆಲ್ಲ ಹೇಳುತ್ತಿದ್ದೇವೆ. ಆದರೆ ಗಾಂಧೀಜಿಯವರೂ ಪ್ರಕ್ಷೋಭೆಗಳ ನಡುವೆ ಬದುಕುತ್ತಾ ಇದನ್ನು ಹೇಳುತ್ತಿದ್ದಾರೆ". ಗಾಂಧೀಜಿಯವರಂತಹ ಸತ್ಯ ಹಾಗೂ ಸ್ವಯಂ ಅರಿವಿನ ಸಾಕ್ಷಾತ್ಕಾರದ ಅನ್ವೇಷಕ, ಸಂಪೂರ್ಣವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗಿಹೋಗಿದ್ದು ಅಸಂಗತ, ಅಸಮಂಜಸ ಎಂದು ಭಗವಾನರಿಗೆ ತೋರಲಿಲ್ಲ. ಅವರು ಒಮ್ಮೆ ಹೇಳುತ್ತಾರೆ, "ಒಬ್ಬ ಗುರುವಿಗೆ, ಯಾರೂ ಮತ್ತೊಬ್ಬ ಏನು ಮಾಡಿದ, ಮಾಡಲಿಲ್ಲ ಎಂಬುದರ ಬಗ್ಗೆ ಆಸಕ್ತಿ ಇರುವುದಿಲ್ಲ. ನಾನು ಮಾಡಿದೆ ಎಂಬ ಭಾವದಿಂದ ಆತ ಮುಕ್ತನಾಗಿದ್ದೇನೆಯೇ ಎಂಬುದನ್ನು ಮಾತ್ರ ಗಮನಿಸುತ್ತಾನೆ. "

ಇದೊಂದು ಅಗ್ನಿಪರೀಕ್ಷೆಯಾದರೆ, ಗಾಂಧೀಜಿ ಇದರಲ್ಲಿ ವರ್ಣಮಯವಾಗಿ ವಿಜೃಂಭಿಸಿ ಹೊರಹೊಮ್ಮುತ್ತಾರೆ. ಅವರ ಜೀವನದ ಮಾರ್ಗದರ್ಶಿ ಸೂತ್ರ, "ನಾನು=ಶೂನ್ಯ" ಎಂಬುದೇ ಸರ್ವಸ್ವವಾಗಿತ್ತು. ನಾನು ಎಂಬ ಅಹಂ, ಗರ್ವ ಶೂನ್ಯವಾದಾಗ ಉಳಿಯುವುದೇ ಅಮಿತ, ಅನಂತ ಸಾಧ್ಯತೆಗಳು. ಈ ಅರ್ಥದಲ್ಲಿ ಭಗವಾನರ ಜೀವನ ಹಾಗೂ ಸಂದೇಶಗಳ ಸಾರ ಸರ್ವಸ್ವವನ್ನೇ ಗ್ರಹಿಸಿ, ಹೀರಿ ಭಟ್ಟಿ ಇಳಿಸಿರಲಿಲ್ಲವೆ ಗಾಂಧೀಜಿ?

ಗಾಂಧಿ ಅಭಿಮಾನಿ ಸರೋಜಿನಿ ನಾಯ್ಡುರವರ ಸಹೋದರ, ಪ್ರತಿಭಾವಂತ ಕವಿ, ರಂಗಕರ್ಮಿ, ಭಗವಾನರ ಭಕ್ತ ಹರೀಂದ್ರನಾಥ ಚಟ್ಟೋಪಾಧ್ಯಾಯರ ಬಹು ಜನಜನಿತ ಹೇಳಿಕೆಯಂತೆ– "ಭಗವಾನರೊಬ್ಬ ವೈಯಕ್ತಿಕತೆ ಇಲ್ಲದ ಅಗಾಧ ಚೇತನರಾಗಿದ್ದರು. ಗಾಂಧೀಜಿ ಕೂಡ ನಾನು ಎಂಬುದಕ್ಕೆ ಮಹತ್ವವನ್ನೇ ನೀಡದ ಜೀವನ ಮುಕ್ತರಾಗಿದ್ದರು. ಧ್ಯೇಯ, ಉದ್ದೇಶ, ಗುರಿಗಳು ಸದಾ ಮುಂದಿರಲಿ, ನೀವು ಅವುಗಳನ್ನು ಹಿಂಬಾಲಿಸಿ ಮತ್ತು ನಾಯಕತ್ವವನ್ನು ಸತ್ಯಕ್ಕೆ ವಹಿಸಿ; ನನಗಲ್ಲ ಎಂಬುದು ಗಾಂಧೀಜಿಯವರ ಸೂಚನೆಯಾಗಿತ್ತು."

ಸತ್ಯದಿಂದ ಒಂದಿನಿತು ವಿಚಲಿತನಾದರೆ ನನ್ನನ್ನು ಅನುಸರಿಸದಿರಿ ಎಂಬುದು ಅವರ ಸ್ಪಷ್ಟ ಸಂದೇಶವಾಗಿತ್ತು. ಅದೆಷ್ಟೇ ಕಟುವಾಗಿದ್ದರೂ ಸರಿಯೇ, ಗಾಂಧೀಜಿ ಟೀಕೆಗಳಿಗೆ ಸದಾ ಕಿವಿಗೊಡುತ್ತಿದ್ದರು. ಒಮ್ಮೆ ಅವರ ಅನುಯಾಯಿಗಳು ಗಾಂಧೀಜಿಯವರನ್ನು ಪ್ರಶ್ನಿಸುತ್ತ, "ಬಾಪು ನಿಮ್ಮಲ್ಲಿ ಒಂದು ಸ್ವಭಾವ ಗಮನಿಸಿದ್ದೇವೆ. ನಮಗೇನಾದರೂ ನಿಮ್ಮಿಂದ ಒಂದು ವಿಷಯಕ್ಕೆ ಒಪ್ಪಿಗೆ ಸಹಮತ ಬೇಕಾದರೆ ಅದಕ್ಕೊಂದು ಘನಘೋರ ಕಾಳಗ ಮಾಡಿ, ಸೆಣೆಸಾಡಬೇಕಾಗುತ್ತದೆ. ನಾವು ಸದಾ ನಿಮ್ಮ ವಿಧೇಯ ಅನುವರ್ತಿಗಳಾಗಿ ಇರುತ್ತೇವೆ. ಆದರೆ ನೀವು ಮಾತ್ರ ಸದಾ ನಿಮ್ಮನ್ನು ಟೀಕಿಸುವ, ಖಾದಿಯನ್ನೇ ಧರಿಸದ, ಜಯಕರ್ ಮತ್ತು ಸಪ್ರು ಅವರನ್ನೇ ಬಾಯಿತುಂಬಾ ಹೊಗಳುತ್ತೀರಿ" ಎಂದು ತಕರಾರು ಎತ್ತುತ್ತಾರೆ. ಆಗ "ನಿಜ, ಅವರು ಸತ್ಯದೊಂದಿಗಿದ್ದರೆ ನನ್ನ ಸಹಮತ, ಪ್ರಶಂಸೆ ಅವರಿಗೆ" ಎನ್ನುತ್ತಿದ್ದ ಗಾಂಧೀಜಿ, ಎಂದೂ ಬೇರೆಯವರಲ್ಲಿ ಹುಳುಕು ಹುಡುಕುತ್ತಿರಲಿಲ್ಲ. " ನಾನು ಪರಿಪೂರ್ಣನಲ್ಲದ ಕಾರಣ ಅನ್ಯರ ಕುರಿತು ನಿರ್ಣಯಿಸಲಾರೆ" ಎಂಬುದು ಅವರ ನಿಲುವಾಗಿತ್ತು.

"ನಾನು, ನೀನೆಂಬ ಉಭಯಗಳಿಲ್ಲದ ತಾತ್ವಿಕತೆಯೇ ತಾವಾಗಿದ್ದ ಸಂಪೂರ್ಣರು" ಎಂದು ಕೆ ಸ್ವಾಮಿನಾಥನ್ ಭಗವಾನರನ್ನು ವರ್ಣಿಸುತ್ತಾರೆ. "ಅನ್ಯ ಎಂಬುದೇ ಅವರಿಗೆ ಇರಲಿಲ್ಲ. ಹಾಗಾಗಿ ಬೇರೆಯವರ ಟೀಕೆಯೂ ಅವರಲ್ಲಿರಲಿಲ್ಲ". ತಮ್ಮ ಕಡು ವಿರೋಧಿಗಳಿಗೂ ಗಾಂಧೀಜಿಯವರಲ್ಲಿ ಮುಗುಳ್ನಗೆಯ ಪ್ರಶಂಸೆ ಅಲ್ಲದೆ ಬೇರೆ ಏನೂ ಇರುತ್ತಿರಲಿಲ್ಲ.

ಗಾಂಧೀಜಿ, ಆಗಸ್ಟ್ ೧೯೪೭ರ ಭಾರತದ ಸ್ವಾತಂತ್ರ್ಯೋದಯದ ಘಟ್ಟದಲ್ಲಿ ಡಾ.ಅಂಬೇಡ್ಕರ್ ಅವರನ್ನು ಕಾನೂನು ಮಂತ್ರಿಯಾಗಿ ನಿಯೋಜಿಸುವಂತೆ ನೆಹರೂ ಹಾಗೂ ಪಟೇಲರ ಮನವೊಲಿಸಿದರು. ಅಂಬೇಡ್ಕರ್ ಅವರು ಗಾಂಧೀಜಿಯವರ ಅತಿ ಕಟು ಟೀಕಾಕಾರರಾಗಿದ್ದರು. ಮಹಾತ್ಮ ಎಂದು ಕರೆಯಲು ಅನರ್ಹ ಹಾಗೂ ಭಾರತದ ಚರಿತ್ರೆಯಲ್ಲಿ ಅತ್ಯಂತ ಅಪ್ರಾಮಾಣಿಕ ರಾಜಕಾರಣಿ ಎಂದು ಹೀಗಳೆದಿದ್ದರು. ತಮ್ಮನ್ನು ಕುರಿತು ಕಹಿ ಭಾವನೆ ಹೊಂದಿರುವ ವಿದ್ಯಾಸಂಪನ್ನ ಅಂಬೇಡ್ಕರ್ ಅವರ ಟೀಕೆಯ ಈ ಹಕ್ಕನ್ನು ಮನ್ನಿಸಿ ಗೌರವಿಸಿದ ಗಾಂಧೀಜಿ, ಅವರ ಪಾಂಡಿತ್ಯ, ವಿದ್ವತ್ತು ಹಾಗೂ ಶೋಷಿತ ವರ್ಗದ ಜನತೆಯ ಬಗೆಗಿನ ಅವರ ಅನುಭೂತಿಯ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಅಂಬೇಡ್ಕರ್ ನ್ಯಾಯಾಂಗ ಸಚಿವರಾಗಿ ದಕ್ಷತೆಯಿಂದ ಅಮೋಘ ಸೇವೆ ಸಲ್ಲಿಸಿದರು. ನೆಹರು ಅಂಬೇಡ್ಕರ್ ಅವರನ್ನು, 'ನನ್ನ ಸಚಿವಸಂಪುಟದ ಅಮೂಲ್ಯ ರತ್ನ' ಎಂದು ಹೊಗಳಿದರು. ನಾವು ಪೂಜ್ಯಭಾವನೆಯಿಂದ ಸ್ಮರಿಸುವ ಕಂಚಿಯ ಪರಮಾಚಾರ್ಯ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಯವರು ಕೂಡ ರಮಣ ಹಾಗೂ ಗಾಂಧಿಯವರಂತೆ ಇತರರಲ್ಲಿ ಕೇವಲ ಒಳ್ಳೆಯದನ್ನು ಗುರುತಿಸುವ ಉತ್ಕೃಷ್ಟ ಗುಣವಂತರಾಗಿದ್ದರು ಮತ್ತು ಯಾರಲ್ಲಾದರೂ ಸರಿ ಯೋಗ್ಯ ಪ್ರತಿಭೆಯನ್ನು ಕಂಡು ಗುರುತಿಸಿದಾಗ ಹೃದಯ ತುಂಬಿ ಹೊಗಳುತ್ತಿದ್ದರು. ಅವರೊಮ್ಮೆ – "ಬೈಗುಳ ನಿಂದನೆಗಳಿಗೆ ಪ್ರತಿಯಾಗಿ ಗಾಂಧೀಜಿಯಂತೆ ಯಾರು ತಾನೇ ಪ್ರಶಂಸೆ–ಮಾನ್ಯತೆಗಳ ಮೂಲಕ ಪ್ರತಿ ಸ್ಪಂದಿಸಬಲ್ಲರು?" ಎಂದ ಪೂಜ್ಯ ಪೀಠಾಧಿಪತಿಗಳು, – " ಜನತೆ ಗಾಂಧೀಜಿಯವರನ್ನು ರಾಮ ಮತ್ತು ಕೃಷ್ಣರಿಗಿಂತಲೂ ಶ್ರೇಷ್ಠ, ಮಹಾನ್ ವ್ಯಕ್ತಿ ಎಂದು ಏಕೆ ಕರೆಯುತ್ತಾರೆ ಗೊತ್ತೆ? ಅವರೊಬ್ಬ ಉತ್ತಮ ಮನುಷ್ಯ, ನಿಸ್ವಾರ್ಥಿ ಮತ್ತು ಸತ್ಯಸಂಧರು" ಎನ್ನುತ್ತಿದ್ದರು. ಭಗವಾನ್ ಮತ್ತು ಗಾಂಧೀಜಿ ಇಬ್ಬರೂ ಪ್ರತಿಯೊಂದು ಅರ್ಥದಲ್ಲೂ ಮತ್ತು ಆ ಅರ್ಥದ ಅತ್ಯುನ್ನತ ಮಟ್ಟದಲ್ಲಿ ಕೂಡ ಸರಳತೆಯ ಉತ್ಕೃಷ್ಟ ಮಾದರಿಯಾಗಿದ್ದರು. ೧೯೭೭ರಲ್ಲಿ ನಾನೊಮ್ಮೆ ಆಶ್ರಮಕ್ಕೆ ಮಿಂಚಿನ ಭೇಟಿಕೊಟ್ಟಾಗ ಭಗವಾನರ ಪರಮ ಶಿಷ್ಯರಾಗಿದ್ದ ಊಟದಮನೆಯ ನಟೇಶ್ ಅಯ್ಯರ್ ನನಗೆ ಹೇಳಿದ್ದು, " ಅತ್ಯಂತ ಸರಳ ವ್ಯಕ್ತಿಯನ್ನು ಊಹಿಸಿಕೊಳ್ಳಿ, ಅದಕ್ಕಿಂತ ಸರಳ ವ್ಯಕ್ತಿ ಭಗವಾನ್". ನಾವು ಎಲ್ಲವನ್ನೂ ಕಗ್ಗಂಟು ಮಾಡಿಕೊಂಡಿರುವುದೇ ನಮ್ಮ ಅತಿ ದೊಡ್ಡ ಸಮಸ್ಯೆ.

ನಮ್ಮ ಸ್ವಂತಿಕೆ ಮತ್ತು ಅದರ ಆಚೆ. ಅದು ಕಚೇರಿಯಿರಲಿ, ಸಾಮಾಜಿಕ, ರಾಜಕೀಯ, ಧಾರ್ಮಿಕ ಜೀವನ, ಎಲ್ಲವೂ ಸಂಕೀರ್ಣವಾಗಿ ಹೋಗಿದೆ. ಏಕತೆ ಇರುವಲ್ಲೆಲ್ಲಾ ಹಲವನ್ನು ಕಾಣುತ್ತೇವೆ. ಎಲ್ಲೆಲ್ಲೂ ಪ್ರತ್ಯೇಕತೆ. ವಿಭಜನೆ, ಸಂಘರ್ಷಮಯ ವಾತಾವರಣ ಸೃಷ್ಟಿಯಾಗಿದೆ. ಭಗವಾನರು ತಮ್ಮಲ್ಲಿ ಸಮಸ್ಯೆಗಳ ಬಗ್ಗೆ ನಿವೇದಿಸಿಕೊಂಡಾಗ ಸಮಸ್ಯೆ ಯಾರಿಗೆ ಎಂಬುದನ್ನು ಕಂಡುಕೊಳ್ಳಿ ಎಂದು ಹೇಳುತ್ತಾ ಅವುಗಳನ್ನು ನಿವಾರಿಸುತ್ತಿದ್ದರು.

ಇದು ಅತಿಸರಳೀಕರಣ ಎಂದೆನಿಸುತ್ತದೆಯೇ? ಖಂಡಿತ ಇಲ್ಲ. ಎಲ್ಲ ಸಮಸ್ಯೆಗಳಿಗೂ ಗೊಂದಲಗಳಿಗೂ ಅದುವೇ ಅತಿ ಸರಳವಾದ, ಘನವಾದ ಹಾಗೂ ತ್ವರಿತವಾದ ಪರಿಹಾರ ಒದಗಿಸುತ್ತಿತ್ತು. ಗಾಂಧೀಜಿಯವರ ಕುರಿತು ಸದಾಶಯ ಹೊಂದಿರುವ ಟೀಕಾಕಾರರು ಕೂಡ ಕೆಲವೊಮ್ಮೆ ಅವರನ್ನು ಅಪಾರ್ಥ ಮಾಡಿಕೊಳ್ಳುತ್ತಿದ್ದರು. ಏಕೆಂದರೆ ಅವರ ಅತಿ ಸರಳವಾದ ಆಚಾರ ವಿಚಾರಗಳಿಂದ ಗೊಂದಲಕ್ಕೀಡಾಗುತ್ತಿದ್ದರು. ಹಲವರಲ್ಲಿ ಅವರೊಬ್ಬ ಚಾಣಾಕ್ಷರಲ್ಲದ ಭೋಳೆ, ಅಪ್ರಾಯೋಗಿಕ ಮನೋಭಾವದ, ಅತಿ ಆದರ್ಶಗಳ ಗೀಳಿನ, ತಿಕ್ಕಲು ವ್ಯಕ್ತಿ ಎಂಬೆಲ್ಲಾ ತಪ್ಪುಕಲ್ಪನೆ, ಅಭಿಪ್ರಾಯಗಳು ರೂಪುಗೊಂಡಿದ್ದವು. ಅದಕ್ಕೆ ಆ ಜನ ತಮ್ಮ ಸಂಕುಚಿತ ದೃಷ್ಟಿಕೋನಗಳಿಂದ ಬಂಧಿತರಾಗಿದ್ದುದೇ ಕಾರಣವಾಗಿತ್ತು. ಘಟನೆ ವಿಷಯಗಳನ್ನು ನಿಚ್ಚಳ ಸ್ಪಷ್ಟತೆಯಿಂದ ಕಾಣುವ ಉತ್ಕೃಷ್ಟ ಗುಣ ಗಾಂಧಿಯವರಲ್ಲಿ ಇತ್ತು ಎನ್ನುತ್ತಾರೆ ಲೇಖಕ ವಿ. ಎಸ್. ನೈಪಾಲ್. ಚರಿತ್ರಕಾರ ಮುಕುಲ್ ಕೇಶವನ್ ಕೆಲವು ದಶಕಗಳ ಹಿಂದೆ ದಾಖಲಿಸಿದಂತೆ ಗಾಂಧೀಜಿಯವರಿಗೆ ಬ್ರಿಟಿಷರ ಅಥವಾ ಭಾರತೀಯರ ಪರವಾಗಲಿ ಅಥವಾ ಹಿಂದೂಗಳ ಕುರಿತಾಗಲಿ, ಮುಸ್ಲಿಮರ ಕುರಿತಾಗಲಿ ಒಲವಿರಲಿಲ್ಲ. ಸತ್ಯ ಅವರ ಪರಮ ಗುರಿಯಾಗಿತ್ತು. ಸತ್ಯವೆಂಬುದು ಸಂಪೂರ್ಣವಾಗಿ ಸರಳವಾದದ್ದು. ಏಕೆಂದರೆ ಅಲ್ಲಿ ಸತ್ಯದ ವಿನಃ ಬೇರೇನೂ ಇರಲಾರದು.

ಭಗವಾನರು, 'ಚಿದಾಕಾಶವೇ, ಜಾಗೃತ ಪ್ರಜ್ಞೆಯೇ, ಸಂಪೂರ್ಣ ಮುಕ್ತತೆ ಹಾಗೂ ಪಾರದರ್ಶಕತೆಯೇ ತಾವಾಗಿದ್ದರೆ, ಗಾಂಧೀಜಿ, ಹಲವಾರು ಸಣ್ಣಪುಟ್ಟ ಹಾಗೂ ದೈತ್ಯಾಕಾರದ ಸಮಸ್ಯೆಗಳಿಗಾಗಿ ನಿರಂತರ ಶ್ರಮವಹಿಸಿ, ಅಸಂಖ್ಯಾತ ಜನರೊಂದಿಗೆ ಸಂಬಂಧವಿರಿಸಿಕೊಂಡು, ನಂಬಲಸಾಧ್ಯವಾದ ಸ್ಪಷ್ಟತೆಯೊಂದಿಗೆ ಮಾತು ಬರಹಗಳಲ್ಲಿ ತೊಡಗಿಕೊಂಡಿದ್ದರು. ಕಿಪ್ಲಿಂಗ್ ಹೇಳಿದಂತೆ ತನ್ನ ಸುತ್ತಮುತ್ತಲಿನ ಎಲ್ಲರೂ ಸ್ಥಿಮಿತವನ್ನು ಕಳೆದುಕೊಂಡಾಗ ಸ್ಥಿರಚಿತ್ತರಾಗಿದ್ದ ಗಾಂಧೀಜಿಯವರು ಕೂಡ ಸರಳರಲ್ಲೇ ಅತಿ ಸರಳ ಮನುಷ್ಯ. ಭಗವಾನ್ ಮತ್ತು ಗಾಂಧೀಜಿ, ಅವರಿಬ್ಬರ ಒಳ ಜಗತ್ತು ಎಂದೂ ಬತ್ತಲಾರದಷ್ಟು ಸಂಪದ್ಭರಿತವಾಗಿತ್ತು. ಹಾಗಾಗಿ ಇನ್ನಾವುದರ ಒಡೆತನ ಅವರಿಗೆ ಬೇಕಿರಲಿಲ್ಲ. "ಈ ಬ್ರಹ್ಮಾಂಡವೆಲ್ಲವೂ ಸರ್ವಶಕ್ತನಾದ ಈಶ್ವರಮಯವಾಗಿದೆ. ಅದನ್ನು ನನ್ನದಲ್ಲವೆಂದು ಭಾವಿಸಿ ಅನುಭವಿಸಿ, ಆನಂದಿಸಿ. ಅನ್ಯರ ಸಂಪತ್ತಿಗೆ ಹಂಬಲಿಸದಿರಿ" ಎಂಬ ಈಶೋವ್ಯಾಸೋಪನಿಷತ್ತಿನ ಮೊದಲ ಶ್ಲೋಕದಿಂದ ಗಾಂಧೀಜಿ ತುಂಬಾ ಪ್ರಭಾವಿತರಾಗಿದ್ದರು. ಇದೊಂದೇ ಶ್ಲೋಕದಿಂದ ನಾನು ಎಲ್ಲ ಪವಿತ್ರಗ್ರಂಥಗಳ ಸಂದೇಗಳನ್ನು ಪರಿಗ್ರಹಿಸಬಲ್ಲೆ ಎನ್ನುತ್ತಿದ್ದರು. 'ಅಪರಿಗ್ರಹ'ವಿಲ್ಲದೆ ಅಹಿಂಸೆ ಮತ್ತು ನಿಷ್ಕಲ್ಮಶ ಪ್ರೇಮ ಸಾಧ್ಯವಾಗದು ಹಾಗೂ ಅಹಿಂಸೆ ಇಲ್ಲದೆ ಸತ್ಯದ ಸಾಕ್ಷಾತ್ಕಾರವಾಗದು ಎಂಬುದು ಅವರ ನಿಲುವು.

ಭಗವಾನರ ಪ್ರತಿಭಾವಂತ ಪರಮ ಶಿಷ್ಯ ಸಾಧು ಓಂ ಹೇಳುತ್ತಿದ್ದಂತೆ, 'ಗಾಂಧೀಜಿ ಸತ್ಯದ ಉಪಾಸಕರಾಗಿದ್ದರೆ, ರಮಣರು ಸಾಕ್ಷಾತ್ ಸತ್ಯವೇ ಆಗಿದ್ದರು.' ಗಾಂಧೀಜಿ ಪ್ರಕಾರ ಅಪರಿಗ್ರಹ ಎಂದರೆ ಕೇವಲ ನಮ್ಮೆಲ್ಲ ಭೌತಿಕ ವಸ್ತುಗಳ ಒಡೆತನದಿಂದ ಮುಕ್ತರಾಗುವಿದೆಂದಲ್ಲ. ನನ್ನ ಸ್ವಂತ ದೇಹದ ಮೇಲೂ ನನಗೆ ಹಕ್ಕಿಲ್ಲ ಎದು ತಿಳಿಯುವುದು ಕೂಡ. ನನ್ನಲ್ಲಿ ಇರುವುದನ್ನೆಲ್ಲಾ ಮತ್ತು ನಾನೇನಾಗಿದ್ದೀನೋ ಅದೆಲ್ಲವನ್ನೂ ತ್ಯಜಿಸುವುದು ಎಂಬಷ್ಟು ಸರಳ ಅದರ ಅರ್ಥ ಎಂದು ಅವರ ಆಪ್ತ ಅನುಯಾಯಿಗಳಿಗೆ ಅವರದೇ ಮಾತಿನಲ್ಲಿ ವಿವರಿಸಿದರು. ಓಂ ಅವರ ನಿಕಟ ಭಕ್ತರಾಗಿದ್ದ ಬಲರಾಮ್ ರೆಡ್ಡಿಯವರು ಹೇಳುವಂತೆ, ಭಗವಾನರು ಸದಾ ಆ ಬ್ರಹ್ಮನಲ್ಲೇ ನೆಲೆಯಾಗಿದ್ದರು. ಭಗವಾನರು ತಮ್ಮ ಸ್ವಯಂ ಅಸ್ತಿತ್ವದ ಹೊರತಾಗಿ ಮತ್ತೆಲ್ಲರಿಂದಲೂ ಮುಕ್ತರಾಗಿದ್ದರು. ತಮ್ಮ ಭಕ್ತರು, ತಮ್ಮ ಅರಿವಿನ ಸಾಕ್ಷಾತ್ಕಾರವನ್ನು ತಾವೇ ಮಾಡಿಕೊಳ್ಳಲು–ತಮ್ಮ ನಿಜ ಸ್ವರೂಪವನ್ನು ತಾವೇ ಕಂಡುಕೊಳ್ಳಲು– ಅವಕಾಶ ಮಾಡಿಕೊಟ್ಟಿದ್ದರು. ಶ್ರೀಮಂತ–ಬಡವ, ದೊಡ್ಡವರು ಸಣ್ಣವರು, ಶಿಕ್ಷಿತರು–ಅಶಿಕ್ಷಿತರು, ಬಲಾಢ್ಯರು, ಬಲಹೀನರು, ಭಾರತೀಯರು, ಭಾರತೀಯರಲ್ಲದವರು, ಜಾತಿ–ಮತ–ಧಾರ್ಮಿಕ ಹಿನ್ನೆಲೆಗಳಿಗೆ ಅತೀತವಾಗಿ ಅವರ ಅದ್ವೈತ ಸಂಭೂತ ಸನ್ನಿಧಾನದಲ್ಲಿ ಇವೆಲ್ಲವೂ ಸಮಾನವಷ್ಟೇ ಅಲ್ಲ, ಏಕವಾಗಿದ್ದವು. ಗಾಂಧೀಜಿಯವರು ನಮಗೆ ದುಡಿಮೆಯ ಘನತೆ ಮತ್ತು ಸಮಾನತೆಯನ್ನು ತಿಳಿಹೇಳಿದರು. ಅವರ ವಿಧೇಯನಾದ ಮಗ ಮಣಿಲಾಲ್‌ನನ್ನ ಜೀವನೋಪಾಯಕ್ಕಾಗಿ ದುಡಿದು ಸಂಪಾದಿಸಲು ಮದರಾಸಿಗೆ ಕಳುಹಿಸಿದ್ದರು. ತನ್ನ ಗುರುತನ್ನು ಬಹಿರಂಗಪಡಿಸಬಾರದು ಎಂಬ

ಸೂಚನೆಯೊಂದಿಗೆ. ಮಣಿಲಾಲ್ ಅಲ್ಲಿ ಕೂಲಿ ಮಾಡುತ್ತಾ, ಎಂಜಲು ಪಾತ್ರೆ ಪಗಡೆಗಳನ್ನು ತೊಳೆಯುತ್ತಾ ಭತ್ತದ ಚೀಲಗಳನ್ನು ಹೊತ್ತು ಸಾಗಿಸುತ್ತಾ ತನ್ನ ಬದುಕಿಗಾಗಿ ದುಡಿಯುತ್ತಿದ್ದ.

ಆಶ್ರಮಕ್ಕೆ ಭೇಟಿ ನೀಡಲು ಬಂದವರನ್ನು ಗಾಂಧೀಜಿ ಮೊದಲು ಪಾಯಿಖಾನೆ ಸ್ವಚ್ಛಗೊಳಿಸಿ, ನಂತರ ತಮ್ಮ ಬಳಿ ಬರಲು ಹೇಳುತ್ತಿದ್ದರು. ಭಗವಾನ್ ಮತ್ತು ಗಾಂಧೀಜಿ ಈರ್ವರೂ ಮಹಾನ್ ಶಿಕ್ಷಕರಾಗಿದ್ದರು. ಅವರು ನೀಡಿದ "ವಿದ್ಯೆ– ಸಾ ವಿದ್ಯಾ ಯಾ ವಿಮುಕ್ತಯೇ."– ಬಂಧನಗಳಿಂದ ಬಿಡುಗಡೆ ನೀಡುವಂತಹದಾಗಿತ್ತು. ಪ್ರಸಿದ್ಧಿ ಕೀರ್ತಿಗಳು ನಿಮ್ಮ ತಲೆಗೆ ಏರದಿರಲಿ ಎಂದು ಅನುಯಾಯಿಗಳಿಗೆ ಗಾಂಧೀಜಿ ಎಚ್ಚರಿಸುತ್ತಿದ್ದರು. ಕೀರ್ತಿ ಶನಿಯನ್ನು ನಿಭಾಯಿಸುವುದು ಕಷ್ಟ ಎನ್ನುತ್ತಿದ್ದರು. ಭಗವಾನರು ಪ್ರಖ್ಯಾತಿ ಎಂಬುದು ಅಹಂನ ಅಂಚು ಎಂದು ವ್ಯಾಖ್ಯಾನಿಸಿದ್ದರು.

ತಮ್ಮಲ್ಲಿಗೆ ಬಂದ ಗಾಂಧಿವಾದಿಗಳನ್ನು ಉದ್ದೇಶಿಸಿ, "ಗಾಂಧೀಜಿ ನನ್ನಿಂದಲೇ ಇದಾಗಿದ್ದು ಎಂಬ ಭಾವನೆಯಿಂದ ಮುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದರು ಮತ್ತು ಇದು ಸಾಧ್ಯವಾಗಿದ್ದು ಅವರ ಪ್ರಾಮಾಣಿಕ ಹಾಗೂ ಸುದೀರ್ಘ ಸಾಧನೆಯಿಂದ" ಎಂದರು ರಮಣರು. ಗಾಂಧೀಜಿ ತಮ್ಮ ದೇಶವಾಸಿಗಳಿಗೆ ನಿರ್ಭೀತರಾಗಲು ಕಲಿಸಿದರು. "ನೀವು ಸತ್ಯವನ್ನೇ ಅನ್ವೇಷಿಸುತ್ತಿದ್ದರೆ, ನಿಮ್ಮ ಶಿರವನ್ನು ಸಾವಿನ ಮಡಲಿಲ್ಲ ಇಡಲು ಸನ್ನದ್ಧರಾಗಬೇಕು. ನೀವೇಕೆ ಅಂಜಬೇಕು? ತೀರಾ ಕೆಡುಕೆಂದರೆ ಇನ್ನೇನಾಗಬಹುದು? ಸಾವು ತಾನೆ? ಮರಣ ಯಾವ ಲೆಕ್ಕ?" ಎನ್ನುತ್ತಿದ್ದರು. ಅವರ ಹಿಂಬಾಲಕ ಕಾಕಾ ಸಾಹೇಬ್ ಕಾಲೇಲ್ಕರ್ "ಮೃತ್ಯು ಮಮಸಖ"– ಸಾವು ನನ್ನ ಸ್ನೇಹಿತ ಎಂಬ ಪುಸ್ತಕ ರಚಿಸಿದ್ದರು. ಗಾಂಧೀಜಿಯವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿ ದಾಖಲಿಸಿದಂತೆ ಗಾಂಧೀಜಿ 'ಭಯವನ್ನು ತೊಲಗಾಚೆ ಎನ್ನುತ್ತಿದ್ದರು.' "ಎಂಬತ್ತನೇ ವಯೋಮಾನದ ಆಸುಪಾಸಿನಲ್ಲಿರುವ ನನ್ನಂಥವರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷ್ ಪೋಲಿಸರ ಸೀಸದಿಂದ ಎರಕಹೊಯ್ದ ಲಾಠಿಯೇಟುಗಳನ್ನು ಎದುರಿಸಿ ಮುನ್ನುಗ್ಗಿದ ಅಸಂಖ್ಯಾತ ಸ್ತ್ರೀ–ಪುರುಷರ ಅವರ ಆಯುಧಗಳು ಎಂದರೆ ಮುಖದ ಮೇಲಿನ ಮುಗುಳ್ನಗೆ ಮತ್ತು ಹೃದಯದಲ್ಲಿ ಪ್ರೀತಿ ಎಂಬುದು ಗೊತ್ತಿದೆ.

ಭಗವಾನರ ಸಾನಿಧ್ಯದಲ್ಲಿ ಅಂದಿನಂತೆ ಇಂದೂ ಭಯವೆಂಬುದು ಇಲ್ಲದಿರುವುದಕ್ಕೆ ಕಾರಣ ಅವರ ಜಗತ್ತು ಎರಡಿಲ್ಲದ ಜಗತ್ತಾಗಿದೆ ಎಂಬುದು. ಉಪನಿಷತ್ತಿನ ಪ್ರಕಾರ 'ದ್ವಿತೀಯಾದ್ವೈ ಭಯಂ ಭವತಿ'. ಅಂದರೆ, ನಾನಲ್ಲದೆ ಎರಡನೆಯದಾದ ಮತ್ತೊಂದಿದೆ ಎಂದಾಗ ಮಾತ್ರ ಭಯದ ಸೃಷ್ಟಿ. ನಮ್ಮ ಅಹಂನ ಭ್ರಾಂತಿಯ ಪ್ರತಿಬಿಂಬವೇ ಆ ಇನ್ನೊಂದು ಎಂಬುದನ್ನು ನಮಗೆ ತೋರಿಸಿಕೊಟ್ಟಿದ್ದಾರೆ ಭಗವಾನರು. ನಾನು ಎಂಬುದೇನು ಎಂಬ ಸ್ವಯಂ ವಿಚಾರಣೆಯಿಂದ ಚಿತ್ತ ಭ್ರಾಂತಿಯನ್ನು ದೂರಗೊಳಿಸಿದಾಗ ಎಲ್ಲ ಭಯವೂ ಹೇಳಹೆಸರಿಲ್ಲದಂತೆ ನಿರ್ನಾಮವಾಗುವುದಲ್ಲವೇ? ಕುಂಜುಸ್ವಾಮಿ (ಭಗವಾನರಿಗೇ ಆಪ್ತ ಸಹಾಯಕರಾಗಿದ್ದವರು) ನಮಗೆ ತಿಳಿಸಿದಂತೆ ಮೌನ, ಅಚಲ, ಸದಾ ನಿರ್ಮಲ, ಪ್ರಶಾಂತ; ನೆಮ್ಮದಿಯ ಮಡಿಲಿನಲ್ಲಿರುವ ಭಗವಾನರ ದರ್ಶನದಿಂದ ಭಕ್ತರು ತಮ್ಮ ಭಯವನ್ನು ಮೆಟ್ಟಿ ನಿಂತರು.

ಅಹಮದಾಬಾದಿನ ಸಬರ್ಮತಿ ಆಶ್ರಮದಲ್ಲಿ ಕೆಲ ಕಾಲ ನೆಲೆಸಿದ್ದ ಸಾಧುವೊಬ್ಬರಿದ್ದರು. ಗಾಂಧೀಜಿಯವರ ಸಹಮತಿಯೊಂದಿಗೆ ವರು ಹಿಮಾಲಯದಲ್ಲಿ ಸಾಧನೆ ಮಾಡಲು ತೆರಳಿದರು. ಅವರು ತಮ್ಮ ೧೧೩ನೇ ವಯಸ್ಸಿನಲ್ಲಿ ಉತ್ತರಕಾಶಿಯಲ್ಲಿ ದೇಹತ್ಯಾಗ ಮಾಡುವ ಕೆಲ ತಿಂಗಳು ಮುಂಚೆ, ಅಂದರೆ ೨೦೦೩ರಲ್ಲಿ ಹಿಂದಿಯಲ್ಲಿ ನನ್ನೊಡನೆ ಮಾತನಾಡುತ್ತಾ ಹೇಳಿದ್ದು: " ಗಾಂಧೀಜಿ ಧರ್ಮವೇ ಮೈದಾಳಿದಂತಿದ್ದವರು. ರಾಮ ಮತ್ತು ಕೃಷ್ಣರಿಗಿಂತ ಮಿಗಿಲಾದವರು. ಅವರು ಸಮಾಧಿಸ್ಥಿತಿ ಸಿದ್ಧಿಸಿಕೊಂಡವರು." ಗಾಂಧಿಜಿ ಆಳವಾದ ಧ್ಯಾನದಲ್ಲಿ ಲೀನವಾಗಿ ಸಂಪೂರ್ಣವಾಗಿ ತಮ್ಮ ದೇಹದ ಸುತ್ತಮುತ್ತಲ ಪ್ರಪಂಚದ ಪರಿವೆಯೇ ಇಲ್ಲದಂತೆ ಆಗುತ್ತಿದ್ದರು.

ಇಂತಹ ತುರ್ಯಾವಸ್ಥೆಯಲ್ಲಿಯೇ ಪ್ರೇರಣೆ, ಮಾರ್ಗದರ್ಶನ ಪಡೆದು ತಮ್ಮೆಲ್ಲ ನಿರ್ಧಾರ ಕೈಗೊಳ್ಳುತ್ತಿದ್ದ ಗಾಂಧೀಜಿಯವರ ಕೆಲ ವರ್ತನೆಗಳಿಂದ ಅವರ ಅನುಯಾಯಿಗಳು ಸಹಜವಾಗಿಯೇ ಕೆಲವೊಮ್ಮೆ ಬೆಪ್ಪಾಗುತ್ತಿದ್ದರು. ಪಾಪ ಅವರೇನು ಒಳ್ಳೆಯವರೇ. ಆದರೆ ಪ್ರಾಪಂಚಿಕ ಯೋಚನೆಗಳಿಂದ ನಿಯಮಾಧೀನವಾದ ಅವರ ಮನಸ್ಸಿಗೆ ಅವರ ಮಾತುಗಳ ಗ್ರಹಿಕೆ ಕಷ್ಟ. ಹಾಗಾಗಿಯೇ ಅತ್ಯುನ್ನತ ಅಧ್ಯಾತ್ಮಿಕ ಜೀವಿಗಳು ಗಾಂಧೀಜಿಯವರನ್ನು ಅಪಾರವಾಗಿ ಗೌರವಿಸುತ್ತಿದ್ದರು.

೧೯೬೦ರಲ್ಲಿ ಗಾಂಧೀಜಿಯವರ ಪರಂಪರೆಯನ್ನು ಅಧ್ಯಯನ ಮಾಡಲು ಅಹಮದಾಬಾದಿಗೆ ಬಂದ ಅಮೆರಿಕದ ಶ್ರೇಷ್ಠ ಮನಶಾಸ್ತ್ರಜ್ಞ ಎರಿಕ್ ಎರಿಕ್ಸನ್, ನಂತರ, Gandhi's TruthThe origins of militant Non Violence ಎಂಬ ಪುಸ್ತಕ ರಚಿಸಿದರು. ಗಾಂಧಿಯವರನ್ನು ಗರಿಷ್ಠ ಅಖಂಡತೆಯ (the wholest) ಮಾನವ ಚೇತನ ಎಂದು ಗುರುತಿಸಿ, ನಮ್ಮ ದೃಷ್ಟಿಕೋನ ಸಮಗ್ರವಾದಷ್ಟು, ವಿಶಾಲವಾದಷ್ಟೂ, ವಿಸ್ತಾರವಾದಷ್ಟು ಗಾಂಧೀಜಿಯವರನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು ಎಂದರು. ಗಾಂಧೀಜಿಯವರು ಇತರರಿಗಿಂತ ತಮ್ಮದು ಉತ್ತಮ ಆತ್ಮ ಎಂದು ಎಂದೂ ಭಾವಿಸಲಿಲ್ಲ.

'ನಾನು ಭಗವಾನ್, ಎಲ್ಲರೂ ಭಗವಾನ್' ಎನ್ನುತ್ತಿದ್ದರು ರಮಣರು. ಗಾಂಧೀಜಿಯವರನ್ನು ಸ್ವಂತ ಮಗಳಂತೆ ಪ್ರೀತಿಸುತ್ತಿದ್ದ ಮಾ ಆನಂದಮಯಿಯವರನ್ನು, ಎಲ್ಲರೂ ಹೇಳುವಂತೆ ನೀವು ನಿಜವಾಗಿಯೂ ದುರ್ಗೆಯೆ ಎಂದು ಭಕ್ತರೊಬ್ಬರು ಪ್ರಶ್ನಿಸಿದಾಗ, ಮಾ 'ನಾನು ದುರ್ಗ, ನೀವು ಸಹ ದುರ್ಗ' ಎಂದು ಉತ್ತರಿಸಿದ್ದರು.. ಯಾರು ಯಾರಿಗಿಂತಲೂ ಶ್ರೇಷ್ಠರಲ್ಲ ಎಂಬುದು ನನ್ನ ಅನುಭವ ಮತ್ತು ದೃಢ ನಂಬಿಕೆ ಎಂದು ಗಾಂಧೀಜಿಬರೆಯುತ್ತಾರೆ. ಅಂತೆಯೇ ಭಗವಾನರ ಸಾನಿಧ್ಯದಲ್ಲಿ ಉಭಯ, ಅನ್ಯ ಎಂಬ ಅಸ್ತಿತ್ವವೇ ಇಲ್ಲ ಎಂಬುದನ್ನು ಕಂಡುಕೊಂಡಿದ್ದೇವೆ.

ಆಳವಾಗಿ ಗಮನಿಸುವ ಯಾರಿಗೆ ಆಗಲಿ, ಗಾಂಧೀಜಿಯವರ ವಿಸ್ಮಯದ ಬದುಕು ಪವಾಡಸದೃಶ ಎಂದೆನಿಸದೆ ಇರದು. ತಮ್ಮ ಜೀವನವೇ ತಮ್ಮ ಸಂದೇಶ ಎಂಬುದನ್ನು ಬಿಟ್ಟು ಬೇರೆ ಯಾವ ಉಪದೇಶಕ್ಕೂ ಅವಕಾಶ ಕೊಡದಂತೆ ಅವರು ಎಚ್ಚರವಹಿಸಿದ್ದರು.

ತಾವು ಕಂಡ ಜನರ ಪೈಕಿ ಬಹುಪಾಲು ಕ್ರಿಸ್ತನಂತಹ ವ್ಯಕ್ತಿಯೇ ಆಗಿದವ್ದರು ಗಾಂಧೀಜಿ ಎಂದು ಕ್ಯಾಂಟರ್‌ಬರಿಯ ಪರಮ ಕ್ರೈಸ್ತಗುರು ಹಾಡಿ ಹೊಗಳಿದ್ದರು. ಕ್ರಿಶ್ಚಿಯನ್ನರ ದಾಖಲಿತ ಇತಿಹಾಸದಲ್ಲಿ ಮಹಾನ್ ಸುವಾರ್ತಾ ಬೋಧಕ ಸಂತ ಪಾಲ್‌ರ ಅಪರಾವತಾರವೇ ಗಾಂಧಿಯೆಂದು ಮೊದಲು ಆರಾಧಿಸಿದ ಫ್ರಾನ್ಸಿನ ಮೇಧಾವಿ ರೊಮೆ ರೊಲಾ, ನಂತರ ಗಾಂಧೀಜಿ ಅವರು ಸಂತ ಪಾಲರ ಪರಮ ಒಡೆಯ, ಸಾಕ್ಷಾತ್ ಕ್ರಿಸ್ತನೇ ಎಂದು ಗುರುತಿಸಿ, ಗೌರವಿಸಿ, ನಮಿಸಿದರು. ಗಾಂಧೀಜಿಯವರು ಹುತಾತ್ಮರಾದರು ಎಂದು ತಿಳಿದಾಗ ಅಮೆರಿಕದ ಪ್ರಸಿದ್ಧ ಕಾದಂಬರಿಕಾರ ಪರ್ಲ್ ಎಸ್ ಬಕ್ 'ಇಂದು ಎರಡನೆಯ ಬಾರಿಗೆ ಶಿಲುಬೆಗೇರಿಸಲಾಯಿತು ಎಂದು ಶೋಕಿಸಿದರು. ಐನ್‌ಸ್ಟೀನ್‌ರು ಮೋಸೆಸ್, ಜೀಸೆಸ್, ಗಾಂಧಿಯವರ ಬಗ್ಗೆ ಒಂದೇ ಉಸಿರಿನಲ್ಲಿ ಮಾತನಾಡುತ್ತಿದ್ದರು. ಅವತಾರ ಪುರುಷನಿಗಿಂತ ಜ್ಞಾನಿಯೇ ಸಂಪೂರ್ಣ ಎಂದು ಹೇಳಲಾಗುತ್ತದೆ. ಅವತಾರ ಸತ್ಯದ ಪರಿವರ್ತನೆಗೆ ಭಾಗಶಃ ಅನುವು ಮಾಡಿಕೊಟ್ಟರೆ, ಜ್ಞಾನಿಯಲ್ಲಿ ಅದು ಸಂಪೂರ್ಣ ಸಾಕಾರವಾಗುವುದು ಎಂಬುದು ಭಗವಾನರ ಅಭಿಪ್ರಾಯವಾಗಿತ್ತು. ಮಹಾತ್ಮ ಮತ್ತು ಭಗವಾನರಲ್ಲಿ ನಾವು ಸತ್ಯದ ಹೊಳಪು ಕಂಡಷ್ಟು ಬೇರೆಲ್ಲಿಯೂ ಕಾಣಲು ಸಾಧ್ಯವಿಲ್ಲ. ಪ್ರಾಯಶಃ ಇದೊಂದೇ ಸಮಯದಲ್ಲಿ ಹೋಲಿಕೆ ಮಾಡುಲೋಸುಗ ಉಭಯದ ನೆಲೆಗಳಲ್ಲಿ ಭಗವಾನರನ್ನು ನೋಡುವ ಅವಶ್ಯಕತೆ ಉಂಟಾಗುವುದೇನೋ ಎಂಬ ಭಾವ ಮೂಡುತ್ತದೆ. ಇಲ್ಲ, ಹಾಗಲ್ಲ ಅದು, ರಮಣರ ನಯನಗಳು ಜ್ಞಾನದಿಂದ ಬೆಳಗುತ್ತಿದ್ದವು ಮತ್ತು ಜ್ಞಾನದ ಬೆಳಕನ್ನು ಬಿಟ್ಟು ಬೇರೇನನ್ನೂ ನೋಡುತ್ತಿರಲಿಲ್ಲ. ಬಹುಶಃ ಅವರು ಜ್ಞಾನಿಯ ಅವತಾರ ರೂಪದ ಅಪೂರ್ಣತೆಯನ್ನು ಸೂಚಿಸುತ್ತಿದ್ದರು. ಜೀವ, ಮಹಾತ್ಮ, ಅವತಾರ ಪುರುಷ, ಜ್ಞಾನಿ ಎಲ್ಲವೂ ಅಭಿನ್ನ ಉಭಯಾತೀತ ಅಖಂಡ ಪರಬ್ರಹ್ಮವೇ,



**(ಗಾಂಧಿಯವರನ್ನು ಕುರಿತ ಪನ್ನಾಲಾಲ್ ದಾಸ್‌ಗುಪ್ತ ಅವರ ಬಂಗಾಳಿ ಕೃತಿಯನ್ನು 'ರೆವಲ್ಯೂಷನರಿ ಗಾಂಧಿ' ಎಂದು ಇಂಗ್ಲಿಷ್‌ಗೆ ಅನುವಾದಿಸಿರುವ ಲೇಖಕ ಕೆ.ವಿ. ಸುಬ್ರಮಣ್ಯನ್ ತಿರುವಣ್ಣಾಮಲೈನಲ್ಲಿರುವ ಶ್ರೀರಮಣಾಶ್ರಮದಲ್ಲಿ ನೆಲೆಸಿದ್ದಾರೆ)**

(ಕೃಪೆ: **ಮೌಂಟನ್ ಪಾತ್**, ಅಕ್ಟೋ–ಡಿಸೆಂ. ೨೦೧೮)

## ಚಂದಾದಾರರಾಗ ಬಯಸುವವರಿಗೆ ಸೂಚನೆ

**'ಹೊಸ ಮನುಷ್ಯ' ಚಂದಾದಾರರಾಗಬಯಸುವವರು ೨೦೧೮ರ ಅಕ್ಟೋನಿಂದ ಸೆಪ್ಟಂ. ೨೦೨೦ರವರೆಗಿನ ೧೨ ಸಂಚಿಕೆಗಳಿಗೆ 200 ರೂ. ಗಳ ವಾರ್ಷಿಕ ಚಂದಾವನ್ನು ಚೆಕ್/ಡಿಡಿ/ಎಂ.ಓ ಮೂಲಕ ಅಥವಾ ಶಿವಮೊಗ್ಗದ ಎಸ್‌ಬಿಐನ ಗೀತಾಕೃಪಾಶಾಖೆಯಲ್ಲಿ(ifsc: sbin 0040444) 'ಸಂಪಾದಕರು: ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ಹಣ ವರ್ಗಾವಣೆ ಮಾಡಬಹುದು. ನಗದು ವರ್ಗಾವಣೆ ಬೇಡ. ಚಂದಾ ಪಾವತಿಯಾದ ನಂತರ 9449242284 ಈ ಸಂಖ್ಯೆಗೆ ಪಾವತಿಯ ಬಗ್ಗೆ ಕರೆ ಅಥವಾ ಸಂದೇಶದ ಮೂಲಕ ತಿಳಿಸಲು ವಿನಂತಿ–ಸಂ**

# ನವಿಲುಗರಿ

### ಮಡಕೆಯ ಮಾಡುವಡೆ...



ತುಳಿದು ತುಳಿದು
ಹದಗೊಂಡು
ತಿರುಗಣಿಯ ಮೇಲೆ
ಮುದ್ದೆಯಾಗಿ ಕುಳಿತ ಮಣ್ಣಿಗೆ
ತಿಳಿದಿರಲಿಲ್ಲ
ತಾನು ಪಡೆದುಕೊಳ್ಳುವ ರೂಪು.

ನಿಧಾನ ತಿರುತಿರುಗಿ
ಮೈದುಂಬಿ ಕೊರಳು ಕಂಠವರಳಿದ್ದು
ಬರೀ ಕೈಚಳಕದಿಂದಲ್ಲ.
ಅವ್ಯಕ್ತಕ್ಕೆ ರೂಪುಗೊಂಡ ಮಡಕೆ.
ಒಳಹೊರಗೆಲ್ಲ ಪ್ರೀತಿ ಚಿತ್ತಾರ!



ಜತನದಿಂದ ತಟ್ಟಿ ತಟ್ಟಿ
ತಳಪಟ್ಟಿ ಕಟ್ಟಿ
ಬಿಸಿಲಲ್ಲಿ ಬೋರಲಿಟ್ಟು
ಬೆಂಕಿಯಲ್ಲಿ ಸುಟ್ಟು
ಹದಗೊಳಿಸಿದರೆ
ಸಿದ್ಧಿಸುವ ನವಪಾಕ.

ಇಲ್ಲ ಇಲ್ಲ. ಇಷ್ಟಕ್ಕೆ ಪಳಗಲಾರದು ಮಡಕೆ.

ಕೆನೆಗಟ್ಟಿದ ಹಾಲು ಮೊಸರಾಗಿ
ಕಡೆಗೋಲ ಹಿಡಿದು ಕಡೆಯಬೇಕು.
ತೇಲಿ ಬಂದ ಬೆಣ್ಣೆ ತುಪ್ಪವಾಗಬೇಕು.

ಕೊಳ್ಳಲಾಗದ ಮಾರಲೂ ಆಗದ ಮಡಕೆ.
ಪಳಗಿದರಷ್ಟೆ ಸಾಕೆ?
ಬೇಸರಿಸದೆ ಸಿಡುಕದೆ ಎಚ್ಚರದಲ್ಲಿ ಕಾಯಬೇಕು.

ಕಾಯಬೇಕು
ತುಂಬು ಪ್ರೀತಿಯಲ್ಲಿ
ಒಡೆಯದ ಹಾಗೆ
ಮಡಕೆಯೊಳಗಿನ ಆತ್ಮವನ್ನು.

ಆಗಷ್ಟೇ ದಕ್ಕೀತು
ಹದಗೊಂಡು ರೂಪುಗೊಂಡ
ಮಣ್ಣಿನ ಹಣತೆಯೊಳಗೆ
ತಿಳಿದುಪ್ಪ ದೀಪವಾಗಿ
ಬೆಳಗುವ
ಆ ಮಹಾ ಬೆಡಗು!

**–ಗೀತಾ ಡಿ.ಸಿ**



### ವಿಷ ಉಣಿಸು....

ಗೊತ್ತಿಲ್ಲ, ಕಾಯಕವೇ ಕೈಲಾಸವೋ?
ಕಾಯವೇ ಕೈಲಾಸವೆಂದು ತಿಳಿದಿದ್ದೇವೆ!
ಬಡಿಸುತ್ತೇವೆ ತೆರಪಿಲ್ಲದೆ
ತಲೆ ಬಾಗಿದ್ದೇವೆ ಇಂದ್ರಿಯಗಳಿಗೆ
ವಿಚಿತ್ರ ಹಂಬಲ ಪ್ರತಿಯೊಂದರದ್ದು
ದಾಸ್ಯದ ದಾಸರು ನಾವು
ಬೇಡಿದ್ದೆಲ್ಲ ಪೂರೈಸುತ್ತೇವೆ
ಬೇಡಿಕೆ ಪೂರೈಕೆಯ
ಸಮತೋಲನ ಕಾಯ್ದಿದ್ದೇವೆ
ಮಿತಿಮೀರಿದ ವೃದ್ಧಿ
ಅತಿವೇಗ ಕಾಯ(ಕ)ದ್ದು!

ವಂಚಕ ಸುಳ್ಳುಗಳ
ಭರಪೂರ ಫಸಲು



ಮಾರುಕಟ್ಟೆಯ ತುಂಬ
ಬಿಕರಿಗಿಡಲಾಗಿದೆ
ನಾಜೂಕಯ್ಯರ ನಗುಗಳ

ಅನ್ನಕ್ಕೇ ಕನ್ನ ಹಳೆ ಮಾತು!
ಒಡಲಿಗೇ ವಿಷವಿಕ್ಕಿ ಬಾಚುವ
ಮನಕ್ಕೇ ಕನ್ನವಿಕ್ಕುವ
ಗರ್ಭವೇ ಗಣಿಯಾಗಿರುವ
ಧೃತರಾಷ್ಟ್ರಪ್ಪುಗೆ ಪ್ರೀತಿಯ
ಜಾಹೀರಾತು ಬದುಕು.

ಮನಕ್ಕೆ ಮಾನಕ್ಕೆ ಮಣ್ಣಿಗೆ
ಮತಿಗೆ ಮಾತಿಗೆ ಮುತ್ತಿಗೆ
ಬೆಳೆಗೆ ಬಾಳಿಗೆ ಬೆಳಕಿಗೆ
ನಿತ್ಯ ವಿಷ ಉಣಿಸು.

ಉತ್ತಿ ಬಿತ್ತಿ ಹೊತ್ತು ಹೆತ್ತು
ತೊಡೆಯಲಾಡಿಸಿ ಹಾಲುಣಿಸಿದ
ಬೇರಿಳಿದ ಗರ್ಭದ ಪ್ರೀತಿ ಬತ್ತಿ, ತೀರಿ
ಮುಕ್ಕಿದ ಅಪಥ್ಯವಿದು.

**– ಪ್ರಕಾಶ್ ಮರ್ಗನಳ್ಳಿ**



### ಕಾಡು ಹೊಳೆ

ಮನವೇ
ಹರಿಯದಿರು ಕಾಡು ಹೊಳೆಯಾಗಿ
ಅರೆಕ್ಷಣ ಅರಿತು ಮರುಕ್ಷಣ ಮರೆಯಾಗಿ

ಸೊಕ್ಕಿನಿಂದ ಎದೆಯುಬ್ಬಿಸಿ ನಿಂತ
ಒಂದು ಕಲ್ಲಿಗೂ
ಹಿಡಿಯಲಾಗಿಲ್ಲ ನಿನ್ನ
ಮೋಡಗಳ ಜಡೆ  ಎಳೆದು ಮಳೆ ಹಿಂಡುವ
ಒಂದು ಗುಡ್ಡಕ್ಕೂ
ಮುಡಿಯಲಾಗಿಲ್ಲ ನಿನ್ನ

ನಿನ್ನ ಮೂಲ ಕೇಳಿಲ್ಲ
ನನಗೆ ನಿನ್ನ ಗಮ್ಯ ಬೇಕಿಲ್ಲ
ಇಲ್ಲಿ ನೀರ್ಗುಳ್ಳೆಯಂತೆ ಒಡೆವ
ಕ್ಷಣ ಗರ್ಭಗಳೊಳಗೆ ನಿನ್ನ ರೂಹೇನು?

ನಿರ್ಭೀತ ಹೆಣ್ಣೊಂದು ಅಲೆಮಾರಿ ಅಲೆದಂತೆ
ನನ್ನ ಹಿಡಿವ ಕನಸೂ ಕಾಣದಿರು ಎಂದಂತೆ
ಕಡಲುದ್ದ ಭೋರ್ಗರೆವ ಮಳೆಗಾಲದಲೆಯಂತೆ
ಮಿಂಚಂತೆ, ಅರೆಘಳಿಗೆ ಎಲ್ಲವೂ ಕಂಡಂತೆ



ಅದರಂತೆ ಇದರಂತೆ
ಇಲ್ಲದೆ ಹೋದಂತೆ

ನನ್ನೊಳು ನಿನಗೆ ಕೆಲಸವೇನು?

**–ಸ್ವಯಂಪ್ರಭಾ**



ಚಿತ್ರ:ವಿಜಯಶ್ರೀ ಹಾಲಾಡಿ

ಕಥೆ

# ಹಂಟ್ಲಿ ವೇ

–ಸುನಂದಾ ಕಡಮೆ



ಚಿತ್ರ: ಬಿ.ಜಿ. ಗುಜ್ಜಾರಪ್ಪ

ದಾರಿ ತಪ್ಪಿದೆ ಅಂತ ನನಗೆ ಆ ಕ್ಷಣದಲ್ಲೇ ಅನ್ನಿಸಿಬಿಟ್ಟಿತು.

ಎದುರಲ್ಲಿ ಹಂಟ್ಲಿ ವೇ ಎಂಬ ಕಪ್ಪು ಬಾಣದ ಚಿನ್ಹೆ ಹೊತ್ತ ಇಂಗ್ಲೀಷಿನಲ್ಲಿ ಬರಕೊಂಡ ಒಂದು ಹಳದಿ ಬೋರ್ಡು ದೆವ್ವದಂತೆ ಅಣಕಿಸುತ್ತಿತ್ತು. ಉಪಾಯವಿಲ್ಲದೇ ಅದರ ಪಕ್ಕದಲ್ಲಿಯೇ ಒಂದು ಕ್ಷಣ ನಿಂತು ಸುಧಾರಿಸಿಕೊಂಡೆ. 'ಮನೆಯಿರುವುದು ಮಿಲ್ಟನ್ ರೋಡ್‌ನಲ್ಲಿ, ನೆನಪಿಟ್ಟುಕೋ' ಅಂತ ನನ್ನ ಮಗ ನರೇಂದ್ರ ಸಾರಿ ಸಾರಿ ಹೇಳಿದ್ದ. ಯಾರ ಬಳಿ ಕೇಳೋದು ಮಿಲ್ಟನ್ ರಸ್ತೆಯ ದಾರಿಯನ್ನು? ರಸ್ತೆಯಲ್ಲಿ ಎಷ್ಟೋ ಹೊತ್ತಿನಿಂದ ಒಂದೇ ಒಂದು ಮನುಷ್ಯ ಚಹರೆಯೂ ಕಾಣ ಸಿಗುತ್ತಿಲ್ಲ. ಈಗಷ್ಟೇ ಥಳಪಳ ತೊಳೆದಿಟ್ಟಂತಿರುವ ರಸ್ತೆಯಲ್ಲಿ ಬಣ್ಣಬಣ್ಣದ ಕಾರುಗಳು ಒಂದರ ಹಿಂದೆ ಒಂದು ಸುಂಯನೆ ಚಲಿಸುತ್ತಿದ್ದವು. ಹಿಮದ ಚಳಿಗೆ ಎಲೆ ಉದುರಿಸಿಕೊಂಡು ಬರಡಾಗಿ ನಿಂತಂತೆ ಕಾಣುವ ಗಿಡಗಳು ಈಗ ಹೊಸ ಎಲೆಗಳ ಚಿಗುರಿಸಿ ರಂಗುರಂಗಿನ ಹೂಬಿಟ್ಟು ಕಣ್ಣಿಗೆ ಸುಮನೋಹರವಾಗಿ ಕಾಣುತ್ತಿತ್ತು. ದೊಡ್ಡ ಹಸಿರು ಲಾನ್‌ಗಳು ಸುತ್ತುವರಿದ ತರತರದ ವಿನ್ಯಾಸದ ಸಾಲುಸಾಲು ಮನೆಗಳಲ್ಲಿ ಒಂದು ಪಿನ್ನು ನೆಲಕ್ಕೆ ಬಿದ್ದರೂ ಸದ್ದು ಪ್ರತಿಧ್ವನಿಸುವಷ್ಟು ಪ್ರಶಾಂತತೆ.

ತಕ್ಷಣ ನನ್ನಂತೆಯೇ ವಾಕಿಂಗಿಗೆ ಬಂದವನ್ಯಾರೋ ಎದುರು ಆಗಮಿಸುತ್ತಿರುವುದು ದೂರದಿಂದ ಗೋಚರಿಸಿತು. ಇಲ್ಲಿಯ ರಸ್ತೆಗಳಲ್ಲಿ ಅಪರೂಪಕ್ಕೆ ಮನುಷ್ಯ ಜೀವಿಗಳನ್ನು ಕಂಡರೇನೆ ಮನಸ್ಸಿಗೆ ಎಂಥದೋ ಆರ್ದ್ರತೆ. ಅವನು ದಾಪುಗಾಲಿನಲ್ಲಿ ಚೂರು ಚೂರೇ ಸನಿಹವಾಗುತ್ತ ಬಂದಂತೆಯೇ ನಾನು 'ಪ್ಲೀಸ್, ಮಿಲ್ಟನ್ ರೋಡ್' ಅಂತ ಪಿಸುಗುಟ್ಟಿದೆ. ಆತನ ಕಿವಿಗಳಿಗೆ ಇಯರ್ ಫೋನ್ ಇದ್ದುದರಿಂದ ನನ್ನ ಮರ್ಮರ ಅವನನ್ನು ತಲುಪಲೇ ಇಲ್ಲ. ಅದೇ ಹಂಟ್ಲಿವೇ ನಲ್ಲೇ ಉಪಾಯವಿಲ್ಲದೆ ನಡೆಯತೊಡಗಿದೆ. ಒಂದೆರಡು ನಿಮಿಷ ನಡೆದವಳು ಪುನಃ ಅದು ಆ ತನಕ ಕಂಡ ರಸ್ತೆಯೇ ಅಲ್ಲ ಅನ್ನಿಸಿ ಮತ್ತೆ ವಾಪಸ್ಸು ನಡೆದು ಹೊರಟಲ್ಲಿಗೇ ಬಂದು ನಿಂತೆ. ಏನು ಮಾಡಬೇಕೆಂದು ತಿಳಿಯದೇ ಎಡ ಮಗ್ಗುಲಲ್ಲಿ ಒಂದೆರಡು ನಿಮಿಷ ನಡೆದು ಮುಂದೆ ಹೋದಂತೆ ಅಲ್ಲಿ ವಾಲ್ಟರ್‌ಬ್ರೂಕ್ ಎಂಬ ರಸ್ತೆ ಕಾಲಿಗೆ ತೊಡರಿತು. ಇಲ್ಲಿ ತಿರುಗಿಕೊಂಡರೆ ನಮ್ಮ ಮಿಲ್ಟನ್ ರಸ್ತೆ ಬರಬಹುದು ಅಂತ ಯಾಕೋ ಅನ್ನಿಸಿದ್ದೇ, ತಟ್ಟನೆ ಹೊರಳಿಕೊಂಡೆ. ಹಿಂದಕ್ಕೆ ತಿರುಗಿಬಿಡಲೇ? ಇದು ಸರಿ ರಸ್ತೆಯಲ್ಲ ಇದಲ್ಲ ಅಲ್ಲವೇ ಅಲ್ಲ ಅನ್ನಿಸುತ್ತಿದ್ದರೂ ಇನ್ನೊಂದೆರಡು ನಿಮಿಷಗಳವರೆಗೆ ನಡೆಯುತ್ತಲೇ ಇದ್ದೆ. ಅಚ್ಚರಿಯೆಂದರೆ ಅಲ್ಲಿಯೂ ಒಂದು 'ಹಂಟ್ಲಿ ವೇ' ಎದುರಾದದ್ದು. ಹಸ್ತಗಳು ನನಗರಿವಿಲ್ಲದೇ ನನ್ನೆರಡೂ ಕಿವಿಗಳನ್ನು ಮುಚ್ಚಿದ್ದವು. ಆ ಬೋರ್ಡನ್ನು ಸರಿಯಾಗಿ ಒಂದೊಂದೇ ಅಕ್ಷರ ಹಿಡಿದು ಓದುತ್ತ ನಿಂತೆ.

ಪಕ್ಕದ ರಸ್ತೆಯ ತಿರುವಿನಿಂದ ದಾರಿತಪ್ಪಿ ಬಂದವಳಂತೆ ಬಿಳಿಯ ಯುವತಿಯೋರ್ವಳು ಸ್ಟ್ರೋಲರನಲ್ಲಿ ತನ್ನ ಪುಟ್ಟ ಮಗುವನ್ನು ಇರಿಸಿಕೊಂಡು ತಟ್ಟನೆ ಎದುರಾದಳು. 'ಮಿಲ್ಟನ್ ರಸ್ತೆ, ವೇರ್ ಇಸ್ ಮಿಲ್ಟನ್ ರಸ್ತೆ?' ಅಂತ ಸನ್ನೆ ಮಾಡಿ ಅವಳಲ್ಲಿ ವಿಚಾರಿಸಿದೆ. ಅಲ್ಲೇ ತಡೆದು ನಿಂತು ತನ್ನದೇ ಇಂಗ್ಲೀಷಲ್ಲಿ ಏನೋ ಗೊಣಗುತ್ತ ಜೇಬಿಂದ ತನ್ನ ಮೊಬೈಲ್ ತೆಗೆದು ನನ್ನ ಕಣ್ಣುಗಳನ್ನೇ ದಿಟ್ಟಿಸುತ್ತ ಏನೋ ಕೇಳಿದಳು. ನನಗೆ ಅದರ ಅರ್ಥ ಹಿಡಿಯಲು ಕಷ್ಟವಾಯಿತು. ಒಂದೆರಡು ನಿಮಿಷದ ನಂತರ ಅವಳು ನನ್ನ ಮಗನ ಫೋನ್ ನಂಬರು ವಿಚಾರಿಸುತ್ತಿದ್ದಾಳೆ ಅಂತ ಅರಿವಿಗೆ ಬಂತು. ಆದರೆ ಮಗನ ಫೋನ್ ನಂಬರಿನ ಜೊತೆ ನನ್ನ ಫೋನನ್ನೂ ಚಾರ್ಜಿಗೆ ಹಾಕಿದ್ದರಿಂದ ಇವತ್ತು ಮನೆಯಲ್ಲೇ ಬಿಟ್ಟು ಕೈಬೀಸುತ್ತ ಬಂದುಬಿಟ್ಟಿದ್ದೆ. ಅದಕ್ಕಾಗಿಯೇ 'ಫೋನು ಬಿಟ್ಟು ವಾಕಿಂಗಿಗೆ ಹೋಗಬೇಡ' ಅಂತ ಮಗ ಯಾವಾಗಲೂ ಗದರುತ್ತಾನೆ, ಅವಳ ಮಗು ಸ್ಟ್ರೋಲರ್‌ನಲ್ಲೇ ಕುಸುಕುಸು

> ಎತ್ತಲಿಂದ ಎತ್ತ ತಿರುಗಿ ಬಂದರೂ ಮತ್ತೆ ಮತ್ತೆ ಕಾಲಿಗೆ ತೊಡರುವ ಈ ಹಂಟ್ಲಿವೇ ರಸ್ತೆಗೆ ಹೆಬ್ಬಾವಿನ ಆಕಾರವಿರಲೇಬೇಕು, ಇಲ್ಲದಿದ್ದರೆ ಒಂದೇ ಏರಿಯಾದಲ್ಲಿ ಇಷ್ಟೊಂದು ಹಂಟ್ಲಿವೇಗಳಿರಲು ಹೇಗೆ ಸಾಧ್ಯ? ತಾಯ್ನೆಲದಿಂದ ಹದಿನಾಲ್ಕು ಸಾವಿರ ಕಿ.ಮೀ ದೂರ ಬಂದು ಇಲ್ಲಿ ಹೀಗೆ ವಿಚಿತ್ರ ರೀತಿಯಲ್ಲಿ ನಿರ್ಜನ ಬೀದಿಯೊಂದು ನನ್ನನ್ನು ಬೇಟೆಯಾಡುತ್ತಲಿದೆ ಅಂದರೆ ಈ ನೆಲದ ಮಹಿಮೆ ಎಂಥದ್ದು? ನನ್ನ ಮಗನನ್ನೂ ಈ ರಸ್ತೆಗಳು ಹೀಗೆಯೇ ಬೇಟೆಯಾಡಿ ಹಿಡಿದಿವೆ ಅನ್ನಿಸಿತು. ಅಥವಾ ಹಂಟ್ಲಿವೇ ಬೋರ್ಡು ಹೊತ್ತು ನಿಂತ ಆ ಕಂಬವೇ ಜೀಸಿ ಬರುವ ತಂಗಾಳಿಗೆ ಬೇಕಾಬಿಟ್ಟಿ ತಿರುಗಿ ನನ್ನ ದಾರಿ ತಪ್ಪಿಸುತ್ತಿದೆಯೇ?

ಸ್ವರ ಹೊರಡಿಸಿದ್ದರಿಂದ ವಿಷಾದದ ಮುಖ ಹೊತ್ತ ಅವಳು ಇನ್ನೇನೋ ಹೇಳುತ್ತ ನಡೆದುಹೋದಳು. ಮತ್ತೀಗ ನಿರ್ಜನ ರಸ್ತೆ, ಪಕ್ಕದ ಸಾಲು ಮರಗಳಲ್ಲಿ ಕೇಳಿಬರುವ ಚಿಲಿಪಿಲಿ ಸ್ವರ ಮತ್ತು ನಾನು. ಇಲ್ಲಿಗೆ ಬಂದು ತಿಂಗಳು ತುಂಬುತ್ತ ಬಂದಿದೆ. ಮೊದಮೊದಲು ವೀಕೆಂಡಿನಲ್ಲಿ ನನ್ನ ಜೊತೆಯಲ್ಲೇ ಬಂದು ಈ ವಾಕಿಂಗಿನ ಸರಹದ್ದು ತೋರಿಸಿದ್ದ ಮಗ. ಅವನಿಗೆ ಆಫೀಸಿನಲ್ಲಿ ವರ್ಕ್‌ಲೋಡ್ ಇದ್ದ ಕಾರಣ ಆ ನಂತರದಲ್ಲಿ ನಾನೊಬ್ಬಳೇ ಹೀಗೆ ಬಂದು ಹೋಗುವ ರೂಢಿ ಮಾಡಿಕೊಂಡೆ. 'ಪಾಥವೇ ಇದ್ದಲ್ಲಿ ಮಾತ್ರ ನಡೆಯಬೇಕು, ಅಪ್ಪಿತಪ್ಪಿ ರಸ್ತೆಗೆ ಇಳಿದು ನಡೆಯತೊಡಗಿದೆ ಅಂದರೆ ಪೋಲೀಸ್ ವ್ಯಾನ್ ಬಂದು ನಿನ್ನ ಹತ್ತಿಸಿಕೊಂಡು ಹೋಗ್ತದೆ' ಅಂತ ಮಗ ಬೇರೆ ಮೊದಲ ದಿನವೇ ಎಚ್ಚರಿಕೆ ಕೊಟ್ಟಿದ್ದ.

ಇವತ್ತು ಸುಮ್ಮನೇ ಮನೆಯ ಬೇಸ್ಮೆಂಟಿನ ವಿಶಾಲ ಜಾಗೆಯಲ್ಲೇ ವಾಕ್ ಮಾಡಬೇಕಿತ್ತು ಅಂತ ತೀವ್ರವಾಗಿ ಅನ್ನಿಸಿತು. ಗಂಟಲು ಕಟ್ಟಿ ಬಂತು. ಯಾಕೋ ಹುಟ್ಟೂರಲ್ಲಿ ಬಿಟ್ಟುಬಂದ ಕರಾವಳಿಯ ಒಂಟಿ ಮನೆ, ಸದ್ಯ ಅದರ ದೇಖರೇಖೆಗೆ ನಿಂತ ಸೋದರ ಸುಧೀರ ಮತ್ತವನ ಮಗಳು ಅನ್ವಿತಾ ಎಲ್ಲ ಥುತ್ತನೆ ನೆನಪಾದರು. 'ಒಮ್ಮೆ ನೀನೇ ಹೋಗಿ ಬಾ, ಹೇಗೂ ವೀಸಾ ಇದೆ, ಭಾವ ತೀರಿದ ನಂತರ ಅವನ ಮದುವೆ ನನ್ನದೇ ಜವಾಬ್ದಾರಿ, ನಾನು ಜವಾಬ್ದಾರಿ ಸರಿ ನಿರ್ವಹಿಸಿಲ್ಲ ಅಂತ ನನ್ನನ್ನು ಎಲ್ಲರ ದೃಷ್ಟೀಲಿ ಅಪರಾಧಿ ಮಾಡಬೇಡ' ಅಂತ ಇಲ್ಲಿಗೆ ಬರಲು ಒತ್ತಾಯಿಸಿದವನೇ ನನ್ನ ತಮ್ಮ ಸುಧೀರ. ತಂದೆಯಿಲ್ಲದ ನತದೃಷ್ಟ, ಏನು ಮಹಾ ಕಲಿತಾನು ಅಂತೆಲ್ಲ ಮೊದಮೊದಲು ತಾತ್ಸಾರ ಮಾಡಿದ ಸುಧೀರ ಇಂದು ತನ್ನ ಮಗಳನ್ನೇ ಕೊಡಲು ತುದಿಗಾಲಲ್ಲಿ ನಿಂತಿದ್ದಾನೆ. ಮಗನ ಮದುವೆಯ ನಿಶ್ಚಯಕ್ಕೆ ಬಂದವಳು ಹೀಗೆ ದಿಕ್ಕೆಟ್ಟು ಅಲೆಯುವಂತಾಯ್ತಲ್ಲ.

ಅಲ್ಲೇ ಬಲಕ್ಕೆ ತಿರುಗಿ ಇನ್ನೂ ಒಂದಿಷ್ಟು ನಡೆದೆ. ವೆಂಡರ್‌ವೀರ್ ಅನ್ನೋ ಬಹು ವಿಸ್ತಾರವಾದ ರಸ್ತೆ ನಿಲುಕಿತು. ನಡೆದಷ್ಟೂ ಮುಗಿಯುತ್ತಲೇ ಇಲ್ಲದ ಅದೇ ವೆಂಡರ್‌ವೀರ್ ರಸ್ತೆ ಕಟ್ಟಕಡೆಯಲ್ಲಿ ಟಿಸಿಲೊಡೆದಿತ್ತು. ಒಮ್ಮೆಲೇ ಎಡಕ್ಕೆ ತಿರುಗಲೋ ಬಲಕ್ಕೋ ತಿಳಿಯಲಿಲ್ಲ. ಮಿದುಳು ಸ್ಥಗಿತಗೊಂಡಿತ್ತು. ಅಂದು ಇದ್ದಕ್ಕಿದ್ದಂತೆ ನರೇಂದ್ರನ ಅಪ್ಪ ತೀರಿಹೋದಾಗಲೂ ಸಹ ನನ್ನ ಮನಸ್ಸಿಗೆ ಇದೇ ರೀತಿಯ ಗೊಂದಲವಾಗಿತ್ತು. ಇಂದು ಎರಡನೇ ಬಾರಿ ನಾನು ಅಂಥದೇ ಒಂದು ತಿರುವಿನಲ್ಲಿ ನಿಂತಿದ್ದೆ. ಮನಸ್ಸಿನಲ್ಲಿ ಮನೆ ದೇವರು ಕೊಲ್ಲೂರ ಮೂಕಾಂಬಿಕೆಯನ್ನು ನೆನೆಯುತ್ತ ಏನಾದರಾಗಲಿ ಎಂದುಕೊಳ್ಳುತ್ತ ಬಲಕ್ಕೆ ಹೆಜ್ಜೆಯಿರಿಸಿದೆ. ಎದುರು ರೇಲ್ವೆ ಹಳಿಗಳು. ಥಟ್ಟನೆ ಎಂಟ್ಹತ್ತು ಬೋಗಿಗಳ ಆಕಾಶ ನೀಲಿ ಬಣ್ಣದ ಸಣ್ಣ ರೇಲು ಸಣ್ಣ ಸದ್ದು ಮಾಡುತ್ತ ಎದುರಲ್ಲೇ ಹಾಯ್ದು ಹೋಯಿತು. ಬಲಭಾಗದಲ್ಲಿ ಮುಂದೆ ನಡೆಯುತ್ತಲೇ ಪೆಟರ್‌ಸನ್ ರಸ್ತೆ ಕಂಡಿತು. ಇದು ನಾನು ತಿರುಗಾಡಿದ ರಸ್ತೆಯೇ ಹೌದು ಅಂತ ಸ್ವಲ್ಪ ಎಲ್ಲೋ ಗುರುತು ಹತ್ತಿ, ಮನಸ್ಸಿಗೆ ನಿರಾಳತೆ ತುಂಬಿ ಅದರಲ್ಲೇ ತುಸು ದೂರ ಮುಂದುವರೆದಿದ್ದೆ. ಒಮ್ಮೆಲೇ ಎದೆ ದಸಕ್ಕೆಂದಿತು, ಎದುರುಗಡೆಯೇ ಹಂಟ್ಲಿವೇ ಬೋರ್ಡು ಹೊತ್ತು ನಿಂತ ಕೈಮರ ಇತ್ತು.

ಯಾವ ವಿಚಾರಗಳೂ ಮನಸ್ಸು ಹಾಗೂ ಬುದ್ಧಿಯ ಸಂಬಂಧವನ್ನು ಪರಸ್ಪರ ಮಿಳಿತಗೊಳಿಸದೇ ಇದ್ದಾಗ, ಸುಮ್ಮನೇ ಶೂನ್ಯ ದೃಷ್ಟಿ ಬೀರುತ್ತ ಆ ಒಂದು ಉದ್ಯಾನದಲ್ಲಿ ಎಷ್ಟು ಹೊತ್ತು ಕೂತಿದ್ದೆನೋ, ಒಮ್ಮೆಲೇ ಬಡಿದೆಚ್ಚರಿಸಿದ್ದು ಹಿತ್ತಿಲ ಬಾಗಿಲಿನ ಮೆಟ್ಟಿಲಿಗೆ ಹೊಂದಿಕೊಂಡಿದ್ದ ಗ್ರಿಲ್ಲಿಗೆ ಕಟ್ಟಿ ಒಣಹಾಕಿದ್ದ ನನ್ನದೇ ಆ ಗುಲಾಬಿ ಕಾಟನ್ ಸೀರೆ. ಮಗ ಮನೆಗೆ ವಾಪಸಾಗುವ ಪೂರ್ವದಲ್ಲೇ ಅದನ್ನು ತೆಗೆದು ಒಳಗೆ ಎತ್ತಿಡಬೇಕು ಅಂದುಕೊಳ್ಳುತ್ತ ಅವಸರದಲ್ಲೇ ಎದ್ದಿದ್ದೆ. ಎದ್ದವಳೇ ಯಾವ ಮಾಯದಲ್ಲಿ ಈ ತಪ್ಪು ದಾರಿ ತುಳಿದೆ? ಆಗ ಕೂತಲ್ಲಿಂದ ಎದ್ದು ಎಡಕ್ಕೆ ಬಂದೆನೋ? ಬಲಕ್ಕೆ ಬಂದೆನೋ? ಆಗಲೇ ಎಲ್ಲೋ ಒಂದು ಸಣ್ಣ ತಪ್ಪು ಮಾಡಿದ್ದಂತೂ ನಿಜ. ಪುನಃ ಹೋದ ರಸ್ತೆಯಲ್ಲೇ ಹಿಂತಿರುಗಿ ನಡೆದಿದ್ದೆ, ಹೌದು. ಇಲ್ಲ, ಇಲ್ಲ, ಇದೆಲ್ಲ ಬೇರೆಯದೇ ಜಗತ್ತು. ಹದಿನೈದು ದಿನದಿಂದ ನಿರಂತರ ಇದೇ ರಸ್ತೆಯಲ್ಲೇ ಓಡಾಡುತ್ತಿದ್ದೇನೆ,

ನಾನು ಒಮ್ಮೆಯೂ ಈ ಜಾಗವನ್ನು ಕಂಡಿಲ್ಲ. ಇದು ನನಗೆ ತೀರ ಹೊಸದು ಅನ್ನಿಸತೊಡಗಿದ್ದೇ ಅನುಕ್ಷಣ ಗಾಬರಿಗೆ ಬಿದ್ದಿದ್ದೆ.

'ಸುಧೀರ ಮಾವನ ಮಗಳು ಅನ್ವಿತಾ ನಿನಗೆ ಸರೀ ಜೋಡಿ' ಅನ್ನುವ ನನ್ನ ಮಾತಿಗೆ 'ಸ್ವಲ್ಪ ಅರ್ಥ ಮಾಡಿಕೋ ಅಮ್ಮ, ಅಲ್ಲಿಯ ಹುಡುಗಿಯನ್ನು ಮದ್ವೆಯಾದ್ರೆ ಅಲ್ಲೇ ಇರಬೇಕಾಗ್ತದೆ' ಅಂತ ಒಗಟಿನ ಹಾಗೆ ಹೇಳಿದ್ದ ಮಗ, 'ಅಲ್ಲೇನು ಮಾಡುತ್ತೀ ಬಂದು, ಮಾವ ನಿನಗೆ ಮಗಳನ್ನು ಕೊಡುವುದೇ ನೀನು ಇಲ್ಲಿರುತ್ತೀ ಅಂತ' ಅಂದೆ. 'ಹಾಗಾದ್ರೆ ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ ಬಿಡು' ಅಂತ ಒಂದೇ ಮಾತಿಗೆ ಕಡ್ಡಿ ತುಂಡು ಮಾಡಿದಂತೆ ಮಾತು ಮುಗಿಸಿದ್ದ ಮಗ. ಫೋನು ಬರುತ್ತಿತ್ತು ದಿನಾ ಒಂದೇ ಹುಡುಗಿಯದು. ಒಂದಿನ ಕೇಳಿಯೇ ಬಿಟ್ಟೆ. 'ಯಾರು ಅವಳು? ದಿನ ಯಾಕೆ ಮಾತಾಡ್ತಾಳೆ ಅರ್ಧ ಗಂಟೆಗಟ್ಟಲೆ?' 'ಇದನ್ನೇ ಹೇಳಲು ನಿನ್ನನ್ನು ಇಲ್ಲಿ ಕರೆಸಿದ್ದು' ಅಂದ. 'ಅವಳು ಇಲ್ಲೇ ಹುಟ್ಟಿದ್ದು, ಅವಳ ತಂದೆತಾಯಿ ಬಿಹಾರಿ. ಕನ್ನಡ ಬರುವುದಿಲ್ಲ, ನಿಧಾನ ಕಲಿಯುತ್ತಾಳೆ, ಏನೀಗ?' ಅಂದ. 'ಉಪಾಯವಿಲ್ಲ, ಕೊನೆಯ ತೀರ್ಮಾನಕ್ಕೆ ಬಂದಿದ್ದೇನೆ. ಹುಡುಗಿ ಒಳ್ಳೆಯವಳು, ಕೈತುಂಬ ಸಂಪಾದಿಸುತ್ತಾಳೆ. ಒಬ್ಬಳೇ ಮಗಳು ಬೇರೆ, ಯಾವುದಕ್ಕೂ ತೊಂದರೆ ಇಲ್ಲ' ಅಂದ. ನಾನು ಹ್ಞೂ ಹಾಕಲೂ ಇಲ್ಲ ಊಹ್ಞೂ ಹಾಕಲಂತೂ ನನ್ನ ಬಳಿ ಶಕ್ತಿಯೇ ಇರಲಿಲ್ಲ, ಒಂದು ಕನ್ನಡದ ಕಾರ್ಯಕ್ರಮಕ್ಕೆ ಮಗ ಕರೆದೊಯ್ದಿದ್ದ. ಆಗ ಈ ವಿಷಯ ಅಲ್ಲಿನವರೇ ಹೇಳಿದರು. 'ಹೀಗಂತಲ್ಲವೇ?' ನನ್ನ ಮುಖ ಸಣ್ಣಗಾಗಿದ್ದು ನೋಡಿ ಅವರೇ ಮುಂದುವರೆದು 'ಇಲ್ಲಿರೋ ಇಂಡಿಯನ್ನು ನಮ್ಮ ನೆಲದ ಯಾವ ಭಾಷೆಯ ಹುಡುಗಿಯಾದ್ರೂ ನಮ್ಮದೇ ಜಾತೀಯೊಳಗೆ ಮದುವೆಯಾದಂತೆ ಖುಷಿ ಪಡಬೇಕು' ಅಂದರು. 'ನನ್ನ ಕಲೀಗ್ ವರ್ಷಾ, ಈ ವರ್ಷ ಅವಳನ್ನು ಮದುವೆಯಾಗದಿದ್ದರೆ ನಾನು ಮುಂದಿನ ವರ್ಷ ಇಲ್ಲಿಂದ ಗಂಟು ಮೂಟೆ ಕಟ್ಟಬೇಕಾಗ್ತದೆ' ಅಂದ. ನನ್ನ ಜೀವ ನಡುಗಿಹೋಯಿತು. 'ಅವಳನ್ನು ನೋಡು ನೀನು ಒಮ್ಮೆ, ನಿನಗೆ ಇಷ್ಟವಾಗ್ತಾಳೆ, ಇವತ್ತು ಇಂಡಿಯನ್ ಮಾಲ್‌ಗೆ ಅವಳೂ ಬರುತ್ತಿದ್ದಾಳೆ, ಸಂಜೆ ಮನೆಗೆ ಕರೆತರುವೆ' ಅಂದ. ಎಲ್ಲ ಅವನೇ ನಿಶ್ಚಯಿಸಿ ನನಗೆ ಹ್ಞೂ ಗುಟ್ಟುವುದನ್ನಷ್ಟೇ ಉಳಿಸಿದ್ದಾನೆ, ಅಂದಮೇಲೆ ನಾನು ಮಾತಾಡಿ ಪ್ರಯೋಜನವಿಲ್ಲ. ಮಗನ ವಿಚಾರ ಒಪ್ಪಿದರೂ ಒಪ್ಪದೇ ಇದ್ದರೂ ಹೆಚ್ಚಿಗೆ ಬದಲಾವಣೆಯೇನೂ ಆಗದು. ಹೆಜ್ಜೆ ಹೆಜ್ಜೆಗೂ ಕಿವಿಗೆ ಬಂದು ಅಪ್ಪಳಿಸುತ್ತಿದ್ದ ಜೀವಕ್ಕೇ ಅಂಟಿಕೊಂಡ ಈ ಎಲ್ಲ ಸಂಭಾಷಣೆಗಳು ನನ್ನ ರಸ್ತೆಯನ್ನು ಸುಲಭದಲ್ಲಿ ತಪ್ಪಿಸುವಷ್ಟು ಕಠಿಣವಾಗಿವೆ.

'ನಿನ್ನ ಮಗ ಕೈತಪ್ಪಿ ಹೋದ. ಅವನ ಆಸೆ ಬಿಟ್ಟುಬಿಡು' 'ಹೇಳಿದೆ ಆಗ ಪರಿಪರಿಯಾಗಿ, ಬಿಎ, ಬಿಎಡ್ ಮಾಡಿಸು ನಿನ್ನ ನೆರಳಲ್ಲೇ ಇರ್ತಾನೆ ಅಂತ, ನೀನು ಕೇಳಲಿಲ್ಲ, ಅನುಭವಿಸು ಈಗ' 'ನೀನೇ ಒಮ್ಮೆ ಹೋಗಿ ನೋಡಿಕೊಂಡು ಬಾ, ಅಲ್ಲೇನು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೋ'–ಸುಧೀರನ ಸಲಹೆ. ಈ ಮಗ ನನ್ನ ಬಳಿಯೂ ಈಚಿನ ಮೂರ್‍ನಾಲ್ಕು ತಿಂಗಳಲ್ಲಿ ಣೇರಾನೇರ, ಸ್ಪಷ್ಟವಾಗಿ ಮಾತನಾಡುವುದನ್ನು ನಿಲ್ಲಿಸಿದ್ದ. 'ಟಿಕೇಟು ಕಳಿಸು, ನನಗೆ ಇತ್ತೀಚೆಗೆ ಯಾಕೋ ಕೆಟ್ಟ ಕನಸು ಬೀಳುತ್ತಿದೆ, ನಿನ್ನ ಅಪ್ಪ ಕನಸಿನಲ್ಲಿ ಬಂದು ರಾಶಿ ಬೇಸರ ಮಾಡ್ತಾರೆ, ನಿನ್ನನ್ನು ಈಗಲೇ ನೋಡಬೇಕು ನಾನು' ಅಂತೆಲ್ಲ ದಿನವೂ ನಿರಂತರ ಹಟ ಹಿಡಿದೆ, ಮಗ ನನ್ನ ಸರ್ವಸ್ವವೇ ಆಗಿರುವಾಗ ಅವನನ್ನು ಬಿಟ್ಟು ಬೇರೆ ಯಾವ ಜಗತ್ತಿದೆ? 'ಎರಡು ತಿಂಗಳು ಬಿಟ್ಟು ವಾಪಸ್ಸು ಕೂಡ ಮಾಡಿಸಿದ್ದೇನೆ. ನಿನಗೆ ಇಲ್ಲಿಯ ಹವೆ ಸರಿ ಬರುತ್ತೋ ಇಲ್ಲವೋ' ಅಂತ ಅನುಮಾನದಿಂದಲೇ ಕೊನೆಗೂ ಕಳಿಸಿದ ಟಿಕೇಟು ಅದು. 'ಒಮ್ಮೆ ಮಗನನ್ನು ಸೇರಿದರೆ ಅವನ ಮನಸ್ಸು ಬದಲಿಸುವುದು ಎಷ್ಟೊತ್ತು?' ಎಂಥ ಭ್ರಮೆ ಅದು? 'ಇಲ್ಲೇ ಇರಬೇಕೆಂಬ ಹಟಕ್ಕಾಗಿ ನಿನ್ನನ್ನೇ ನೀನು ಮಾರಿಕೊಳ್ಳುವುದು ನನಗ್ಯಾಕೋ ಅತೀ ಅನ್ನಿಸುತ್ತಿದೆ' ಅಂತ ಗಂಟಲಿಗೆ ಬಂದದ್ದನ್ನು ನಾಲಿಗೆಗೆ ಬರದಂತೆ ಒತ್ತಾಯಪೂರ್ವಕ ತಡೆದೆ. 'ಏನು ಅತಿ? ತುಂಬ ಚೆನ್ನಾಗಿ ಬದುಕಬೇಕು ಅಂದರೆ ಇದೊಂದೇ ದಾರಿ' ಅಂದೇ ಬಿಡುತ್ತಿದ್ದ. ತುಂಬ ಚೆನ್ನಾಗಿರುವ ಬದುಕು ಎಂದರೇನು? ಇದು ನನಗೂ ನನ್ನ ಮಗನಿಗೂ ಬೇರೆ ಬೇರೆ ರೀತಿಯಲ್ಲಿ ಕಾಣುತ್ತಿದೆ.

ತಕ್ಷಣ ನನ್ನ ಯೋಚನೆ ನಾನು ನಿಂತ ರಸ್ತೆಗೆ ಇಳಿಯಿತು. ನನಗೆ ಕಂಡದ್ದೇ ನಾ ಅಂದುಕೊಂಡಿದ್ದೇ ಸರಿ ದಾರಿಯೆಂದು ನಂಬಿದ್ದೇನಲ್ಲ. ಈಗ ನಾನು ನಡೆಯುತ್ತಿರುವುದೂ ಹಾಗೇ ಅಲ್ಲವೆ? ಏನೂ ತೋಚದಾಗ ಒಂದು ದಾರಿ ಹಿಡಿಯಲೇಬೇಕಲ್ಲವೆ? ಎಲ್ಲ ಪ್ರಯತ್ನವನ್ನೂ ಬಿಟ್ಟು ಒಂದೆಡೆ ನಿಂತಿರಲು ಹೇಗೆ ಸಾಧ್ಯ? 'ಮುಂದೇನಾದರೂ ತೊಂದರೆಯಾದರೆ?' ಅಥವಾ ಮಗನ ಮನೆಯ ಮಿಲ್ಟನ್ ರಸ್ತೆಯಿಂದ ಇನ್ನೂ ದೂರ ನಡೆದುಹೋಗಿಬಿಟ್ಟರೆ, ಯಾರೂ ಊಹಿಸದೆ ಇದ್ದಷ್ಟು ದೂರ? ಮನೆ ಹುಡುಕುವ ಛಲವೇ ದೊಡ್ಡದು. 'ಈಚೆಯಿಂದ ನಡೆದರೆ ತೊಂದರೆ ಬಾರದು ಅಂತ ಏನು ಗ್ಯಾರಂಟೀ?' 'ನನಗೇ ಸ್ಪಷ್ಟವಿಲ್ಲದಾಗ ನಾನು ಹೇಗೆ ಗ್ಯಾರಂಟಿ ಕೊಡಲಿ?' ಸರಿ ದಾರಿ ಯಾವುದೆಂದೇ ನನಗೂ ತೋರುತ್ತಿಲ್ಲ, ಯಾಕೋ ಇಲ್ಲಿಗೆ ಬಂದ ನಂತರ ಮಗನ, ನನ್ನ ಭಾಷೆಯೇ ಬದಲಾಗಿದೆ ಅನ್ನಿಸಿತು. ನನಗೇ ಸರಿಯಾಗಿ ಗೊತ್ತಿಲ್ಲದ್ದನ್ನು ಅದು ಹೇಗಾದರೂ ಮಗನಿಗೆ ತಿಳಿ ಹೇಳಲಿ? 'ಎಲ್ಲರೂ ತಮ್ಮ ಮಕ್ಕಳನ್ನ ಸಾಫ್ಟವೇರ್ ಎಂಜಿನಿಯರಿಂಗ್ ಕಲಿಸುವುದೇ ಈ ದೇಶಕ್ಕೆ ಕಳಿಸಲಿಕ್ಕೆ' 'ತಮ್ಮ ದೇಶಕ್ಕೆ ಲಾಭ ಮಾಡಿಕೊಡೋ ಎಂಜಿನಿಯರಿಗಷ್ಟೇ ಮಣೆ ಹಾಕ್ತದಂತೆ ಈ ನೆಲ' 'ಅಲ್ಲೇ ಯಾವುದಾದರೂ ಆಫ್ರಿಕನ್ ಚೈನೀಸ್ ಹುಡುಗೀನ ಕಟ್ಟಿಕೊಳ್ತಾನೆ ನೋಡು' 'ಶಾಸ್ತ್ರ ಸಂಪ್ರದಾಯ ನಂಬಿಕೆ ಅಂತೆಲ್ಲ ನಂಬಿ ಕೂತವರಿಗೆ ಈ ದೇಶ ಒಗ್ಗುವುದಿಲ್ಲ' 'ನಮ್ಮದನ್ನು ಅವರ ಮೇಲೆ ಹೇರಲು ಹೋಗಿ ಪಾಪ ಮಕ್ಕಳನ್ನು ಕನ್ಫ್ಯೂಸ್ ಮಾಡಿ ಇಡುತ್ತೇವೆ' ಹಲವರ ಮಾತುಗಳು ಮಾರ್ದನಿಸಿದವು.ಅವೇ ಹಸಿರು ಬಣ್ಣದ ಗಿಡಮರಗಳಾದರೂ ಅದೇ ಕಂದು ಮಣ್ಣು ಕಪ್ಪು ಬಿಳಿ ಹರಳುಕಲ್ಲು ಎತ್ತರೆತ್ತರ ದೀಪದ ಕಂಬಗಳಲ್ಲಿ ಅನನ್ಯ ಸಾಮ್ಯತೆಯಿದ್ದರೂ ಇಲ್ಲಿಯ ಯಾವುದೂ ನನ್ನೊಂದಿಗೆ ಮಾತಿಗೆ ನಿಲ್ಲುತ್ತಿಲ್ಲ ಅನ್ನಿಸಿತು.

ಪಕ್ಕದ ರಸ್ತೆಗೆ ತಿರುಗಿಕೊಳ್ಳುವುದೋ ಬೇಡವೋ ಎಂದು ಮೂರನೇ ಬಾರಿಯೂ ಕನ್ಫ್ಯೂಸ್ ಆಯಿತು. ಅಪರಿಚಿತ ಕಮಾನುಗಳು, ಎಂದೂ ಕಾಣದ ತಿರುವುಗಳು, ಎಲ್ಲಿಂದ ಎಲ್ಲಿಗೆ ಒಯ್ದು ತಲುಪಿಸುತ್ತವೆ ಎಂದೇ ಗೊತ್ತಾಗದ ಬೀದಿಗಳು, ಎಲ್ಲಿ ತಿರುವಿಕೊಂಡರೆ ಯಾವ ತಿರುವು ಎದುರಾಗುತ್ತವೆ ಎಂದೇ ಅರಿವಿಗೆ ಬಾರದ ಲೇನ್‌ಗಳು. ಒಂದೇ ಸಮ ತಲೆ ಸುತ್ತತೊಡಗಿತ್ತು. ಮಗ ಮನೆಯಲ್ಲಿದ್ದರೆ ಗಾಬರಿಗೆ ಬಿದ್ದು ಇಷ್ಟೊತ್ತು ಹುಡುಕಿಕೊಂಡು ಬರುತ್ತಿದ್ದ. ಆಫೀಸು ಬಿಟ್ಟವನೇ ಇವತ್ತು 'ಇಂಡಿಯನ್ ಮಾಲ್‌ಗೆ ಹೋಗಿ ಫ್ರಿಡ್ಜ್‌ನಲ್ಲಿ ಖಾಲಿಯಾದ ತರಕಾರಿ ತರುವೆ ಸ್ವಲ್ಪ ತಡವಾಗಬಹುದು' ಅಂತ ಹೇಳಿಹೋಗಿದ್ದಾನೆ. ಇಲ್ಲೇ ಎಲ್ಲೋ ಇದೆ ನಮ್ಮ ಮನೆ, ಆದರೆ ಹೇಗೆ ಹೋಗೋದು ಅಂತ ಗೊತ್ತಾಗುತ್ತಿಲ್ಲ. ಅಲ್ಲೆ ಪಕ್ಕ ಯಾರೋ ನಿಂತು ತಮ್ಮ ಕಾರು ತೊಳೆಯುತ್ತಿದ್ದರು. ಅರ್ಧ ನಿಮಿಷ ಅವರನ್ನೇ ನೋಡುತ್ತ ನಿಂತೆ. ಮೊಬೈಲಿನಲ್ಲಿ ಪಾಪ್ ಮ್ಯೂಸಿಕ್ ಹಾಕಿಕೊಂಡಿದ್ದ ಕಾರಣ ಆತ ನನ್ನತ್ತ ತಿರುಗಲೇ ಇಲ್ಲ. 'ಸುಮ್ಮನೇ ಯಾರದಾದರೂ ಮನೆಯ ಹೂವಿನ ಗಿಡ ಸುಂದರವಾಗಿದೆ ಅಂತ ನೋಡುತ್ತ ನಿಂತು ಬಿಡಬೇಡ, ಎಲ್ಲರ ಮನೆ ಎದಿರು ಸಿಸಿ ಕ್ಯಮರಾ ಇರ್ತದೆ. ಅವರು ಒಳಗಿನಿಂದಲೇ ನೇರ ಪೋಲೀಸರಿಗೆ ಫೋನು ಮಾಡ್ತಾರೆ' ಅಂತ ಮಗ ಇಲ್ಲಿಯ ಶಿಸ್ತಿನ ಬಗ್ಗೆ ಹೇಳಿ ಹೆದರಿಸಿದ್ದ. ಹಾಗಾಗಿ ಮೌನವೇ ಮೈವೆತ್ತು ನಡೆಯಬೇಕಾಯಿತು. ಐದೇ ನಿಮಿಷದಷ್ಟು ನಡೆದದ್ದು.. ಪಕ್ಕದಲ್ಲಿ ಹಂಟ್ಲಿವೇ ಅಂತ ಬೋರ್ಡು ಮತ್ತೆ ಕಂಡು ನಿಜಕ್ಕೂ ತಲ್ಲಣಿಸಿದೆ.

ಎತ್ತಲಿಂದ ಎತ್ತ ತಿರುಗಿ ಬಂದರೂ ಮತ್ತೆ ಮತ್ತೆ ಕಾಲಿಗೆ ತೊಡರುವ ಈ ಹಂಟ್ಲಿವೇ ರಸ್ತೆಗೆ ಹೆಬ್ಬಾವಿನ ಆಕಾರವಿರಲೇಬೇಕು, ಇಲ್ಲದಿದ್ದರೆ ಒಂದೇ ಏರಿಯಾದಲ್ಲಿ ಇಷ್ಟೊಂದು ಹಂಟ್ಲಿವೇಗಳಿರಲು ಹೇಗೆ ಸಾಧ್ಯ? ತಾಯ್ನೆಲದಿಂದ ಹದಿನಾಲ್ಕು ಸಾವಿರ ಕಿ.ಮೀ ದೂರ ಬಂದು ಇಲ್ಲಿ ಹೀಗೆ ವಿಚಿತ್ರ ರೀತಿಯಲ್ಲಿ ನಿರ್ಜನ ಬೀದಿಯೊಂದು ನನ್ನನ್ನು ಬೇಟೆಯಾಡುತ್ತಲಿದೆ ಅಂದರೆ ಈ ನೆಲದ ಮಹಿಮೆ ಎಂಥದ್ದು? ನನ್ನ ಮಗನನ್ನೂ ಈ ರಸ್ತೆಗಳು ಹೀಗೆಯೇ ಬೇಟೆಯಾಡಿ ಹಿಡಿದಿವೆ ಅನ್ನಿಸಿತು. ಅಥವಾ ಹಂಟ್ಲಿವೇ ಬೋರ್ಡು ಹೊತ್ತು ನಿಂತ ಆ ಕಂಬವೇ ಬೀಸಿ ಬರುವ ತಂಗಾಳಿಗೆ ಬೇಕಾಬಿಟ್ಟಿ ತಿರುಗಿ ನನ್ನ ದಾರಿ ತಪ್ಪಿಸುತ್ತಿದೆಯೇ?

ನೋಡುವಾ ಅಂತ ಈಚೆಯಿಂದ ನಡೆದು ಸ್ವಲ್ಪ ಮುಂದಕ್ಕೆ ಹೋಗಿ ಎಡಕ್ಕೆ ತಿರುಗಿಕೊಂಡು ಗ್ಲೆನ್ ಅಯರ್ ಎಂಬ ರಸ್ತೆಯ ಮೂಲಕ ಒಮ್ಮೆ ಹಿಂತಿರುಗಿ ನಿಂತು ನೋಡಿದೆ. ಹಿಂಭಾಗದಲ್ಲಿ ಹಂಟ್ಲಿವೇ ಬೋರ್ಡು ಪುನಃ ರಾಜಾಜಿಸುತ್ತ ನಿಂತಿತ್ತು. ಏನಿದು ವಿಚಿತ್ರ? ಅಥವಾ ನನಗೇ ಈ ತರಹ ಭ್ರಮೆಯಾಗುತ್ತಿದೆಯೇ? ಬೇರೆ ಯಾವುದನ್ನೋ ಹಂಟ್ಲೀ ವೇ ಅಂತ ತಪ್ಪಿ ಓದಿಕೊಳ್ಳುತ್ತಿದ್ದೇನೆಯೇ? ಹಂಟ್ಲೀ ವೇಯ ವಿರುದ್ಧ ದಿಕ್ಕಿನಲ್ಲಿ ನಮ್ಮ ಮಿಲ್ಟನ್ ರೋಡು ಇದ್ದದ್ದು ನೆನಪಾಗಿ ಹಾಗೇ ಅದರ ವಿರುದ್ಧ ದಿಕ್ಕಿನಲ್ಲಿ ನಡೆಯತೊಡಗಿದೆ. ಅಲ್ಲಿಯೂ ಎದುರು ದೂರದಲ್ಲಿ ಒಂದು ಬೋರ್ಡು ತನ್ನ ಹಳದಿ ಕಪ್ಪು ಬಣ್ಣದಲ್ಲಿ ಸಂಜೆಯ ಎಲೆ ಬಿಸಿಲಿಗೆ ಮಿರಮಿರ ಮಿರುಗುತ್ತಿತ್ತು. ಅದು ದೂರದಿಂದ ನನ್ನ ಕಣ್ಣಿಗೆ ಮಿಲ್ಟನ್ ವೇ ಅಂತಲೇ ಬರೆದುಕೊಂಡಂತೆ ಕಾಣುತ್ತ 'ಅಂತೂ ಸಿಕ್ಕಿತು'! ಎಂಬ ಸಮಾಧಾನದಲ್ಲಿ ಉತ್ಸಾಹದ ಹೆಜ್ಜೆ ಹಾಕಿದೆ. ಮುಂದೆ ಮುಂದೆ ಬಂದಂತೆ ಅರೆ! ಮಿಲ್ಟನ್‌ವೆ ಅಕ್ಷರಗಳು ಇದ್ದಕ್ಕಿದ್ದಂತೆ ಹಂಟ್ಲಿವೇ ಆಗಿ ಮಾರ್ಪಡುತ್ತ ಧುತ್ತನೆ ಪ್ರತ್ಯಕ್ಷವಾಗಿ ನನ್ನನ್ನು ಹೆದರಿಸಿತು. ಅಲ್ಲೇ ಬದಿಯ ಹಾದಿ ಬೆಂಚಿನ ಮೇಲೆ ಕುಸಿದು ಕುಳಿತೆ. ಮುಂದೆ ನಡೆಯಲಾರೆ ಅನ್ನಿಸಿತು, ಒಂದೈದು ನಿಮಿಷ ಅಲ್ಲೇ ಕೂತಿದ್ದೆನೇನೊ.

ಎದುರಿನ ಪರಿಸರ ಕಣ್ಣಲ್ಲಿ ಸ್ಪಷ್ಟಗೊಳ್ಳುತ್ತಲಿತ್ತು. ಸುತ್ತ ಬೇಲಿಗಳೇ ಇಲ್ಲದ ಹಸಿರು ಲಾನ್‌ಗಳೇ ಸುತ್ತುವರೆದ ಒಂದೇ ತರಹದ ಮನೆಗಳು. ಅಲ್ಲೇ ಎದುರಲ್ಲಿ ವಿಶಾಲ ಹಸಿರು ಲಾನ್‌ಗಳಾಚೆಯ ಒಂದು ಮನೆಯ ಹೊರಭಾಗದ ಗ್ರಿಲ್ಲಿನ ಮೇಲೆ ನನ್ನದೇ ಗುಲಾಬಿ ಬಣ್ಣದ ಸೀರೆ ಸಂಜೆಯ ಸಣ್ಣ ತಂಪು ಗಾಳಿಗೆ ಫಡಫಡಿಸುತ್ತಿದೆ. ಜೀವ ಬಂದ ಹಾಗಾಯಿತು. ನಿಧಾನ ಎದ್ದು ಆ ಎರಡು

(೧೫ನೇ ಪುಟಕ್ಕೆ

# ಸಾಹಿತ್ಯ-ಕಾವ್ಯ-ನಾಟಕ-ರಾಜಕಾರಣ : ಎರಡು ಟಿಪ್ಪಣಿಗಳು

## ರಾಜಕಾರಣದಲ್ಲಿ ಕಳೆದುಹೋದ ಕವಿ ಲಿಂಗಪ್ಪ



**ಪು**ರಾತನ ಸಮಾಜವಾದದ ಪಳೆಯುಳಿಕೆಯಂತಿರುವ ನಮ್ಮ ಕೋಣಂದೂರು ಲಿಂಗಪ್ಪನವರು ಎರಡು ತಿಂಗಳಿಗೊಮ್ಮೆಯೋ ಅಥವಾ ತಿಂಗಳಿಗೊಮ್ಮೆಯೋ ನಮ್ಮ ಮನೆಗೆ ದಾಳಿ ಇಡುತ್ತಿದ್ದವರು ಇತ್ತೀಚೆಗೆ ವಾರದಲ್ಲಿ ಮೂರು ದಿನ ಸತತವಾಗಿ ದಾಳಿ ಇಟ್ಟರು. ನಾನೂ ಈ ದಾಳಿಯನ್ನು ಸಂತೋಷದಿಂದಲೇ ಸ್ವಾಗತಿಸಲು ಕಾರಣವೂ ಇತ್ತು. ನನ್ನ ಜಿಹ್ವಾ ದೌರ್ಬಲ್ಯವೊಂದನ್ನು ಅವರು ಪತ್ತೆ ಹಚ್ಚಿದ್ದರು. ಅವರು ಬರುವಾಗಲೆಲ್ಲ ಒಳ್ಳೆಯ ಜಿಲೇಬಿ ಕಟ್ಟಿಸಿಕೊಂಡು ಬರತೊಡಗದ್ದರು!

ಲಿಂಗಪ್ಪನವರು ಬಂದಾಗಲೆಲ್ಲ ಹಳೇ ಸಮಾಜವಾದಿ ದಿನಗಳ ನೆನಪುಗಳ ಸುಗ್ಗಿಯೋ ಸುಗ್ಗಿ. ತಾವು ಗೋಪಾಲಗೌಡರ ಮದುವೆಗೆ ಮಧ್ಯವರ್ತಿಯಾಗಿದ್ದರ ಸಂಭ್ರಮ, ಡಾಕ್ಟರ್ ಸಾಹೇಬರು (ಲೋಹಿಯಾ) 'ಶುಭ್ ಹೋ!' ಎಂದು ಪತ್ರ ಬರೆದು 'ಅನುಮತಿ' ನೀಡದವರೆಗೆ ತಮ್ಮ ಮದುವೆಯ ಬಗ್ಗೆ ತೀರ್ಮಾನ ಹೇಳದ ಗೌಡರ ಗುರು ನಿಷ್ಠೆ, ಡಾಕ್ಟರ್‌ಸಾಹೇಬರು ತಮ್ಮ ಕಾವ್ಯ ಕೇಳಿದ ದಿನದಿಂದ ತಮ್ಮನ್ನು 'ಕವಿ ಮಹಾರಾಜ್' ಎಂದೇ ಸಂಬೋಧಿಸುತ್ತಿದ್ದುದ ಬಗ್ಗೆ, ಎಲ್ಲ ಘಟಾನುಘಟಿಗಳು ಹಿಂಜರಿದು ಗೌಡರು ಬಿಟ್ಟುಹೋದ ತೀರ್ಥಹಳ್ಳಿ ಕ್ಷೇತ್ರದ ಸ್ಪರ್ಧೆಯನ್ನು ತಮ್ಮ ಕೊರಳಿಗೆ ಸುತ್ತಿ ಗೆಲ್ಲಿಸಿದ ಬಗ್ಗೆ, (ಹಾಗೇ ಮುಂದಿನ ಚುನಾವಣೆಯಲ್ಲಿ ಎಲ್ಲರೂ ಕೈ ಬಿಟ್ಟ ಬಗ್ಗೆಯೂ) ನಮ್ಮ ಕವಿ ತುಂಬ ಕಥೆಗಳನ್ನು ಹೇಳಿ ನಮ್ಮ ಮನಸ್ಸುಗಳನ್ನು ಆಹ್ಲಾದಗೊಳಿಸುತ್ತಿದ್ದ ಲಿಂಗಪ್ಪನವರಿಗೆ ಈಚಿನ ದಿನಗಳಲ್ಲಿ ನಮ್ಮ ಮನೆಯಲ್ಲಿ ಕಾವ್ಯ ಕೇಳುವ ಎರಡು ಜೊತೆ ಕಿವಿಗಳಿವೆ ಎಂದು ಗೊತ್ತಾಗಿಯೇನೋ ಅವರ ಕಾವ್ಯೋನ್ಮಾದ ಮರುಕಳಿಸಿದಂತಾಗಿ, ಬಗಲಲ್ಲಿ ತಮ್ಮ ಹಳೆಯ ಕವನ ಸಂಕಲನವೊಂದನ್ನೂ ಇಟ್ಟುಕೊಂಡು ಬರಲಾರಂಭಿಸಿದ್ದರು.

ಗಾಂಧಿಯ ಬಗ್ಗೆ, ಲೋಹಿಯಾ ಬಗ್ಗೆ ಗೋಪಾಗೌಡರ ಬಗ್ಗೆ ಅವರು ಬರೆದ ಕವನಗಳನ್ನು ಕೇಳಿದ್ದ ನನಗೆ ಅವರ ಕಾವ್ಯ ಖಯಾಲಿಯ ಬಗ್ಗೆ ಸುಳಿವೇನೋ ಇತ್ತು. ಅವರು ಶಾಸಕರಾಗಿದ್ದಾಗ ವಿಧಾನಸಭೆಯಲ್ಲಿಯೂ ಅವರ (ಇತರ ಕವಿಗಳ) ಕಾವ್ಯಧಾರೆ ಹರಿಸಿದ್ದನ್ನೂ ನಾನು ಬಲ್ಲವನಾಗಿದ್ದೆ. ನನ್ನ ಅವರ ಪುರಾತನ ಸ್ನೇಹಕ್ಕೂ ಅದೂ ಒಂದು ಕಾರಣವಾಗಿತ್ತು. ಆದರೆ ಮೊನ್ನೆ ಅವರು ತಮ್ಮ ಕಾವ್ಯ ಪ್ರತಿಭೆಯನ್ನು ನಮಗೆ ಸಾಬೀತುಪಡಿಸಲೋ ಎಂಬಂತೆ ನಮ್ಮ ಮನೆಗೆ ಲಗ್ಗೆ ಇಟ್ಟು ನನ್ನ ಪತ್ನಿಗೆ 'ಸವಿತಮ್ಮ ಕವಿಗೋಷ್ಠಿ ಮಾಡೋಣ ಬನ್ನಿ!' ಎಂದು ಕರೆದಾಗ ನನ್ನ ಸ್ಥಿತಿಯನ್ನು ನೋಡಿ ಮರುಕಪಟ್ಟವರಂತೆ ಲಿಂಗಪ್ಪ ಅಭಯ ನೀಡುವ ಭಂಗಿಯಲ್ಲಿ ತಮ್ಮ ಇನ್ನೊಂದು ಬಗಲಲ್ಲಿದ್ದ ಜಿಲೇಬಿ ಪೊಟ್ಟಣವನ್ನು ನನ್ನ ಮುಂದೆ ತೆಗೆದಿಟ್ಟು ನನ್ನ ಹೆಂಡತಿಗೆ 'ಬನ್ನೀಮ್ಮಾ ಇವರಿಗೆ ಜಿಲೇಬಿ ಕೊಡಿ' ಎನ್ನುತ್ತಾ ತಮ್ಮ ಕವನ ವಾಚನವನ್ನು ಶುರು ಮಾಡಿಯೇಬಿಟ್ಟರು. ಅದು ಜಂಬೂಸವಾರಿ ವಿರುದ್ಧ ಸಮಾಜವಾದಿಗಳು ನಡೆಸಿದ್ದ ಪ್ರತಿಭಟನೆಯ ಸಂದರ್ಭದಲ್ಲಿ ಡಾಕ್ಟರ್ ಸಾಹೇಬರ ಸಮ್ಮುಖದ ಸಭೆಯಲ್ಲಿ ಓದಿದ್ದ 'ಜಂಬು-ಬೊಂಬು ಸವಾರಿ' ಎಂಬ ಬೊಂಬಾಟ್ ಕವನವಾಗಿತ್ತು.

ಅವರು ಆ ದಿನಗಳ ಉತ್ಸಾಹದಲ್ಲೇ ಅಂಗ ಭಂಗಿಗಳ ಸಹಿತ ವಾಚಿಸುತ್ತಾ *'ಅಟ್ಟಹಾಸದ ಬೆಟ್ಟದ ಮೇಲೆ/ ಧಗಧಗ ಧಗಿಸುತಲಿಹುದೋ ರಕ್ತ ಜ್ಯೋತಿ/ ಮಹಿಷಾಸುರ ಬಂದನೆ ಮತ್ತೊಮ್ಮೆ ಮೈದುಂಬಿ/ರಕ್ತಬೀಜನ ವರ ಕೂಡಿ'* ಎಂಬ ಸಾಲುಗಳಿಗೆ ಬರುವ ಹೊತ್ತಿಗೆ ಕವಿ ತುಂಬುವ ಲಯಬದ್ಧ ಶಬ್ದ ಜೋಡಣೆಯ ಮೋಡಿಗೆ ಮರುಳಾಗಿದ್ದ ನಾನು ಅದರಿಂದೀಚೆಗೆ ಬರುವ ಪ್ರಯತ್ನವಾಗಿ 'ಲಿಂಗಪ್ಪನವರೇ ಈ ಉತ್ಪ್ರೇಕ್ಷೆಯನ್ನು ನೀವು ಯಾವುದರಿಂದ ಕಡ ಪಡೆದಿದ್ದರೋ ಆ ಕುವೆಂಪು ಅವರ 'ಕಲ್ಕಿ ಪದ್ಯದಲ್ಲಿ ಮಾತ್ರ ಅದು ಸಹಜವೆನ್ನಿಸುತ್ತದೆ' ಎಣಂದು ಹೇಳುತ್ತಿರುವುದನ್ನೇ ಲೆಕ್ಕಿಸದೆ ಮುಂದುವರೆದು *'ಅದೋ ಬೆಳಗುತ್ತಿದೆ ಆಹುತಿ ಜ್ಯೋತಿ/ ಸ್ವಿಚ್ಚನು ಒತ್ತಿರಿ ಆಗಲಿ ರಾತ್ರಿ ಸೂರ್ಯೋದಯ/ಆ ಬಳಿಕವೇ ಖಾತ್ರಿ/ ಮಾನವ ವರ್ಗದ ಉತ್ಕ್ರಾಂತಿ'* ಎಂದು ಮುಗಿಸಿಯೇ ಬಿಟ್ಟರು.

ನಮ್ಮ ಸೌಭಾಗ್ಯವೆಂದರೆ ಈ ಕವಿಗೆ ಇನ್ನೊಂದು ಕವನ ಓದಲೇ?'ಎಂದು ಕೇಳಿ ವಾಚನವನ್ನು ಮುಂದುವರೆಸುವ ಸೌಜನ್ಯವಿದೆ. ಮುಂದಿನ ಕವನಕ್ಕೆ ಹೋಗುವ ಮುನ್ನ ಲಿಂಗಪ್ಪನವರು ಆ ದಿನಗಳ ಒಂದು ಸಂಜೆಯ ಕೂಟದಲ್ಲಿ ತರಾಸು, ಮಹಾರಾಜರ ಮೇಲಿನ ಅಭಿಮಾನದಿಂದ ಗೋಪಾಲಗೌಡರ ಬಗ್ಗೆ ಆಡಬಾರದ ಮಾತೊಂದನ್ನು ಆಡಿದಾಗ ಪಕ್ಕದಲ್ಲೇ ಕೂತಿದ್ದ ಪಿ. ಕಾಳಿಂಗರಾಯರು ತರಾಸುಗೆ ಮಾಡಬಾರದ್ದನ್ನು ಮಾಡಿದ ಉಪಕಥೆಯನ್ನು ಹೇಳದಿರಲಿಲ್ಲ. ನಂತರ ಅವರು ಸಮಾಜವಾದಿಗಳ ರಸಿಕತೆಯನ್ನು ಮೆರೆವ ಶೃಂಗಾರ ರಸದ 'ಸಹ್ಯಾದ್ರಿ ಸುಂದರಿ' ಎಂಬ ಪದ್ಯವನ್ನೂ, ನಂತರ ಅದಕ್ಕೆ ಇಬ್ಬರು ಶ್ರೋತೃಗಳಿಂದ ಸಿಕ್ಕ ಪ್ರೋತ್ಸಾಹದಿಂದ ೧೯೬೫ರ ಪಾಕಿಸ್ತಾನದ ಯುದ್ಧ ಸಂದರ್ಭದಲ್ಲಿ ಬರೆದ ವೀರ ರಸ ತುಂಬಿದ ಯೋಧ ಗೀತೆ 'ವೀರಭದ್ರರು' ಎಂಬ ಕವನವನ್ನೂ ಅವುಗಳ ಲಯಗಳನ್ನನುಸರಿಸಿ ಶಬ್ದನರ್ತನಗೈಯುತ್ತಾ ಓದಿದರು.

ಅವರ ಕವನಗಳಲ್ಲಿ ಶಬ್ದಾಡಂಬರದ ಮಧ್ಯೆಯೂ ಒಂದು ಅನುಭವ-ಸೌಂದರ್ಯವನ್ನು ಮರುಸೃಷ್ಟಿಸುವ ಪ್ರಾಮಾಣಿಕ ಪ್ರಯತ್ನವಿತ್ತು, ಒಂದು ವಿಚ 'ಲಿಂಗಪ್ಪನವರೇ, ನೀವು ಕಾವ್ಯ ಶಕ್ತಿ ಇದ್ದ ಕವಿ. ಯಾರೂ ಅದನ್ನು ನಿಮಗೆ ಹೇಳಲಿಲ್ಲವೆ? ನಿಮಗೆ ಬಹು ಆಪ್ತರಾಗಿದ್ದ ಅನಂತಮೂರ್ತಿಯವರು ಕೂಡ?' ಎಂದು ಕೇಳಿದೆ. ಅವರು ಮುಖ ಹುಳ್ಳಗೆ ಮಾಡಿಕೊಂಡುನಮ್ಮನ್ನೆಲ್ಲ ಯಾರು ಕೇಳೋರಿದ್ರಿ ಆಗ?' ಎಂಬ ಸಾಮಾಜಿಕ ನ್ಯಾಯದ ವಾಸನೆಯೊಂದಿಗೆ ನಿಟ್ಟಿಸಿರುಬಿಡುತ್ತಾ, 'ಆದರೆ ಗೌಡರಿಗೆ ಗೊತ್ತಿತ್ತು ನನ್ನಲ್ಲಿ ಕವಿ ಇದ್ದಾನೆ ಅಂತ. ನೋಡಿ, ನಾನು ಈ ಪದ್ಯವನ್ನು ಅವರ ಮುಂದೆ ಓದಿದಾಗ ತುಂಬ ಖುಷಿಯಾಗಿ 'ಲಿಂಗಪ್ಪ ನೀನು ಕವಿತ್ವ ಮುಂದುವರೆಸಬೇಕು' ಎಂದು ಪ್ರೋತ್ಸಾಹಿಸಿದರು ಎನ್ನುತ್ತಾ ಆ 'ಸೂರ್ಯಗೆ ಹತ್ತಿದೆ ಬೆಂಕಿ' ಕವನದ ವಾಚನವನ್ನು ಶುರು ಮಾಡಿಯೇ ಬಿಟ್ಟರು: *ಸೂರ್ಯಗೆ ಹತ್ತಿದೆ ಬೆಂಕಿ/ ಸಾಗರ ಎದ್ದಿದೆ ಆರಿಸಲುಕ್ಕಿ/ ಅಲೆಗಳ ಮೇಲೆ ಅಲೆಗಳು ಸೊಕ್ಕಿ/ಕಿರಣದ ಧೂಮಕೆ ನೊರೆಗಳು ನುಗ್ಗಿ / ಆರಿಸಲೆಳಸಿವೆ ಕಾಣಲು ಸುಗ್ಗಿ..'*

ನಿಜ, ಲಿಂಗಪ್ಪನವರ ಕಾವ್ಯಕ್ಕೆ ಚಿಂತನೆಯ ಸೂಕ್ಷ್ಮತೆ ಇಲ್ಲ. ಆದರೆ ಕೇಳುತ್ತ ಒಂದು ರಮ್ಯ ಲೋಕಕ್ಕೆ ಕರೆದೊಯ್ಯುವ ಒಂದು ನಾದವಿದೆ, ಅಲ್ಲಲ್ಲಿ ಸ್ವಲ್ಪ ಧಡಬಡಿಕೆ ಇದ್ದರೂ. ಆದರೆ ಅವರ ಕಾಲದಲ್ಲಿ ಹೆಸರು ಮಾಡಿದ ಅನೇಕ ಪಡಪೋಷಿ ಕವಿಗಳಿಗಿಂತ ಇವರು ಉತ್ತಮ ಕವಿಯೇ. ನನ್ನ ಪತ್ನಿ 'ನಿಮ್ಮ ಕವನ ಸಂಕಲನ ಮೊದಲೇ ನನಗೆ ಸಿಕ್ಕಿದ್ದರೆ, ನಾನು ಈ ಹಿಂದೆ ಕರ್ನಾಟಕ ಸರ್ಕಾರಕ್ಕಾಗಿ ಸಂಪಾದಿಸಿದ 'ಸುವರ್ಣ ಕಾವ್ಯ'ದಲ್ಲಿ ಖಂಡಿತ ಸೇರಿಸುತ್ತಿದ್ದೆ' ಎಂದು ಅಲವತ್ತುಕೊಂಡಾಗ ಖುಷಿಯಾದ ಲಿಂಗಪ್ಪನವರು 'ದೀಪ ಹಚ್ಚಿರೋ' ಎಂಬ ತಮ್ಮ ಏಕೈಕ ಕವನ ಸಂಕಲನದ ಇದ್ದ ಒಂದೇ ಪ್ರತಿಯನ್ನು ನಮಗೆ ಕೊಡಲಾಗದೆ ಮಾರನೆಯ ದಿವಸ ಅದರ ನೆರಳಚ್ಚಿನ ಪ್ರತಿಯನ್ನು ತಂದುಕೊಟ್ಟರು. ಆದರೆ ಈ ಬಾರಿ, ನನ್ನ ಆರೋಗ್ಯವನ್ನು ಲೆಕ್ಕಿಸಿದವರಂತೆ ಜಿಲೇಬಿ ತರದೆ ವಿಶೇಷವಾಗಿ ತಾವು ಹೇಳಿ ಮಾಡಿಸಿದ್ದೆಂದು ಬಿಸಿ ಬಿಸಿ ಮೆಣಸಿನಕಾಯಿ ಬಜ್ಜಿ ತಂದಿದ್ದರು! ಬಾಯಿಯಲ್ಲಿ ಮೆಲ್ಲಲು ಏನೂ ಇಲ್ಲದೆ ತಮ್ಮ ಕಾವ್ಯವನ್ನು ಓದಲು ಕಷ್ಟವಾದೀತೆಂಬ ಮುನ್ನೆಚ್ಚರಿಕೆ ಅವರದ್ದಿರಬಹುದು!

ಆದರೆ ಸಂಕಲನದ ಮೇಲೆ ಕಣ್ಣಾಡಿಸುತ್ತಾ ಹೋದಾಗ 'ಕಾವ್ಯ ಜಾವ;', 'ದೀಪ ಹಚ್ಚಿರೋ' 'ಹಬ್ಬ ಹರದಿನ', 'ಕೀಲರ್-ಪ್ರಫೂಮೊ' ಮುಂತಾದ ಪದ್ಯಗಳಲ್ಲಿ ನಿಜ ಕವಿಯ ಜೀವ ಹರಿದಾಡಿದೆ. ಲಿಂಗಪ್ಪ ರಾಜಕಾರಣದಲ್ಲಿ ಕಳೆದುಹೋದ ಕವಿ.

## 'ಗೌರ್ಮೆಂಟ್ ಬ್ರಾಹ್ಮಣ' ಎಂಬ ನಾಟಕ

**ಗೆ**ಳೆಯ ಅರವಿಂದ ಮಾಲಗತ್ತಿ ತಮ್ಮ ಸುಮಾರು ಮುವ್ವತ್ತರ ಆಸುಪಾಸಿನ ವಯಸ್ಸಿನಲ್ಲಿ 'ಆತ್ಮಕತೆ' ಎಂದು ಬರೆದ 'ಗೌರ್ಮೆಂಟ್ ಬ್ರಾಹ್ಮಣ' ಸಾಹಿತ್ಯ ಕೃತಿಯಾಗಿ ಅಷ್ಟೇನೂ ಮಾನ್ಯತೆ ಪಡೆದ ಕೃತಿಯಾಗಿರಲಿಲ್ಲ. ಇದು, ದಲಿತ ಸಾಹಿತ್ಯದ ಉಬ್ಬರದ ಕಾಲದಲ್ಲಿ ಲೇಖಕನೊಬ್ಬ ತನ್ನ ಗುರುತನ್ನು ಕಂಡುಕೊಳ್ಳಲು (ಆ ಹೊತ್ತಿಗಾಗಲೇ ಅವರ 'ಕಾರ್ಯ' ಕಾದಂಬರಿ ಸುದ್ದಿ ಮಾಡಿತ್ತಾದರೂ) ಬರೆದ ಅವಸರದ ಕೃತಿಯಾಗಿತ್ತು ಎಂದರೂ ನಡೆದೀತು. ಏಕೆಂದರೆ ಮಹಾದೇವರ 'ಒಡಲಾಳ'ದಂತಹ ಅಭಿಜಾತ ಕೃತಿಯ ನಂತರ ಬಂದ ಈ ಕೃತಿಯಲ್ಲಿ ದೂರು, ಸ್ವಯಂ ಮರುಕ, ಗೋಳುಕರೆಯ ಧ್ವನಿಯೇ ಜಾಸ್ತಿ.ಯಾಗಿ ಕೇಳಿಸಿ, ಲೋಕದ ಅವಿಭಾಜ್ಯ ಭಾಗ ತಾನು ಎಂಬ ಒಳ ಅರಿವಿನ ಹರಿವಿಲ್ಲದೆ ಅದರಲ್ಲಿ ವ್ಯಕ್ತವಾಗುವ ಅಥವಾ ಉಂಟು ಮಾಡುವ ತಲ್ಲಣ ಹೆಚ್ಚಿನ ಸ್ಪಂದನಶೀಲತೆಯನ್ನು ಹೊಂದಿರುವುದಿಲ್ಲ ಎಂಬ ಸತ್ಯಕ್ಕೆ ದಲಿತ ಸಾಹಿತ್ಯವೆಂದ ಮಾತ್ರಕ್ಕೆ ವಿನಾಯಿತಿಯಿಲ್ಲ ಎಂಬುದು ಸಾಬೀತಾಗಿತ್ತು.

ಆದರೆ ಶಿವಮೊಗ್ಗ ರಂಗಾಯಣ, ಅದರ (ಈಗ ಮಾಜಿಯಾಗಿರುವ) ನಿರ್ದೇಶಕ



ಡಾ. ಗಣೇಶ್ ಈ 'ಗೌರ್ಮೆಂಟ್ ಬ್ರಾಹ್ಮಣ' ಕೃತಿಯನ್ನು ಆಧರಿಸಿ ರಚಿಸಿ ನಿರ್ಮಿಸಿರುವ ನಾಟಕ ಒಂದು ದರ್ಶನೀಯ 'ಆಟ'ವಾಗಿ ಗಮನ ಸೆಳೆಯುವಂತಾಗಿದೆ. ಮಾಲಗತ್ತಿಯವರು ನೀಡಿರುವ ಉತ್ತರ ಕರ್ನಾಟಕದ ಹಳ್ಳಿಯೊದರ ದಲಿತ ಕುಟುಂಬದ ಅವಮಾನಗಳ ವಿವರಗಳನ್ನು ನವರಸಗಳು ತುಂಬಿದ ನಾಟಕೀಯ ದೃಶ್ಯಗಳಾಗಿ ರೂಪಿಸುತ್ತಾ ಅವನ್ನು ಜನಪ್ರಿಯ ಜಾನಪದ, ನವ ಜಾನಪದ, ಸಿನಿಮಾ ಹಾಡು, ಕುಣಿತ, ನೆರಳು ಬೆಳಕಿನಾಟ, (ಕೆಲವೊಮ್ಮೆ ತೀರಾ ಲಘುವೆನ್ನಿಸುವ) ರಂಜನೆಗಳಿಂದ ಸಜ್ಜುಗೊಳಿಸಿ ಒಟ್ಟಾರೆ ಒಂದು ದಲಿತ ಸ್ವಾಭಿಮಾನ ವಿಕಸನದ ಕಥೆಯನ್ನಾಗಿ ರಂಗದ ಮೇಲೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಈ ಕಥನ ತಮ್ಮ ಸಾರ್ಥಕತೆಯನ್ನು ಕಂಡುಕೊಳ್ಳಬೇಕಾದ ವಿಷಾದದ ಸೃಷ್ಟಿಯಲ್ಲಿ ಯಶಸ್ವಿಯಾಗಿದೆಯೇ ಎಂದು ಕೇಳಿದರೆ ಉತ್ತರ ಕಷ್ಟ. ಹುಟ್ಟಬೇಕಾದ ವಿಷಾದ ಗಣೇಶರ ಸಮೃದ್ಧ ರಂಗ ತಂತ್ರ ಮತ್ತು ಕೌಶಲಗಳ ಮಧ್ಯೆ ಕಳೆದುಹೋಗಿದೆ. ನಾಟಕದ ಆರಂಭದ ನೃತ್ಯ ಮತ್ತು ಅಂತ್ಯದ ಪಂಜಿನ ದೃಶ್ಯಗಳು ನಾಟಕದ ಆತ್ಮದ ಭಾಗವಾಗದೆ ಒಂದು ಸುಂದರ ಹೊರ ಚೌಕಟ್ಟಾಗಿ ಮಾತ್ರ ಉಳಿಯಲು ಕಾರಣ ಮೂಲಕೃತಿಯಲ್ಲಿ ಪ್ರಬುದ್ಧವಾಗದಿರುವ ದಲಿತ ತಾತ್ವಿಕತೆಯನ್ನು ನಾಟಕ ರೂಪದಲ್ಲಿ ಆವಾಹಿಸಿಕೊಳ್ಳಲು ನಡೆದಿರುವ ಅಸಾಧ್ಯ ಪ್ರಯತ್ನವೇ ಆಗಿದೆ.

ಒಂದು ರಂಗಕೃತಿಯಾಗಿ 'ಖುಷಿ; ಕೊಡುವ ಈ ನಾಟಕದ ಯಶಸ್ಸಿಗೆ ಗಣೇಶರ ಅದ್ಭುತ ರಂಗ ಪ್ರಜ್ಞೆಯ ಜೊತೆಗೆ ಮುಖ್ಯವಾಗಿ ನಟ–ನಟಿ ವರ್ಗದ ಪಳಗಿದ ಅಭಿನಯ ಚಿಕ್ಕಮಗಳೂರು ಜಗದೀಶ್‌ರ ಸಂಗೀತ ಮತ್ತು ಶಂಕರ ಕೆ. ಬೆಳಲಕಟ್ಟೆ ಅವರ ಅವ ಬೆಳಕಿನ ಸಂಯೋಜನೆ ಕೂಡ ಕಾರಭವೆನೆದೂ ಇಲ್ಲಿ ಹೇಳಬೇಕು.

**–ಡಿ.ಎಸ್. ನಾಗಭೂಷಣ**

**೧೩ನೇ ಪುಟದಿಂದ)**

ಮೂರು ಮನೆಗಳ ಸರಹದ್ದಿನಲ್ಲೇ ಹೆಜ್ಜೆಯಿಡುತ್ತ ಅವಸರದಲ್ಲೇ ನಡೆದೆ. ಅದೂ ನನ್ನ ಭ್ರಮೆಯಾಗಿದ್ದರೆ ಎಂಬ ನನ್ನ ಭಯಯನ್ನೂ ಮೀರಿ ನಮ್ಮದೇ ಮನೆಯ ಹಿಂಭಾಗ ತಲುಪಿ ಬಿಟ್ಟಿದ್ದೆ. ಎಂಥದೋ ನಿರಾಳತೆ ಮನಸ್ಸನ್ನಾಕ್ರಮಿಸಿತು. ಮನೆ ಎದುರಿನಿಂದ ಹೋಗಿ ಮನೆ ಹಿಂದುಗಡೆ ಬಂದು ತಲುಪುವ ನಡುವೆ ಎಲ್ಲಿ ಕಳೆದು ಹೋದೆ ಗೊತ್ತಾಗಲಿಲ್ಲ. ಮಗನೂ ಹೀಗೆಯೇ ಕಳೆದುಹೋಗಿದ್ದಾನೆ. ಅವನಿಗೆ ಮನೆ ತಲುಪುವದಷ್ಟೇ ಮುಖ್ಯ. ಅದು ಬಿಟ್ಟ ದಾರಿಯಿಂದಲೇ ವಾಪಸ್ಸಾಗಬೇಕೆಂತೇನಿಲ್ಲ. ಆ ದೇಶದ ನಿಯಮ ಬಾಹಿರವಾಗಿ ಹೊರಗೆ ಒಣಹಾಕಿದ ನನ್ನ ಗುಲಾಬಿ ಸೀರೆ ನನಗೆ ದಾರಿ ಕಾಣಿಸಿದ ಹಾಗೆ ನನ್ನ ಮಗನಿಗೆ ಆ ಬಿಹಾರಿ ಹುಡುಗಿಯೇ ದಾರಿ ಅನಿಸಿದ್ದಾಳೆ. ಯಾಕೋ ಮಗನ ಮೇಲಿದ್ದ ಅಸಮಾಧಾನವೆಲ್ಲ ಮೆಲ್ಲಗೆ ಕರಗತೊಡಗಿತು.

'ಮನೆಯೊಳಗಿನ ನೆಲ ಗೋಡೆಗಳಿಗೆಲ್ಲ ಕಟ್ಟಿಗೆ ಬಳಕೆ ಮಾಡಿದ್ದು, ನಿನ್ನ ನೀರಿಳಿಯುವ ಸೀರೆಯನ್ನು ಮನೆಯೊಳಗೆ ಎಲ್ಲೂ ಒಣಹಾಕುವ ಹಾಗಿಲ್ಲ, ಹೊರಗಡೆಯೂ ಹಾಗೆಲ್ಲ ಇಲ್ಲಿ ಯಾರೂ ಬಟ್ಟೆಗಳನ್ನು ಒಣಹಾಕುವುದಿಲ್ಲ, ಹಾಗೇ ತೆಗೆದಿರಿಸು, ಮೂರ್‍ನಾಲ್ಕು ದಿನದ್ದು ಒಟ್ಟಿಗೇ ವಾಶಿಂಗ್ ಮಶಿನ್ನಿಗೆ ಹಾಕಿಕೊಡುವೆ' ಅಂತ ಪದೇಪದೇ ಹೇಳುತ್ತಿದ್ದ ಮಗ. 'ಆಳೆತ್ತರದ ಅಷ್ಟು ದೊಡ್ಡ ಮಷಿನ್ನಿಗೆ ನನ್ನ ಒಂದು ಸೀರೆ ಯಾವ ಮೂಲೆಗೆ, ಸುಮ್ಮನೇ ವಿದ್ಯುತ್ತು ವೇಸ್ಟು' ಅಂದುಕೊಳ್ಳುತ್ತ ತೊಳೆದ ಸೀರೆಯನ್ನು ಹಿತ್ತಿಲ ಬಾಗಿಲ ಹೊರಗೆ ತಂದು ಒಣಹಾಕುತ್ತ, ಮಗ ಮನೆಗೆ ಬರುವ ಸಂಜೆ ಏಳು ಘಂಟೆಯ ಪೂರ್ವದಲ್ಲೇ ತೆಗೆದರಾಯಿತು ಅಂದುಕೊಂಡಿದ್ದೆ.. ಯಾರು ಏನೇ ಹೇಳಲಿ, ಇವತ್ತು ನನ್ನ ಈ ಸೀರೆಯ ಗುರುತು ಇಲ್ಲದಿದ್ದರೆ ನಾನು ಖಂಡಿತ ಮನೆ ಸೇರುತ್ತಿರಲಿಲ್ಲ. ಪಟ್ಟನೆ ಸೀರೆ ಎತ್ತಿಕೊಂಡು ಒಳ ಬರುತ್ತ ನಡೆವ ಕಾಲೇ ನಿತ್ರಾಣವಾದ ಆ ಒಂದು ಕ್ಷಣ ಕಾಲಿಗೆ ಸಿಕ್ಕ ಕುರ್ಚಿಯಲ್ಲಿ ವಿರಮಿಸಿದೆ.ಮಗ ಎಡಿಸನ್‌ನಲ್ಲಿರುವ ಅಪ್ನಾ ಬಜಾರಿನಿಂದ ಆಗಷ್ಟೇ ತಂದ ತರಕಾರಿ ಚೀಲಗಳನ್ನು ಕಾರಿನಿಂದ ಇಳಿಸುತ್ತ ಶೆಡ್ಡಿನ ಒಳಬಾಗಿಲಿನಿಂದಲೇ ಲಿವಿಂಗ್ ರೂಮಿಗೆ ನಿಧಾನ ಸದ್ದಿಲ್ಲದೇ ನಡೆದು ಬಂದ. 'ಇದನ್ನು ಒಯ್ದು ಐಲ್ಯಾಂಡಿನ ಮೇಲಿಡಮ್ಮ, ನಿನಗಿಷ್ಟದ ಬೆಂಡೆಕಾಯಿ ಇವತ್ತು ತಂದಿಲ್ಲ, ಎಳೆಯ ಬೆಂಡೆಕಾಯಿಗಳ ಆಯುವುದೇ ನನಗೊಂದು ಬೇಜಾರಿನ ಕೆಲಸ, ಮುಂದಿನ ವಾರ ನೀನೂ ಜೊತೆ ಬಾರಮ್ಮ ಬೆಂಡೆಕಾಯಿ ತರೋಣ' ಅಂದ.. ಎಲ್ಲ ಕೆಲಸ ಮಗನೇ ಹೊತ್ತು ಮಾಡುತ್ತಾನೆ. ಆ ಕುರಿತು ಕೇಳಿದರೆ, 'ಇಲ್ಲಿ ಇದು ಹೆಣ್ಣು ಮಾಡೋ ಕೆಲಸ ಇದು ಗಂಡು ಮಾಡೋ ಕೆಲಸ ಅಂತ ಇಲ್ಲ, ಎಲ್ಲ ಕೆಲಸವನ್ನೂ ಎಲ್ಲರೂ ಮಾಡುತ್ತಾರೆ' ಅನ್ನುತ್ತಾನೆ.

ತಕ್ಷಣ ಮಗ ಆ ಹುಡುಗಿಯನ್ನು ಇಂದು ಕರೆತರುವೆ ಅಂದದ್ದು ನೆನಪಾಯಿತು. ಅವನನ್ನೇ ದಿಟ್ಟಿಸುತ್ತ ತಡವರಿಸುತ್ತಲೇ ಕೇಳಿದೆ, 'ಒಬ್ಬನೇ ಬಂದೆಯಲ್ಲ?' 'ಹೌದು ಅವಳು ಬರಲಿಲ್ಲ, ಯಾಕೋ ಗೊತ್ತಿಲ್ಲ, ಫೋನ್ ಕೂಡ ರಿಸೀವ್ ಮಾಡಲಿಲ್ಲ, ಏನು ಸಮಸ್ಯೆಯೋ' ಅನ್ನುತ್ತ ಮುಖ ಸಣ್ಣ ಮಾಡಿಕೊಂಡ.. ನಾನು ಹೀಗೆ ಮೊದಲ ಬಾರಿ ಆ ಹಂಟ್ಲಿವೇ ರಸ್ತೆಯಲ್ಲಿ ದಾರಿ ತಪ್ಪಿಸಿಕೊಂಡ ಸಂಗತಿ ಯಾಕೋ ಮಗನ ಬಳಿ ಹೇಳಬೇಕು ಅನ್ನಿಸಲಿಲ್ಲ.

ನನಗೆ ಹೊಸ ನಮೂನೆಯ ಅವನ ಮನೆಯ ಗ್ಯಾಸು ಹಚ್ಚಲು ಬಾರದ ಕಾರಣ ಅವನೇ ಚಹಕ್ಕಿಡುತ್ತ, ಬೆಳಿಗ್ಗೆಯಿಂದ ಕಟ್ಟೆಯ ಮೇಲೆ ಒಟ್ಟಾಗಿಸಿದ್ದ ತೊಳೆಯುವ ಪಾತ್ರೆಗಳನ್ನು ಮೌನವಾಗಿಯೇ ಡಿಶ್ ವಾಶರ್‌ನ ಟ್ರೇದಲ್ಲಿ ನೀಟಾಗಿ ಜೋಡಿಸಿ ಡೋರ್ ಒತ್ತಿ ಬಟನ್ ಹಾಕಿದ. ಪಾತ್ರೆಗಳು ಡಗಡಗಡಗ ಸಣ್ಣಗೆ ಸ್ವರ ಹೊರಡಿಸತೊಡಗಿತು. ತುಸು ಹೊತ್ತಿನಲ್ಲೇ ಮೌನವನ್ನು ಭೇದಿಸಿದ ಅದೇ ಸ್ವರ ಎಂದಿನಂತೆ ಕೇಳದೇ ಟಣಪಣ ಸಪ್ಪಳವಾಗಿ ಮಾರ್ಪಟ್ಟು ಸಣ್ಣ ಬಾಂಬೊಂದು ಸ್ಫೋಟಗೊಂಡಂತೆ ವಿಚಿತ್ರ ಸದ್ದಾಗಿ ಡಿಶ್ ವಾಶರಿನ ಬಾಗಿಲು ಥಪ್ಪನೆ ತೆರೆದುಕೊಂಡು ನೆಲಕ್ಕಪ್ಪಳಿಸುತ್ತ ಒಂದೇ ಕ್ಷಣದಲ್ಲಿ ಒಳಗಿದ್ದ ಪಾತ್ರೆಗಳೆಲ್ಲ ಸಿಡಿದು ಲಿವಿಂಗ್ ರೂಮಿನುದ್ದಕ್ಕೂ ಸಾಬೂನು ನೀರಿನ ನೊರೆಯ ಸಹಿತ ಚೆಲ್ಲಾಪಿಲ್ಲಿಯಾಗಿ ಬಿದ್ದವು. ನಾವಿಬ್ಬರೂ ಅಸಹಾಯಕ ಭೀತಿಯೊಂದು ತುಂಬಿ ನಿಂತಿದ್ದೆವು.



**(ಹುಬ್ಬಳ್ಳಿಯಲ್ಲಿ ವಾಸಿಸುವ ಸುನಂದಾ ಕಡಮೆ ಕನ್ನಡದ ಪ್ರತಿಭಾನ್ವಿತ ಲೇಖಕಿಯರಲ್ಲೊಬ್ಬರು.)**

## ಇನ್ನೆರಡು ಪತ್ರಗಳು

ಭೂಮಿಯನ್ನು ವಿನಾಶದ ಅಂಚಿಗೆ ತಳ್ಳುತ್ತಿರುವ ವಾತಾವರಣ ಬದಲಾವಣೆಯ ಗತಿಯನ್ನು ನಿಯಂತ್ರಿಸಲು ತ್ವರಿತ ಕ್ರಮ ಕೈಗೊಳ್ಳದ ಜಾಗತಿಕ ನಾಯಕರನ್ನು ತರಾಟೆಗೆ ತೆಗೆದುಕೊಂಡ ಗ್ರೇಟಾ ಥುನ್ಬರ್ಗ್‌ಳ ಭಾಷಣ ಪರಿಸರದ ಹಾನಿಯ ಬಗ್ಗೆ ಏನೂ ಮಾಡದೆ ಗೊಣಗುಡುತ್ತಿರುವ ಬಹುಸಂಖ್ಯಾತರಿಗೆ ನೀಡಿರುವ ಎಚ್ಚರಿಕೆಯಾಗಿದೆ. ಈ ಪುಟ್ಟ ಪರಿಸರವಾದಿಯ ಪ್ರಖರ ಭಾಷಣವನ್ನು ಓದುಗರಿಗೆ ನೀವು ನೀಡಿದ್ದು (ಕಳೆದ ಸಂಚಿಕೆ) ಗಾಂಧೀಜಿಯವರ ೧೫೦ನೇ ಜಯಂತಿಯ ಸಂದರ್ಭದಲ್ಲಿ ನಮ್ಮ ಅಭಿವೃದ್ಧಿಯ ಪಥ ಮಾನವಕುಲಕ್ಕೆ ಎಷ್ಟು ಮಾರಕವಾಗಬಹುದೆಂಬುದನ್ನು ನೆನಪಿಸಿದೆ. ಗಾಂಧೀಜಿ ಮತ್ತವರ ಸಮಕಾಲೀನ ದಾರ್ಶನಿಕರು ನೀಡಿದ ಎಚ್ಚರಿಕೆಯನ್ನು, ತೋರಿದ ಮಾರ್ಗಗಳನ್ನು ಕಡೆಗಣಿಸಿದ್ದೇ ಇಂದು ವಾತಾವರಣ ಬದಲಾವಣೆಯ ವಿಪರೀತ ಪರಿಣಾಮಗಳು ನಮ್ಮನ್ನೆದುರಾಗಿವೆ. ಇಂದಿಗೆ ಬೇಕಾದ ಗಾಂಧಿಯ ಬಗ್ಗೆ ಮಾತನಾಡಿರುವ ಜಿ ಎನ್ ದೇವಿಯವರು ನಮ್ಮದೆ ಜನರನ್ನು ಪರಕೀಯರನ್ನಾಗಿಸುವ 'ನಾಗರಿಕ ರಾಷ್ಟ್ರೀಯ ನೋಂದಣಿ' ಎಂಬ ಮಾನವ ವಿರೋಧಿ ನೀತಿಯನ್ನು ಎಲ್ಲ ನಾಗರಿಕರು ವಿರೋಧಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಪ್ರಭುತ್ವದ ಜನವಿರೋಧಿ ನೀತಿಗಳನ್ನು ಎದುರಿಸಲು ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ತತ್ವಗಳೂ ದಾರಿದೀಪವಾಗಬೇಕೆಂಬ ದೇವಿಯರ ಮಾತನ್ನು ಇಂದಿನ ಹೋರಾಟಗಾರರು ಮತ್ತು ಬುದ್ಧಿಜೀವಿಗಳು ಗಮನಿಸಬೇಕಾಗಿದೆ.

**–ಡಾ. ಡಿ.ಎಸ್. ಪೂರ್ಣಾನಂದ,** ಶಂಕರಘಟ್ಟ

ಕಳೆದಸಂಚಿಕೆಯಲ್ಲಿ ಪ್ರಕಟವಾದ ಗಣೇಶ್ ಎನ್ ದೇವಿ ಅವರ "ಇಂದಿಗೆ ಬೇಕಾದ ಗಾಂಧಿ" ನಾನು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ಖುದ್ದಾಗಿ ಅವರ ಮಾತುಗಳನ್ನು ಕೇಳಿದ್ದರಿಂದ ನನ್ನ ಈ ಮರು ಓದು ನನಗೆ ಗಾಂಧಿ ಕುರಿತಂತೆ ಇನ್ನಷ್ಟು ಆಳವಾಗಿ ತಿಳಿಯಲು ಸಾಧ್ಯವಾಯಿತು. ಇಂದಿನ ದಿನಗಳಲ್ಲಿ ಗಾಂಧಿ ಕುರಿತಂತೆ ನಡೆಯುತ್ತಿರುವ ಅಪದ್ಧ ಚರ್ಚೆಗಳನ್ನು ಗಮನಿಸಿದರೆ ಈ ರೀತಿಯ ಲೇಖನಗಳು ತುಂಬ ಅಮೂಲ್ಯ ಎನಿಸುತ್ತದೆ.

ಸವಿತಾ ನಾಗಭೂಷಣರವರ 'ಅತಿ ಸಣ್ಣ ಕಥೆ'ಗಳು ನಿಜಕ್ಕೂ ಅರ್ಥಪೂರ್ಣವಾಗಿದ್ದು ಅವುಗಳಿಗೆ ಗುಜ್ಜಾರಪ್ಪನವರು ಬರೆದಿರುವ ಚಿತ್ರಗಳು ಕೂಡ ಅಷ್ಟೇ ಅರ್ಥಪೂರ್ಣವಾಗಿದೆ. ಡಿಎಸ್‌ಎನ್ ಅವರ 'ಗಾಂಧಿ ಕಥನ' ಕುರಿತ ಲಕ್ಷ್ಮೀಶ ತೋಳ್ಪಾಡಿಯವರ ಪುಸ್ತಕವಲೋಕನ ಪುಸ್ತಕದ ಮಹತ್ವವನ್ನು ಬಹು ಸೂಕ್ಷ್ಮವಾಗಿ ಪರಿಚಯಿಸುತ್ತಾ ಸಾಮಾನ್ಯ ಓದುಗರ ಓದಿಗೆ ಮಾರ್ಗದರ್ಶನ ನೀಡುವಂತಿದೆ.

**–ಎನ್. ಆರ್ ಬಾಲಸುಬ್ರಮಣ್ಯ,** ಬೆಂಗಳೂರು

# ಕ್ರೈಸ್ತ ಸಂತವಾಣಿ

**ಧರ್ಮ ವಿಚಾರ ಪುಟ**



**ಸಾಮಾನ್ಯ ಅರ್ಥದಲ್ಲಿ ಸಂತರೆಂದರೆ, ರಾಗ ದ್ವೇಷಗಳನ್ನು ಕಳೆದುಕೊಂಡು ಸದಾ ಲೋಕಹಿತ ಬಯಸುವ ದೈವೀಕ ಗುಣವುಳ್ಳ ಮಹನೀಯರು ಎಂದು ಭಾವಿಸಲಾಗುತ್ತದೆ. ಆದರೆ ಕ್ರೈಸ್ತ ಸಂಪ್ರದಾಯದಲ್ಲಿ ಸಂತರು ಎಂಬ ಅಧಿಕೃತ ಪದವಿಯನ್ನೇ ನಿರ್ಮಿಸಲಾಗದ್ದು, ಸಾಮಾನ್ಯವಾಗಿ ಅವರನ್ನು ಸ್ವರ್ಗದಲ್ಲಿ ದೇವರ ಬಳಿ ಇದ್ದು ಸ್ವರ್ಗದ ಕೀಲಿಕೈಗಳ ಒಡೆತನವುಳ್ಳವರು ಎಂದು ವಿವರಿಸಲಾಗುತ್ತದೆ. ಸಂತರೆಂದು ಗುರುತಿಸಲ್ಪಡಲು ಚರ್ಚ್‌ನ ಸಮಕ್ಷಮ ಅಧಿಕಾರ ಮಂಡಲದಿಂದ ನಿಗದಿಪಡಿಸಲ್ಪಟ್ಟ ಹಲವು ಅರ್ಹತೆಗಳನ್ನು ಹೊಂದಿದವರೆಂದು ಉಚಿತ ರೀತಿಯಲ್ಲಿ ಪರೀಕ್ಷಿಸಲ್ಪಡಬೇಕಾಗುತ್ತದೆ. ನಂತರವಷ್ಟೇ ಅವರನ್ನು ಅಧಿಕೃತವಾಗಿ ಸಂತರ ಪಟ್ಟಿಯಲ್ಲಿ ಸೇರಿಸಲ್ಪಡಲಾಗುತ್ತದೆ.**

**ಕ್ರಿಸ್ತನ ನಿಷ್ಠಾವಂತ ಶಿಷ್ಯರಾಗಿದ್ದವರಿಗೆ ಸಹಜವಾಗಿಯೇ ಈ ಸಂತ ಪದವಿ ದೊರೆಯಿತಾದರೂ, ನಂತರದ ವರ್ಷಗಳಲ್ಲಿ ಧಾರ್ಮಿಕ ವಲಯದಲ್ಲಿ ಒಂದು ವ್ಯವಸ್ಥೆಯನ್ನುಂಟು ಮಾಡಲು ಈ ಶಾಸ್ತ್ರೀಯತೆಯನ್ನು ಆರಂಭಿಸಲಾಗಿದೆ. ಹಾಗೆ ಶಾಸ್ತ್ರೀಯವಾಗಿ ಇತ್ತೀಚೆಗೆ ಸಂತ ಪದವಿ ಪಡೆದ ಭಾರತೀಯರೆಂದರೆ ಮತರ್ ತೆರೇಸಾ. ಅಂದರೆ ಕ್ರೈಸ್ತ ಧರ್ಮದ ಸಂದೇಶಕ್ಕನುಗುಣವಾಗಿ ಲೋಕಹಿತಕ್ಕಾಗಿ ತಮ್ಮ ಬದುಕನ್ನು ಸಮರ್ಪಿಸಿ ಪವಿತ್ರ ಬದುಕನ್ನು ಬಾಳಿದವರು ಕ್ರೈಸ್ತ ಸಂಪ್ರದಾಯದಲ್ಲಿ ಸಂತರೆನಿಸಿಕೊಳ್ಳುತ್ತಾರೆ. ಕ್ರಿಸ್ತನ ಕಾಲದಿಂದಲೂ ಇಂತಹ ನೂರಾರು ಸಂತರು ಲೋಕವನ್ನು ಬೆಳಗಿ ಹೋಗಿದ್ದಾರೆ. ಕ್ರಿಸ್ತನ ಸಂದೇಶವನ್ನು ತಮ್ಮದೇ ಕಾಲದ ಭಾಷೆಯಲ್ಲಿ ವಿಸ್ತರಿಸಿ ಹೋಗಿದ್ದಾರೆ. ಕ್ರಿಸ್‌ಮಸ್ ಸಂದರ್ಭದಲ್ಲಿ ಅಂತಹ ಆಯ್ದ ಕೆಲ ಸಂತರ ವಾಣಿಗಳನ್ನು ಇಲ್ಲಿ ನೀಡಿದ್ದೇವೆ.–ಸಂ**

ಅಡವಿಯಲ್ಲಿ ನೀನು ಪುಸ್ತಕಗಳಿಗಿಂತ ಹೆಚ್ಚಿನದನ್ನು ಪಡೆಯುತ್ತೀಯ. ಗುರುಗಳಿಂದ ಕಲಿಯದಾಗದ್ದನ್ನು ಮರಗಳು ಮತ್ತು ಕಲ್ಲುಗಳು ನಿನಗೆ ಕಲಿಸುತ್ತವೆ.

**– ಸಂತ ಬರ್ನಾರ್ಡ್**

ನಿನಗೆ ಸರಿಹೊಂದದ ಪುಸ್ತಕಗಳನ್ನು ಓದಬೇಡ ... ಅವು ಸಾಹಿತ್ಯಿಕವಾಗಿ ಒಳ್ಳೆಯ ರಚನೆಗಳಾಗಿದ್ದರೂ ಕೂಡ. ನಿನ್ನನ್ನು ಕೇಳುತ್ತೇನೆ: ವಿಷವೆಂದು ಗೊತ್ತಿರುವುದನ್ನು ನೀನು ಕುಡಿಯುತ್ತೀಯ, ಅದನ್ನು ಬಂಗಾರದ ಬಟ್ಟಲಲ್ಲಿ ಕೊಟ್ಟರೆ ?

**– ಸಂತ ಜಾನ್ ಬಾಸ್ಕೋ**

ಇಲ್ಲಿ ಅಚ್ಚಾಗಿರುವ ಪದಗಳು ಪರಿಕಲ್ಪನೆ ಮಾತ್ರ. ನೀನು ಸ್ವಾನುಭವಗಳ ಮೇಲೆ ಅವಲಂಬಿತನಾಗಬೇಕು – ಸಂತ ಆಗಸ್ಟೀನ್

ಒಳ್ಳೆಯದನ್ನು ತಲುಪಲು ದಾರಿ ತಪ್ಪುವುದು ಬಹಳ ಉಪಯುಕ್ತ, ಅದು ಅನುಭವವನ್ನು ಕೊಡುತ್ತದೆ **– ಅವಿಲದ ಸಂತ ತೆರೇಸಾ**

ಬಡವರಿಗೆ ಕೊಡುವ ಶ್ರೀಮಂತ ದಾನ ಮಾಡುತ್ತಿಲ್ಲ, ಸಾಲ ತೀರಿಸುತ್ತಿದ್ದಾನೆ – ಮಿಲನಿನ ಸಂತ ಅಂಬ್ರೊಸ್

ನಮಗಿಂತ ಹೆಚ್ಚಿನ ಅಗತ್ಯ ಇರುವವರಿಗೆ ಕೊಡದಿದ್ದರೆ ಅದು ಕಳುವು ಮಾಡಿದ ಹಾಗೆ.. **– ಅಸ್ಸಿಸಿಯ ಸಂತ ಫ್ರಾನ್ಸಿಸ್**

ದೇವರು ನಿನಗೆ ಕೊಟ್ಟಿರುವುದನ್ನು ತಿಳಿದು, ನಿನಗೆ ಅವಶ್ಯಕತೆ ಇರುವಷ್ಟನ್ನು ತೆಗೆದುಕೊ; ಉಳಿದದ್ದು ಬೇರೆಯವರ ಅವಶ್ಯಕತೆಗೆ **– ಸಂತ ಆಗಸ್ಟೀನ್**

ಮಣ್ಣಿಗಿಂತ ಹೆಚ್ಚಿನ ಉಪಯುಕ್ತತೆ ಅಥವಾ ಪ್ರಾಮುಖ್ಯತೆಯನ್ನು ನಾವು ಹಣಕ್ಕೆ ಕೊಡಬಾರದು. ಅದಕ್ಕಿಂತ ಹೆಚ್ಚು ಬೆಲೆ ಕೊಡುವವರು, ದುರಾಸೆ ಪಡುವವರು, ಸೈತಾನನಿಂದ ವಂಚನೆಗೊಳಗಾಗುವ ಅಪಾಯಕ್ಕೆ ತಮ್ಮನ್ನು ತಾವೇ ತಂದುಕೊಳ್ಳುತ್ತಾರೆ

**– ಅಸ್ಸಿಸಿಯ ಸಂತ ಫ್ರಾನ್ಸಿಸ್**

ಎಲ್ಲರಿಗೂ ನೀನು ಒಳ್ಳೆಯದು ಮಾಡುವುದಕ್ಕೆ ಸಾಧ್ಯವಾಗದ್ದರಿಂದ, ಯಾರು ಕಾಲ, ಸ್ಥಳ ಮತ್ತು ಸಂದರ್ಭಗಳ ಆಕಸ್ಮಿಕ ಕಾರಣಗಳಿಂದ ನಿನ್ನ ಸಂಪರ್ಕಕ್ಕೆ ಬರುತ್ತಾರೋ, ಅವರ ಬಗ್ಗೆ ಅತಿ ಹೆಚ್ಚಿನ ನಿಗಾ ವಹಿಸು – ಸಂತ ಆಗಸ್ಟೀನ್

ಖಂಡಿತವಾಗಿ ಹೊಟ್ಟೆಬಾಕತನ ಎಲ್ಲಾ ದೈಹಿಕ ರೋಗಗಳಿಗೆ ಕಾರಣ, ಇನ್ನೂ ಮುಖ್ಯವಾಗಿ ಆತ್ಮದ ಮೇಲೆ ಅದು ಮಾಡುವ ಪರಿಣಾಮ ಅನಾಹುತ ಪೂರಿತವಾದದ್ದು

**– ಸಂತ ಅಲ್ಫೋನ್ಸ್ ಲಿಗೌರಿ**

ಲೋಭ ಒಂದು ಮಾರಣಾಂತಿಕ ಪಾಪ **– ಸಂತ ಪ್ಯಾಟ್ರಿಕ್**

ಸೈತಾನನು ಎಂದೂ ಒಬ್ಬ ಮನುಷ್ಯನನ್ನು ತನ್ನ ಮುಷ್ಟಿಯಿಂದ ಹಿಡಿಯುವುದಕ್ಕೆ ಹೋಗುವುದಿಲ್ಲ, ಎಲ್ಲಿಯವರೆಗೆಂದರೆ ಆ ಮನುಷ್ಯ ಸ್ವಇಚ್ಛೆಯಿಂದಲೇ ನೆಲಕ್ಕೆ ಉರುಳುವುದನ್ನು ಕಾಣುವವರೆಗೂ. **– ಸಂತ ಥಾಮಸ್ ಮೋರ್**

ಮೊದಲು ಪ್ರೀತಿ ಅವರ ಹೃದಯಗಳಲ್ಲಿ ಪ್ರವೇಶ ಪಡೆದುಕೊಳ್ಳಲಿ, ಆಮೇಲೆ ಬೇರೆಲ್ಲವೂ ಹಿಂಬಾಲಿಸುತ್ತವೆ – ಸಂತ ಫಿಲಿಪ್ ನೇರಿ

ಯಾವುದು ತನ್ನ ಕಾಠಿಣ್ಯವನ್ನು ಅನುಭವಿಸಿದಾಗ ತತ್ತರಿಸದೇ ಇರುವಂತಹಆ ಹೃದಯವೇ ಅತ್ಯಂತ ಕಠೋರ. **– ಸಂತ ಬರ್ನಾರ್ಡ್**

ಪ್ರೀತಿ ಮತ್ತು ಒಗ್ಗಟ್ಟು ಸಾಮಾನ್ಯವಾಗಿ ಬದುಕುವ ಮನುಷ್ಯರಿಗೆ ಬಹಳ ಮುಖ್ಯ; ಅತೀವ ಅನುಕಂಪ, ಎಷ್ಟರಮಟ್ಟಿಗೆ ಎಂದರೆ ಬೇರೆಯವರ ನ್ಯೂನ್ಯತೆಗಳನ್ನು ಸಹಿಸಿಕೊಳ್ಳುವಷ್ಟು, ಅವುಗಳನ್ನು ನೆಲೆಗೊಳಿಸಲು ಮತ್ತು ಉಳಿಸಿಕೊಳ್ಳಲು ಮಾಡುವಷ್ಟು ಬೇರೆಯವುದೂ ಮಾಡಲಾರದು **– ಸಂತ ರಾಬರ್ಟ್ ಬೆಲ್ಲೆರ್ಮಿನ್**

ಮನುಷ್ಯರು ವಿದೇಶಕ್ಕೆ ಹೋಗಿ, ಪರ್ವತಗಳ ಎತ್ತರಕ್ಕೆ, ಸಮುದ್ರದ ಬೃಹತ್ ಅಲೆಗಳ ಬಗ್ಗೆ, ನದಿಗಳ ಸುದೀರ್ಘ ಮಾರ್ಗಗಳ ಬಗ್ಗೆ, ಹೆಗ್ಗಡಲಿನ ವಿಸ್ತಾರಕ್ಕೆ, ನಕ್ಷತ್ರಗಳ ವರ್ತುಲಾಕಾರದ ಚಲನೆಗೆ, ಆದರೆ ತಮ್ಮನ್ನು ತಾವೇ ಉಪೇಕ್ಷಿಸಿ, ಬೆರಗಾಗುವರು **– ಸಂತ ಆಗಸ್ಟೀನ್**

ಅವರು ಯಾವುದನ್ನು ನೋಡುವುದಿಲ್ಲ, ಯಾರು ಎಲ್ಲವನ್ನೂ ನೋಡುವವನನ್ನು ಕಂಡವರು ? **– ಪೋಪ್ ಸಂತಶ್ರೇಷ್ಠ ಗ್ರೆಗರೀ**

ಅವರು ಯಾವುದನ್ನು ನೋಡುವುದಿಲ್ಲ, ಯಾರು ಎಲ್ಲವನ್ನೂ ನೋಡುವವನನ್ನು ಕಂಡವರು? – **ಪೋಪ್ ಸಂತ ಶ್ರೇಷ್ಠ ಗ್ರೆಗರೀ**

ಒಮ್ಮೆಗೇ ಸಂಪೂರ್ಣ ಜ್ಞಾನ ನಮಗೆ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ನಂಬಿಕೆಯಿಂದ ಪ್ರಾರಂಭಿಸಬೇಕು; ಆಮೇಲೆ ಮುಂದೆ ನಮಗೆ ನಾವೇ ಆ ನಂಬಿಕೆಯ ಪ್ರಮಾಣ ಪಡೆದುಕೊಳ್ಳುವ ಪ್ರಾವೀಣ್ಯಾದತ್ತ ಸಾಗುವಂತೆ ಅನುವು ಮಾಡಿಕೊಳ್ಳುತ್ತೇವೆ

**– ಸಂತ ಅಕ್ವಿನೇಸ್**

ಪ್ರಾರ್ಥನೆ ಎಂದರೆ ಬೇರೇನಲ್ಲ, ದೇವರೊಂದಿಗೆ ಸ್ನೇಹದ ಸಂಬಂಧ ಹೊಂದಿರುವುದು – ಅವಿಲದ ಸಂತ ತೆರೇಸಾ

ದೇವರ ಮೇಲೇ ಎಲ್ಲವೂ ಅಧೀನವಾಗಿರುವಂತೆ ಪ್ರಾರ್ಥನೆ ಮಾಡು, ನಿನ್ನ ಮೇಲೆ ಎಲ್ಲವೂ ಅವಲಂಬಿತವಾಗಿರುವಂತೆ ಕೆಲಸ ಮಾಡು

**– ಅವಿಲದ ಸಂತ ತೆರೇಸಾ**

ಭವಿಷ್ಯ ಇಂದು ಶುರುವಾಗುತ್ತದೆ, ನಾಳೆಯಲ್ಲ

**– ಎರಡನೇ ಪೋಪ್ ಜಾನ್ ಪಾಲ್**

ಯಾವುದು ಅವಶ್ಯವೋ ಅದರಿಂದ ಪ್ರಾರಂಭ ಮಾಡು; ಆಮೇಲೆ ಯಾವುದು ಸಾಧ್ಯವೋ ಅದು ಮಾಡು; ಆಗ ತಕ್ಷಣ ನೀನು ಅಸಾಧ್ಯವಾದುದ್ದನು ಮಾಡುವಂತವನಾಗುತ್ತೀಯ. **–ಅಸ್ಸಿಸಿಯ ಸಂತ ಫ್ರಾನ್ಸಿಸ್**

ನಿನ್ನ ಮುಂದೆ ನಾನು ಬರಿಗೈಯಲ್ಲಿ ಬರಬಾರದೆಂದು ನಿರೀಕ್ಷಿಸುವೆ, ಯಾಕೆಂದರೆ ಎಲ್ಲರಿಗೂ ಅವರ ಕಾರ್ಯಕ್ಕೆ ತಕ್ಕಂತೆ ಪ್ರತಿಫಲ ಸಿಗುತ್ತದೆ

**– ಅವಿಲದ ಸಂತ ತೆರೇಸಾ**

ಸತ್ಯವಾಗಿಯೂ ಪ್ರಪಂಚದ ಸ್ಥಿತಿ ಕೆಟ್ಟಿದೆ; ಆದರೆ ನೀನು ಮತ್ತು ನಾನು ಶ್ರದ್ಧೆಯಿಂದ ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳಲು ಪ್ರಯತ್ನ ಪಟ್ಟರೆ, ಅದು ತುಂಬಾ ಒಳ್ಳೆಯ ಆರಂಭ ಮಾಡಿದಂತಾಗುತ್ತದೆ **– ಅಲಕಂಟ್ರದ ಸಂತ ಪೀಟರ್**

ಚರ್ಚು ಪಾರಮಾರ್ಥಿಕವಾದದ್ದಕ್ಕಿಂತ, ಐಹಿಕವಾದುವುಗಳನ್ನು ಯಾವಾಗ ಗುರಿ ಮಾಡಿಕೊಂಡಿತೋ, ಕೆಟ್ಟಿದ್ದ ಪರಿಸ್ಥಿತಿ ಇನ್ನೂ ಕೆಳಮಟ್ಟ ತಲುಪಿತು

**– ಸಿಯೀನ ಕೊಂಫೋರ್ಟ್‌ನ ಸಂತ ಕ್ಯಾತರಿನ್**

ಸತ್ಯ ನರಳುತ್ತದೆ, ಆದರೆ ಸಾಯುವುದಿಲ್ಲ **– ಅವಿಲದ ಸಂತ ತೆರೇಸಾ**

ಬೇರೆಯವರ ಮೇಲೆ ಪ್ರಭುತ್ವ ಮಾಡುವುದಕ್ಕೆ, ಕಟ್ಟಪ್ಪಣೆ ಮಾಡುವುದಕ್ಕೆ, ನಿಯಂತ್ರಣಕ್ಕೆ, ಮನುಷ್ಯರು ಆಸೆ ಪಡುತ್ತಾರೆ, ಆದರೆ ಅವರೇ ನಿರ್ಬಂಧನೆಗಳಿಲ್ಲದೆ, ನಿಯಂತ್ರಣಗಳಿಲ್ಲದೇ ಬದುಕುತ್ತಾರೆ **– ಸಂತ ಥಾಮಸ್ ಮೋರ್**

ಹಿಂಸೆಯಿಂದ ಸಾಮಾಜಿಕ ನ್ಯಾಯ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಯಾವುದನ್ನು ಸೃಷ್ಟಿಸಲು ಹೊರಟಿದೆಯೋ, ಅದನ್ನೇ ಆ ಹಿಂಸೆ ಕೊಲ್ಲುತ್ತದೆ

**– ಎರಡನೇ ಪೋಪ್ ಜಾನ್ ಪಾಲ್**

(ಸಂಗ್ರಹಾನುವಾದ: ಸಿ. **ಪ್ರಶಾಂತ್**)

# ಪುಸ್ತಕಾವಲೋಕನ

ಪು: **ಬಿಳಿಕೊಕ್ಕರೆ ಮತ್ತು ವಿಶ್ವದ ಆಖ್ಯಾಯಿಕೆಗಳು** ಲೇ: **ಗೌರೀಶ ಕಾಯ್ಕಿಣಿ** ಪ್ರ: **ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು** (೦೮೦–೨೩೧೮೩೩೧೧೦). ಪು:೨೬೯ ಬೆಲೆ; ರೂ.೧೫೦/–

## ಮನುಷ್ಯನ ಶಕ್ತಿ ಮತ್ತು ಮಿತಿಯ ರೂಪಕ ವಿಲಾಸ



**ಕ**ತೆಯ ಮಾಂತ್ರಿಕತೆ ಮತ್ತು ಮಾಂತ್ರಿಕ ಕತೆಗಳು ಮನುಷ್ಯನನ್ನು ಅನೂಚಾನವಾಗಿ ಹಿಡಿದಿಟ್ಟಿವೆ. ಕತೆ ಮನುಷ್ಯನಷ್ಟೇ ಸಲ ಬಣ್ಣ ಬದಲಿಸಿದೆ. ಈಚಿನ ದಿನಗಳಲ್ಲಿ ಅತಿ ವಾಸ್ತವಿಕತೆಯೇ ಕತೆಗಳ ರೂಪಗಳಾಗಿ ತನ್ನ ಆಳವನ್ನು ತಗ್ಗಿಸಿಕೊಳ್ಳುತ್ತಾ ಬಂದಿದೆ. ಅದ್ಭುತ ರಮ್ಯತೆಯೊಳಗೆ ಹೆಣೆದಿಟ್ಟ ಮನುಜನ ಹಣೇಬರಹ, ಬೀಜದಂತೆ ಹುದುಗಿಸಿಟ್ಟ ಬದುಕಿನ ತಥ್ಯಗಳನ್ನು ಅವಾಸ್ತವ ನಿರೂಪಣೆಯು ಕತೆಗಳು ಅಡಗಿಸಿಟ್ಟುಕೊಂಡಿರುತ್ತವೆ ಮತ್ತು ನಾವದನ್ನು ಅದರೊಳಗಿಂದ ಶೋಧಿಸಿ ತೆಗೆಯುವ ಆಟದಲ್ಲಿ ತೊಡಗಿಸಿಕೊಳ್ಳುವುದು ವಿನೋದದ ಜೊತೆಗಿನ ವಿಕಾಸ ಎಂಬುದನ್ನು ಮರೆಯುತ್ತಿರುವ ಕಾಲದಲ್ಲಿ 'ಬಿಳಿಕೊಕ್ಕರೆ ಹಾಗೂ ವಿಶ್ವದ ಆಖ್ಯಾಯಿಕೆಗಳು' ಎಂಬ ೨೩ಕಥೆಗಳಿರುವ ಈ ಸಂಕಲನದ ಓದು ನಮ್ಮನ್ನು ಮತ್ತೆ ಆ ಲೋಕಕ್ಕೆ ಒಯ್ಯಬಲ್ಲುದು. ಬಹುಶಃ ಸರಿಯಾದ ಕಾಲದಲ್ಲಿ ಕನ್ನಡದಲ್ಲಿ ಇದು ಮರುಮುದ್ರಣಗೊಂಡಿದೆ.

ಇದರಲ್ಲಿರುವ ಹಲವಾರು ಕತೆಗಳು ನಮ್ಮ ಬಾಲ್ಯದಿಂದಲೇ ನಮಗೆ ಪರಿಚಿತವಾದವು. ಈಡಿಪಸ್ ದೊರೆ, ನಾರ್ಸಿಸಸ್, ಜೋನ ಆಫ್ ಆರ್ಕ್ ಮೊದಲಾದವರು ಕನ್ನಡಿಗರೇ ಎಂಬಷ್ಟು ಕತೆಯ ಮೂಲಕ ನಮ್ಮ ಮನೋಭಿತ್ತಿಯಲ್ಲಿ ಸೇರಿಹೋಗಿದ್ದಾರೆ. ಇದರೊಂದಿಗೆ ನಮಗೆ ಹೆಚ್ಚು ಪರಿಚಿತವಲ್ಲದ ಕತೆಗಳೂ ಇಲ್ಲಿವೆ. ಈ ಕತೆಗಳು ಕಾಲದ ಅಂತರದಲ್ಲಿ ಆಯಾ ಕಾಲದ ವಿದ್ಯಮಾನಗಳೊಂದಿಗೆ ರೂಪಕಾತ್ಮಕವಾಗಿ ತಳುಕು ಹಾಕಿಕೊಳ್ಳುತ್ತವೆ. ಇದೇ ಈ ಕತೆಗಳ ಸಾರ್ವಕಾಲಿಕತೆಯ ಗುಟ್ಟು. ನಮ್ಮ ಪುರಾಣಗಳ ಹಲವು ಉಪಕತೆಗಳು, ಪಂಚತಂತ್ರ, ಜಾನಪದ ಕತೆಗಳಲ್ಲಿ ಇಂತದನ್ನು ನಾವು ನೋಡಿರುತ್ತೇವೆ. ಹಾಗೆಯೇ ಜಗತ್ತಿನಾದ್ಯಂತ ಇಂತಹ ಕತೆಗಳು ಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಂಡಿರುತ್ತವೆ. ಈ ಸಂಕಲನದಲ್ಲಿರುವ 'ರಿಪ್ ವಾನ್ ವಿಂಕಲ್' ಕತೆ ಬಹುಸ್ವಾರಸ್ಯದ್ದು. ಸೋಮಾರಿಯೂ, ಸಭ್ಯನೂ, ಸದಾ ಸಂತೋಷಿಯೂ ಆದ ರಿಪ್ ಬೇರೆಯವರ ಸುಖಕ್ಕೆ ಕಾರಣವಾಗುವವನು. ತನ್ನ ಮನೆಯೆಡೆಗೆ ಜವಾಬ್ದಾರಿಯೇ ಇಲ್ಲದವನು. ಒಮ್ಮೆ ಇವನು ಬೆಟ್ಟದಲ್ಲಿ ಕಾಣಿಸಿದ ಗಿಡ್ಡರಿಗೆ ಸಹಾಯ ಮಾಡಲೆಂದು ಹೋಗಿ ಅವರು ಕೊಟ್ಟ ಮದ್ಯ ಕುಡಿದು ಗಾಢ ನಿದ್ದೆಗೆ ಸಂದವನು ಇಪ್ಪತ್ತು ವರ್ಷಗಳ ನಂತರ ಎಚ್ಚರವಾಗುತ್ತಾನೆ. ಅವನ ಪ್ರಕಾರ ಒಂದೇ ದಿನವಾಗಿದೆ. ಏಳುವಾಗಲೇ ವಯಸ್ಸಿನ ಬೇನೆಗಳು ಕಾಣಿಸಿಕೊಂಡು ಅವನು ತನ್ನ ಪರಿಚಿತರನ್ನು ಹುಡುಕಿ ಹೋದರೆ ಇಡೀ ಜಗತ್ತೇ ಅಪರಿಚಿತವಾಗಿದೆ. ಎಲ್ಲವೂ ಬದಲಾಗಿದೆ. ಹೀಗೆ ಇದ್ದಕ್ಕಿದ್ದಂತೆ ಗುರುತು ಕಳೆದುಕೊಳ್ಳುವುದು ಮಾಯಾಲೋಕದಿಂದಲೇ, ಲೋಕದ ಮಾಯೆಯಿಂದಲೇ? ಕತೆಯ ಪ್ರಕಾರ ಆತ ಭೆಟ್ಟಿಯಾಗಿದ್ದು ಪಿಶಾಚಿಗಳನ್ನು. ಅವರ ಮದ್ಯಕ್ಕೆ ಮನನೀಡಿದ್ದರಿಂದಲೇ ಆತ ಮಹಾ ಮೋಹನಿದ್ರೆಗೆ ವಶವಾದ! ಈ ಮೋಹನಿದ್ರೆ ಎಷ್ಟೆಲ್ಲಾ ಹೊಸರೂಪ ಧರಿಸಿ ಇಂದಿಗೂ ನಮ್ಮನ್ನು ಕೈವಶಮಾಡಿಕೊಳ್ಳುತ್ತಿದೆಯಲ್ಲಾ ಎಂದು ಈ ಕತೆ ಓದಿದಾಗ ಅನ್ನಿಸದೇ ಇರದು.

ಮನುಷ್ಯರು ಮತ್ತೆ ಮತ್ತೆ ಹಂಬಲಿಸುವುದು ಗೌರವ, ಅಭಿಮಾನ, ಕರುಣೆ, ನ್ಯಾಯ, ಧೈರ್ಯ ಮತ್ತು ಪ್ರೇಮಕ್ಕಾಗಿ. ಆದರೆ ಅವರು ಎದುರುಗಾಣಬೇಕಾಗುವುದು ಇದಕ್ಕೆ ವಿರುದ್ಧವಾದ ಸಂಗತಿಗಳನ್ನು. ಪ್ರಕೃತಿ ಮತ್ತು ಸಹಮಾನವರನ್ನು ಆಳಬೇಕೆಂಬ ಮನುಷ್ಯನ ಕೊನೆಯಿಲ್ಲದ ಮಹತ್ವಾಕಾಂಕ್ಷೆ ಅವನನ್ನು ಕ್ರೌರ್ಯದ ಯಾವ ಅಂಚಿಗೆ ಬೇಕಾದರೂ ದೂಕಬಹುದು. 'ಪ್ರೊಕೃಸ್ಟಿನ ಮಂಚ' ಇದಕ್ಕೊಂದು ರೂಪಕ. ದರೋಡೆಕೋರನಾದ ಈತ ತನ್ನ ಮನೆಗೆ ಅತಿಥಿಗಳಂತೆ ಕರೆದುಕೊಂಡು ಬಂದವರನ್ನು ಆತನ ಮನೆಯ ಮಂಚದ ಆಕಾರಕ್ಕೆ ತಕ್ಕಂತೆ ಕಡಿಯುತ್ತಿದ್ದ ಅಥವಾ ಜಗ್ಗಿ ಎಳೆಯುತ್ತಿದ್ದ. ಹಾಗೆ ಅವರನ್ನು ಕೊಂದು ದೋಚುತ್ತಿದ್ದ. ಆ ಮಂಚದ ಆಕಾರಕ್ಕೆ ತಕ್ಕಂತೆ ಹೊಂದಾಣಿಕೆಯಾದ ಒಬ್ಬನೇ ಒಬ್ಬ ಜೀವಂತವಾಗಿ ಉಳಿದರೂ ಅವನ ಗುಲಾಮನಾಗಿದ್ದ. ಹಿಂಸೆಗೂ ಒಂದು ಆಕಾರ ಮತ್ತು ಹಿಂಸೆಯಲ್ಲೂ ಸಮರೂಪತೆ!

ಯಾವ ಕಾಲದಲ್ಲಿ ಯಾವ ಸಂದರ್ಭಕ್ಕೆ ಈ ಕತೆಗಳು ಹುಟ್ಟಿಕೊಂಡಿರುತ್ತವೋ ತಿಳಿಯದು. ಆದರೆ ತತ್ಕಾಲಕ್ಕೆ ಅದು ಹೊಂದಿಕೊಳ್ಳುವ ಪರಿ ಅಸದೃಶ. 'ಬರ್ಮಿಸೈದ ಮೇಜವಾನಿ' ಎಂಬ ಅರೇಬಿಯನ್ ನೈಟ್ಸ್‌ನ ಕತೆ ಅಂತಹದು. ಇದರಲ್ಲಿ ಒಂದು ದೃಶ್ಯ ಬರುತ್ತದೆ. ಹಸಿದು ಬಂದ ಭಿಕ್ಷುಕ ವೈಭವೋಪೇತವಾದ ಬರ್ಮಿಸೈದನ ಅರಮನೆಗೆ ಬಂದಾಗ ಅವನನ್ನು ಪ್ರಭು ಸ್ವಾಗತಿಸಿ ನಾನಿರುವಲ್ಲಿ ಯಾರೂ ಹಸಿದಿರಬಾರದು ಎನ್ನುತ್ತಾನೆ. ಆದರೆ ಆತ ಇವನಿಗೆ ಊಟ ಕೊಟ್ಟಂತೆ, ಅವನೊಂದಿಗೆ ತಾನೂ ಊಟ ಮಾಡಿದಂತೆ ನಟಿಸುತ್ತಾನೆ. ಚಕಿತನಾದರೂ ಈತ ಊಟ ಮಾಡಿದಂತೆ ನಟಿಸುತ್ತಾನೆ. ಸದ್ಯ, ನಮ್ಮ ನಾಯಕರೂ, ಪ್ರಜೆಗಳೂ ಇದೇ ರೀತಿಯ ನಾಟಕದಲ್ಲಿ ತಲ್ಲೀನರಾಗಿದ್ದಂತೆ ಅನ್ನಿಸಿದರೆ ಆಕಸ್ಮಿಕವಲ್ಲ.

ಈ ಸಂಕಲನದ ಆರಂಭದ ಭಾಗದಲ್ಲಿ ಆರು ದೀರ್ಘ ಕತೆಗಳಿವೆ. ಅವು ಓದುವ ತಾಳ್ಮೆ ಬಯಸಿದರೂ ಓದಿದ ಮೇಲೆ ಕಾಡುವಂತಿವೆ. 'ಬಿಳಿಕೊಕ್ಕರೆ'ಯ ಸಿಲ್ವಿಯಾ ಕೊಕ್ಕರೆಗಾಗಿ ಬಡತನವನ್ನೇ ಆಯ್ಕೆಮಾಡಿಕೊಂಡು ನಮ್ಮೊಳಗೆ ಬೆಚ್ಚಗೆ ಕುಳಿತು ಬಿಡುತ್ತಾಳೆ. ಇಲ್ಲಿರುವ ಇನ್ನೊಂದು ಕಾಡುವ ಕತೆ 'ಮಹಾ ಶಿಲಾಮುಖ'. ಹತ್ತಿರದಿಂದ ನೋಡಿದರೆ ಪೇರಿಸಿಟ್ಟ ರಾಕ್ಷಸ ಬಂಡೆಕಲ್ಲಿನಂತೆ ಕಾಣುವ, ದೂರದಿಂದ ನೋಡಿದರೆ ಮಹಾ ಸಾತ್ವಿಕನೊಬ್ಬನ ಮುಖದಂತೆ ಕಾಣುವ, ಇದನ್ನು ಹೋಲುವವನೊಬ್ಬ ಅವತರಿಸಿ ಉದ್ಧರಿಸುತ್ತಾನೆ ಎಂಬ ನಂಬಿಕೆ ಜನರಿಗೆ. ಮೊದಲೊಬ್ಬ ಶ್ರೀಮಂತ ವ್ಯಾಪಾರಿ, ಆನಂತರ ಜನಪ್ರಿಯ ಸೇನಾಧಿಪತಿಯನ್ನು ಶಿಲೆಯ ಅಪರಾವತಾರ ಎಂದು ಜನ ನಂಬಿ ಕಾಲಾಂತರದಲ್ಲಿ ನಿರಾಶರಾಗಿರುತ್ತಾರೆ. ಆಮೇಲೊಬ್ಬ ಬಂದ. "ಆ ಶ್ರೀಮಂತನ ಸಂಪತ್ತು ಮತ್ತು ಸೈನಿಕನ ಕತ್ತಿ ಇವುಗಳ ಬದಲು ಇವನಲ್ಲಿ ಚುರುಕಾದ ನಾಲಿಗೆಯಿತ್ತು. ಮತ್ತೆ ಅವೆರಡನ್ನು ಒಟ್ಟು ಹಾಕಿದರೂ ಇದು ಬಲಿಷ್ಠವಾಗಿತ್ತು. ಅವನ ವಾಗ್ಮಿತೆ ಅಷ್ಟು ಅದ್ಭುತವಿತ್ತು... . . ಅದು ಕೊನೆಗೂ ಅವನ ದೇಶಬಾಂಧವರಿಗೆ ಅವನನ್ನು ಅಧ್ಯಕ್ಷ ಪಟ್ಟಕ್ಕೆ ಚುನಾಯಿಸಲು ಪ್ರೇರೇಪಿಸಿತು" (ಪು:೭೩) ಇಷ್ಟಾದರೂ ನಂತರದಲ್ಲಿ ನಿರಾಶೆ ಅವರಿಸಿತು. ಪ್ರತೀ ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಮಹಾನತೆಯನ್ನು ಕಾಣದೇ ಹೋಗುವುದು ಮತ್ತದು ಅನರ್ಹರಲ್ಲಿ ನಾಯಕತ್ವವನ್ನು ಕಾಣುವುದರ ಅಸಾಂಗತ್ಯವನ್ನು ಈ ಕತೆ ತೆರೆದಿಡುತ್ತದೆ.

ಗೌರೀಶ ಕಾಯ್ಕಿಣಿಯವರು ಈ ಕತೆಗಳನ್ನು ಅನುವಾದ ಮಾಡುವಾಗ ಅದನ್ನು ಭಾರತೀಯ ಪರಿಸರಕ್ಕೆ ಒಗ್ಗಿಸುವ ಕ್ರಮ ಸೊಗಸಾದುದು. ಉದಾ: "ಅರ್ಜುನನ ಮತ್ಸ್ಯಯಂತ್ರ ಭೇದದ ಕಥೆ ನಮಗೆ ಚೆನ್ನಾಗಿ ಗೊತ್ತು. ವಿಲಿಯಂ ಟೆಲ್ಲನ ಶರಸಂಧಾನವೂ ಅಷ್ಟೇ ಅದ್ಭುತ". ವೈಚಾರಿಕತೆಯ ಪಕ್ಷಪಾತಿಯಾದ ಕಾಯ್ಕಿಣಿಯವರು ವಿಧಿವಿಲಾಸದ ಇಂತಹ ಕತೆಗಳನ್ನು ಅನುವಾದಿಸುವಾಗ ಇಟ್ಟುಕೊಂಡಿರುವ ಸ್ಪಷ್ಟತೆ, ಕತೆಯನ್ನು ನಾವು ಗ್ರಹಿಸಬೇಕಾದ ಕ್ರಮಕ್ಕೊಂದು ಮಾದರಿಯಂತಿದೆ.

**–ಸಬಿತಾ ಬನ್ನಾಡಿ**

ಪು: **ನೆನಪಿನ ಬೂದಿಗೆ ಜೀವ ಬರಲಿ** ಲೇ: ಸಂಧ್ಯಾದೇವಿ ಪ್ರ: **ಅಹರ್ನಿಶಿ ಪ್ರಕಾಶನ,** ಶಿವಮೊಗ್ಗ(೯೪೪೯೧೭೪೬೬೨) ಪು: **೮೦** ಬೆಲೆ: **ರೂ. ೭೫/–**

## ಅಮೂರ್ತತೆಯ ಲಾಸ್ಯಗಳೇ ಇಲ್ಲಿ ಕವಿತೆಗಳು



. **ಈ**ಗಾಗಲೇ ದಶಕಗಳಿಂದ ಕವಿತೆಗಳನ್ನು ಬರೆಯುತ್ತಾ ಬಂದಿರುವ

ಸಂಧ್ಯಾದೇವಿಯವರ ಈ ಕವನ ಸಂಕಲನವು ಅವರ ಈವರೆಗಿನ ಕಾವ್ಯದ ಧಾಟಿಯನ್ನು ಮುಂದುವರೆಸುವಂತೆ ಇರುವ ಸಂಗ್ರಹ. ಸಂಧ್ಯಾದೇವಿಯವರು ತಮ್ಮ ಕಾವ್ಯದ ಧಾಟಿಯಲ್ಲಿ ಎಸ್.ಮಂಜುನಾಥ್ ಅವರ ಕವಿತೆಗಳ ಧಾಟಿಗೆ ಹತ್ತಿರ ಇರುವವರು. ಕವಿತೆಯೊಂದು ಪೂರ್ವಾಪರ ಚರಿತ್ರೆಗಳ ಹೊರೆಯಿರದ ಒಂದು ಅನುಭವದಂತೆ ಎಂದು ಹೊರಡುವ ರೀತಿ ಅದು. ಅದೇ ರೀತಿ ಸಂಧ್ಯಾದೇವಿಯವರು ಕವಿತೆ ಕಟ್ಟುವುದಕ್ಕೆ ಕವಿತೆ ಕೊಡಬಹುದಾದ ಒಂದು ಅನುಭವವೇ ತಮ್ಮ ಕಾವ್ಯದ ಶೋಧ ಎಂದು ನಂಬಿಕೊಂಡು ಅದನ್ನೇ ತೀವ್ರ ವ್ಯಾಮೋಹದಿಂದ ಕಟ್ಟತೊಡಗುತ್ತಾರೆ. ಇವರ ಕವಿತೆಗಳು ತೀವ್ರವಾಗಿ ಅನುಭವವನ್ನು ಭಾವಿಸಬೇಕೆಂದು ಹೊರಡುವುದರಿಂದ ಐಂದ್ರಿಕ ತಿಳಿವಳಿಕೆಗಳ ಮೂಲಕ ತಾವು ಪಡೆದುಕೊಂಡಿದ್ದನ್ನು ಕಾಣಿಸಬೇಕು ಎನ್ನುವುದು ಅವರ ಕವಿತೆಗಳ ತಹತಹ. ಮೈ ಎನ್ನುವುದು ಈ ಕವಯಿತ್ರಿಗೆ ನಿರಾಕರಣೆಯ ಸಂಗತಿಯಲ್ಲ. ಅದು ಅನುಭವ ತಂದುಕೊಡುವ ಸಾಧನ.

ಬಿಡಿಸಬೇಕೆಂದುಕೊಂಡೆ ಮೈಯನ್ನು
ಮೈಯಿಂದ ಮೈಯಿಂದಲೆ
ತೊಡಗಿದ್ದು ನೆನಪು
ಮತ್ತದೇ ನೆನಪು ಮೈಯಾತು **(ಚಕ್ರಾಕಾರ)**

ನನ್ನ ಮೈಗೆ ಹತ್ತಿದ ತೊನ್ನು ನೀನು
ಇನ್ನು ಹುಡುಕಬೇಕಾಗಿಲ್ಲ ಜಾಗ
ಎಲ್ಲಿ ಬೇಕಾದರಲ್ಲಿ ಕಾಣಿಸಿಕೊಳ್ಳು **(ಮೈಗೆ ಮೈಯೇ ಕೊನೆ)**

ಎನ್ನುವ ಸಾಲು ತಾಜಾ ಎನಿಸುವುದು ಹೊಸ ರೂಪಕದಿಂದ. ಇದು ಹೊಳೆಯುವುದು ಇಂದ್ರಿಯದಿಂದಲೇ.

ಇದರಿಂದ ಅವರ ಕವಿತೆಗಳಲ್ಲಿ ಇಂದಿನ ಕವಿತೆಗಳು ಅಭಿಮುಖವಾಗುವ ಸಾಮಾಜಿಕತೆಯ ಅತಿ ಮೆರವಣಿಗೆ ಗೈರು ಹಾಜರಾಗಿರುತ್ತದೆ. ಕವಿತೆಯೊಂದು ಅನುಭವ ಎಂದಾಗ ಅದನ್ನು ಅವರು ತೀರ ವೈಯಕ್ತಿಕ ಧಾಟಿಯಲ್ಲಿ ಮಂಡಿಸಲು ಯತ್ನಿಸುತ್ತಾರೆ. ವಾಸ್ತವವನ್ನು ಗ್ರಹಿಸುವ ವಿಧಾನ ಹಾಗು ಜೀವನದ ಋಜುತ್ವದ ಶೋಧವು ಅಂತರಂಗಿಕವಾಗಿ ಆದಷ್ಟು ಅದು ತೀವ್ರತೆಯನ್ನು ತಂದುಕೊಡುತ್ತದೆ ಎಂದು ಈ ಕವಯಿತ್ರಿ ನಂಬಿಕೊಂಡಿದ್ದಾರೆ. ಹಾಗಾಗಿ ಅವರ ಈ ಸಂಕಲನದ ಕವಿತೆಗಳು ಒಳಮುಖಿಯಾಗಿ ಸಾಗುತ್ತವೆ.

ಈ ಸಂಕಲನದಲ್ಲಿ ಮುಖ್ಯವಾಗಿರುವುದು ಪ್ರೇಮದ ತೀವ್ರ ತುಡಿತ. ಪ್ರೇಮಕ್ಕೆ ಅಲೌಕಿಕತೆ ಬರುವುದೇ ತೀವ್ರವಾದ ಐಂದ್ರಿಕ ಅನುಭವಗಳ ನೆನಪಿನಿಂದ. ಈ ಅಂಶವನ್ನು ಸಂಧ್ಯಾದೇವಿಯರು ಚೆನ್ನಾಗಿ ದುಡಿಸಿಕೊಳ್ಳುತ್ತಾರೆ. ಭಕ್ತಿ ಪರಂಪರೆಯ ಕೆಲವು ಅಂಶಗಳನ್ನೂ ತಮ್ಮ ಕಾವ್ಯದಲ್ಲಿ ತಂದುಕೊಳ್ಳಲು ಅವರು ಯತ್ನಿಸಿದ್ದಾರೆ. 'ಪ್ರೀತಿ ಹೇಗೆ ಭಕ್ತಿಯಾಗಿ ಪರಿಣಮಿಸುತ್ತದೆ ಪೂಜೆಯಲ್ಲಿ?' ಎನ್ನುವ ಸಾಲು ಸೋಜಿಗದಲ್ಲಿ ಹುಟ್ಟುವುದಕ್ಕಿಂತ ಪ್ರೇಮದ ಅರಿವಿನಲ್ಲಿ ಹುಟ್ಟುತ್ತದೆ ಎನ್ನಬಹುದು. . ನಾನು ಎನ್ನುವ ಕೇಂದ್ರದಲ್ಲಿ ನಿಂತು ನೀನು ಎನ್ನುವುದನ್ನು ಪರಿಭಾವಿಸುವುದು ಪ್ರೇಮದ ಭಾವ. ಇದರಲ್ಲಿ ಜಾಗಗಳು ಬದಲಾಗಿ ನಾನೆಂಬುದು ನೀನಾಗಬಹುದು; ನೀನೆಂಬುದು ನಾನಾಗಬಹುದು. ಇಂತಹ ದ್ವಿತ್ವಗಳಲ್ಲಿ ಆಟವಾಡುವುದನ್ನು ಇಲ್ಲಿನ ಅನೇಕ ಕವಿತೆಗಳು ಮಾಡುತ್ತವೆ. 'ಇದೆ ಮತ್ತು ಇಲ್ಲ' ಎನ್ನುವ ಕವಿತೆ ಆರಂಭವಾಗುವುದೇ 'ಎಂಜಲಿಲ್ಲದ ಕಾಮ ಇದೆಯೆಂದರೆ ಇದೆ ಇಲ್ಲವೆಂದರೆ ಇಲ್ಲ' ಎಂದು. ಹೀಗೆ ದ್ವಂದ್ವಗಳನ್ನು ಬಳಸುವುದು ತತ್ವಪದಗಳಲ್ಲಿ ಹಾಗು ಅನುಭಾವದ ಪದ್ಯಗಳಲ್ಲಿ ಸಾಮಾನ್ಯ ತಂತ್ರ. ಆದರೆ ಇಂತಹ ಸನ್ನಿಗೋಲುಗಳು ಬಳಸುತ್ತಾ ಬಳಸುತ್ತಾ ಕ್ಲೀಷೆಯಾಗತೊಡಗುತ್ತವೆ. ಹೊಸ ಅಭಿವ್ಯಕ್ತಿಯ ಸಾಧ್ಯತೆಗಳು ಕ್ಷೀಣವಾಗತೊಡಗುತ್ತವೆ. ಸಂಧ್ಯಾದೇವಿಯವರ ಕವಿತೆಗಳ ಸಮಸ್ಯೆಯೇ ಇದು. ಅವರ ಕವಿತೆಗಳು ತೀವ್ರತರವಾದ ವ್ಯಾಮೋಹವನ್ನು ಹೊಂದಿದ್ದು ಅದನ್ನು ಸಶಕ್ತವಾಗಿ ಅಭಿವ್ಯಕ್ತಿಸುತ್ತವೆ. ಆದರೆ ಅವರ ಕವಿತೆಗಳಿಗೆ ಇದರಿಂದಲೇ ಒಂದು ಬಗೆಯ ಏಕತಾನತೆ ಪ್ರಾಪ್ತವಾಗುತ್ತದೆ. ಪಳಗಿರುವ ಕವಿ ಕೈಗೆ ಸಂವೇದನೆಯನ್ನು ಆವಾಹಿಸಿಕೊಳ್ಳುವುದು ಕಷ್ಟವೇನಲ್ಲ. ಅಮೂರ್ತತೆಯ ಲಾಸ್ಯಗಳೇ ಸಂಧ್ಯಾದೇವಿಯವರ ಕಾವ್ಯದ ಶಕ್ತಿ ಮತ್ತು ದೌರ್ಬಲ್ಯ ಎನ್ನಬಹುದು.

ಪು; **ಹಾರುವ ಹಂಸೆ** ಲೇ: **ಆರ್ ದಿಲೀಪ್‌ಕುಮಾರ್** ಪ್ರ: **ಗೋಮಿನಿ ಪ್ರಕಾಶನ, ತುಮಕೂರು**(೯೮೪೫೯೩೧೧೨೩) ಪುಟ: ೧೦೮ ಬೆಲೆ: ರೂ ೧೦೦/-

## ಆಧ್ಯಾತ್ಮಿಕ ವಾಂಛೆಗೆ ಸಿಕ್ಕ ಕಾವ್ಯ ಪ್ರಯೋಗ



**ಆರ್**.ದಿಲೀಪ್‌ಕುಮಾರ್ ಅವರ ಚೊಚ್ಚಲ ಕವನ ಸಂಗ್ರಹ, 'ಹಾರುವ ಹಂಸೆ' ಭರವಸೆಗಳುಳ್ಳ ಕವಿತೆಗಳನ್ನು ಹೊಂದಿದ್ದು ಅನೇಕ ಓದಬಲ್ಲ ಕವಿತೆಗಳನ್ನು ಒಳಗೊಂಡಿದೆ. ದಿಲೀಪರ ಕವಿತೆಗಳು ಕೆಲವು ವಾಚಾಳಿಯಾಗಿ ಮಾತನಾಡಿ ತಮ್ಮ ಆಂತರ್ಯವನ್ನು ಹೇಳಿಕೊಂಡರೆ ಕೆಲವು ಶಬ್ದಚಿತ್ರಗಳಾಗಿ ಮನಸೆಳೆಯುತ್ತವೆ. 'ಅವಳು ಬಳಿ ಸುಳಿದಂತೆಲ್ಲಾ.. ..ಪಾರಿಜಾತದ ಪರಿಮಳ/ ಕೊಳ್ಳದ ತುಂಬ ತುಂಬಿ ಹರಿವ ನೀರು' ಎನ್ನುವಾಗ, 'ಮನೆಯ ಮುಂದಿನ ಚಪ್ಪಲಿಯ ಹಾಗೆ/ ಕಾದು ಕೂತಿದೆ ಅದುವೂ ನನ್ನಂತೆ/ಗಮ್ಯದ ಗಮನ ನೀಡುತ್ತಾ' ಎನ್ನುವಾಗ; 'ನಂಬಿಕೆಯೆ ಜೀವರಸ ಜಿನುಗುವುದು/ಸಪಾಟು ನೆಲವೆಲ್ಲಾ ಹಿಮಪರ್ವತ/ಭೂ ಕೈಲಾಸ' ಎನ್ನುವಾಗ ಹೊಸ ಶಬ್ದಚಿತ್ರಗಳ ಹುಡುಕಾಟದಲ್ಲಿ ಈ ಕವಿಯಿದ್ದಾರೆಂಬುದನ್ನು ಸೂಚಿಸುತ್ತವೆ.

ದಿಲೀಪ್ ಕುಮಾರರ ಕವಿತೆಗಳು ಸಹಜವಾದ ಒಳ್ಳೆಯತನವನ್ನು ತಮ್ಮ ಸುತ್ತದ ಬದುಕಿನಲ್ಲಿ ಹುಡುಕಾಡುತ್ತವೆ. ಆದುದರಿಂದಲೋ ಏನೊ ಅನೇಕ ಕವಿತೆಗಳು ಆಶಯ ಪ್ರಧಾನವಾಗಿವೆ. ಓತಪ್ರೋತವಾಗಿ ತಮ್ಮ ಒಳಗಿನ ಬೇಗುದಿಯನ್ನು, ಅಸಹನೆಯನ್ನು ವ್ಯಕ್ತಪಡಿಸುವ ಮೂಲಕ ಕವಿತೆಗಳನ್ನು ವಾಚಾಳಿಯಾಗಿಸಿದ್ದಾರೆ ಎನಿಸುತ್ತದೆ.

ಈ ಕವಿಯನ್ನು ಕಾಡುವ ಮುಖ್ಯ ಸತ್ವಗಳೆಂದರೆ ತಮ್ಮ ನೆಲದ ಜನಪದರು ಹಾಗು ಜಾನಪದ ನಾಯಕರಾದ ಮಂಟೇಸ್ವಾಮಿಗಳು. ನೆಲದ ಮಣ್ಣಿನೊಂದಿಗೆ ಬೆರೆತುಕೊಂಡಿರುವ ಇವರನ್ನು ಮುಖ್ಯವಾಹಿನಿಯ ತೊಡಕುಗಳಿಗೆ ಪರಿಹಾರವಾಗಿ ಶೋಧಿಸಿಕೊಳ್ಳಬಹುದೇ ಎನ್ನುವುದರ ಸೂಚನೆಗಳುಳ್ಳ ಕೆಲವು ಕವಿತೆಗಳು ಇಲ್ಲಿವೆ. ಆದರೂ ಕವಿ ನೆಲದ ಅನುಭಾವಿಕ ನೆಲೆಗಳ ಬಗ್ಗೆ ಖಚಿತವಾಗಿದ್ದಂತೆ ತೋರುವುದಿಲ್ಲ. ಆದರೆ ಕನ್ನಡದ ಹೊಸ ಹುಡುಗರು ಬರೆಯುವ ಕಾವ್ಯದಲ್ಲಿ ಕಡ್ಡಾಯವಾಗಿ ಅನುಭಾವದ ಸೆಲೆತಗಳಿರಬೇಕೆಂಬ ನಂಬುಗೆ ದಿಲೀಪರಿಗೂ ಇದ್ದಂತಿದೆ. ಅವರೂ ಸಹ ಮಂಟೇಸ್ವಾಮಿ, ಬೋಧಿಸತ್ವರನ್ನು ನೆನೆದಿದ್ದಾರೆ. ಅವರ ಕವನ ಸಂಕಲನದ ಶೀರ್ಷಿಕೆ ಕವಿತೆಯಾದ 'ಹಾರುವ ಹಂಸೆ'ಯು ಆಧ್ಯಾತ್ಮದ ಸೂಚನೆ ನೀಡುತ್ತದೆ. '*ಕಂಡಾಗಿನಿಂದ ಇಡಾ ಪಿಂಗಳಗಳ ಗಳ ಮೆಟ್ಟಿ ಏರುವ ತವಕ/ ವಿಶುದ್ಧಿಯ ದಾಟಿದರೂ ಶುದ್ಧವಾಗದು ಒಳಹೊರಗು*'(ಹಾರುವ ಹಂಸೆ) ಎನ್ನುವ ಸಾಲುಗಳು ಈ ಕವಿಯ ಆಧ್ಯಾತ್ಮಿಕ ವಾಂಛೆಯನ್ನು ತೋರುತ್ತವೆ. ಹಾಗೆಯೇ 'ಅಥೆನ್ಸಿನ ಹಂಸಕ್ಕೆ' ಕವಿತೆಯನ್ನು ಕೂಡ ಇಲ್ಲಿ ಉಲ್ಲೇಖಿಸಬಹುದು.

ಒಟ್ಟಾರೆ ದಿಲೀಪರ ಕಾವ್ಯದ ಓಘ ಚೆನ್ನಾಗಿದೆ. ಅನೇಕ ಬಗೆಯ ಅಭಿವ್ಯಕ್ತಿಗಳನ್ನು ಅವರು ತಮ್ಮ ಕಾವ್ಯದಲ್ಲಿ ತಂದುಕೊಳ್ಳುವ ಸೂಚನೆಯನ್ನು ಈ ಸಂಕಲನದ ಕವಿತೆಗಳಲ್ಲಿ ನೀಡಿದ್ದಾರೆ. ತಮ್ಮ ಕಾವ್ಯದಲ್ಲಿ ವಸ್ತು ಮತ್ತು ಸಂರಚನೆಗಳನ್ನು ಗಂಭೀರವಾಗಿ ಪರಿಗಣಿಸುವ ಸೂಚನೆ ನೀಡಿದ್ದಾರೆ.

ಪು: **ಕುರುಡನಿಗೆ ಕನ್ನಡಿ** ಲೇ: **ಗಾಯತ್ರಿ ರವಿ** ಪ್ರ: **ರವಿ ಪ್ರಕಾಶನ**, ಹುಬ್ಬಳ್ಳಿ (೯೬೮೬೦೭೮೨೮೧) ಪು: **೮೮** ಬೆಲೆ: **ರೂ. ೬೦/-**

## ಬೆರಗಿಲ್ಲದ ಸರಳ, ನೇರ ಕವಿತೆಗಳು



**ಗಾ**ಯತ್ರಿ ರವಿಯವರು 'ಕುರುಡುನಿಗೆ ಕನ್ನಡಿ' ಸಂಕಲನದಲ್ಲಿ ಎದ್ದು ಕಾಣುವಂತದ್ದು ಉತ್ಸಾಹ. ತಮ್ಮ ಸುತ್ತಲ ಜಗತ್ತು ಕಪ್ಪಿನೊಳಗಿನ ಚಹಾದಷ್ಟು ಎಂದು ಅವರು ಬಲ್ಲರು. ಅದರಲ್ಲಿ ಏಳುವ ಪುಟಾಣಿ ಅಲೆಗಳನ್ನೆ ತಾವು ಚಂದಗಾಣಿಸಿ ಬದುಕನ್ನು ಸುಂದರ ಮಾಡಿಕೊಳ್ಳಬಲ್ಲೆ ಎನ್ನುವ ವಿಶ್ವಾಸವನ್ನು ಕವಿತೆಗಳಲ್ಲಿ ತುಂಬಿಕೊಳ್ಳುವ ಯತ್ನವನ್ನು ಅವರಿಲ್ಲಿ ಮಾಡಿದ್ದಾರೆ. ಮನೆಯ ಜಗತ್ತಿನ ಅನುಭವವನ್ನು ಗ್ರಹಿಸುವ ಈ ಕವಯಿತ್ರಿಯ ಪ್ರಯತ್ನವೇನೂ ಹೊಸದಲ್ಲ. ಈಗಾಗಲೇ ಕನ್ನಡದ ಮಹಿಳಾ ಕಾವ್ಯ ಅದನ್ನು ಪ್ರಯೋಗ ಮಾಡಿದೆ. ಹೊಸಗಾಲದಲ್ಲಿಯೂ ಇದನ್ನು ಬಳಸಬಹುದೆಂಬ ನಂಬಿಕೆಯಿಂದ ಗಾಯತ್ರಿಯವರು ಹೊರಡುತ್ತಾರೆ. ಈ ಮುಗ್ಧತೆ ಮತ್ತು ವಿಶ್ವಾಸಗಳೇ ಅವರ ಕವಿತೆಗೆ ಒಂದು ಪೊರೆ ಕಲ್ಪಿಸುತ್ತವೆ. ತಮ್ಮ ಸುತ್ತಲಿನ ಜಗತ್ತನ್ನು ಕರುಣೆಯಿಂದ ನೋಡಬೇಕೆನ್ನುವ ಮನಸ್ಸು ಅವರ ಕವಿತೆಗಳಿವೆ. ಆದಕಾರಣ ಅವರಿಗೆ ನರಳುವ ಜನ, ಪೀಡನೆ ಎಲ್ಲವೂ ಕಾಣುತ್ತವೆ. 'ಕುರುಡನಿಗೆ ಕನ್ನಡಿ' ಕವಿತೆಯಲ್ಲಿ ಕುರುಡನಿಗೆ ಮಿಡಿಯುವ ಮನವಿದ್ದರೆ, 'ಬರಬೇಡ ಗಾಂಧಿ ತಾತ' ಎನ್ನುವ ಕವಿತೆಯು ಗಾಂಧಿ ಗಳಿಸಿಕೊಟ್ಟ ಸ್ವಾತಂತ್ರ್ಯವು ಪರತಂತ್ರವಾಗಿದೆ ಎನ್ನುವುದನ್ನು ವಿಷಾದಿಸುತ್ತದೆ.

ಗಾಯತ್ರಿಯವರ ಕವಿತೆಗಳು ಆಪ್ತವೆನಿಸುವುದು ಅವರ ಸಂಬಂಧಗಳ ಕುರಿತ ಪ್ರೀತಿಯ ಅಭಿವ್ಯಕ್ತಿಯಲ್ಲಿ. ಅವು ಸಹಜವಾಗಿ ತಮ್ಮ ಪ್ರೀತಿಯೊರತೆಯನ್ನು ತೋರುತ್ತವೆ. ಉದಾಹರಣೆಗೆ 'ಅಕ್ಕನ ಮಡಿಲಲಿ' ಕವಿತೆ ಅಕ್ಕನ ಮಗುವನ್ನು ಮನೆಯಲ್ಲಿ ಹಚ್ಚಿಕೊಂಡದ್ದನ್ನು ಹೇಳುತ್ತಾ ಮಗುವಿನ ನವಿರಾದ ಜೀವದಿರುವಿಕೆಯನ್ನು ಹೇಳುತ್ತದೆ. 'ಎಲ್ಲರೂ ಮಲಗಿರುವಾಗ' ಕವಿತೆ ಸರಳವಾಗಿ ತನ್ನ ಇರುವಿಕೆಯನ್ನು ಸಾರ್ಥಕಗೊಳಿಸಿಕೊಳ್ಳುವ ಬಗೆಗೆ ಆಲೋಚಿಸುತ್ತದೆ. ಹೀಗೆ ಸರಳವಾದ ಅಭಿವ್ಯಕ್ತಿಯಲ್ಲಿ ಇರುವ ಕವಿತೆಗಳು ಈ ಸಂಕಲನದಲ್ಲಿ ಉತ್ತಮ ಪ್ರಯತ್ನಗಳು.

ಭಾಷೆಯ ದೃಷ್ಟಿಯಿಂದ ಹೇಳುವುದಾದರೆ ನೇರವಾಗಿ ತಮಗನ್ನಿಸಿದ್ದನ್ನು ಹೇಳುವ ರೀತಿ ಗಾಯತ್ರಿಯವರದು. ಕಾವ್ಯದ ಸೌಂದರ್ಯ ಹೆಚ್ಚಿಸುವ ಶಬ್ದಚಿತ್ರಗಳಾಗಲೀ ರೂಪಕಗಳಾಗಲೀ ಅವರ ಈ ಕವನ ಸಂಗ್ರಹದಲ್ಲಿಲ್ಲ. ಕಂಟೆಂಟ್ ಹೊರತಾಗಿ ಕಾವ್ಯ ಸಪ್ಪೆಯೆನಿಸುತ್ತದೆ. ಕವಿತೆ ಎನ್ನುವುದು ನೇರವಾದ ಮಾತಲ್ಲ, ಅದು ವಕ್ರೋಕ್ತಿ. ಅಲ್ಲಿ ಬೆರಗು ಹುಟ್ಟಲು ಸಹಜಾನುಭವ ಮುಖ್ಯವಾದಂತೆಯೇ ಬೇರೆ ಏನೊ ಮಾಂತ್ರಿಕತೆ ಬೇಕೆನಿಸುತ್ತದೆ.

**-ಆರ್. ತಾರಿಣಿ ಶುಭದಾಯಿನಿ**

**ಹಿರಿಯ ಸಾಹಿತಿಗಳಾದ ಅಬ್ದುಲ್ ಮಜೀದ್ ಖಾನ್ ಮತ್ತು ಚೆನ್ನಣ್ಣ ವಾಲೀಕಾರ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.-ಸಂ.**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳು



–ಬಿ.ವಿ. ಸುರೇಂದ್ರ
ಮತ್ತು ಕುಟುಂಬ
ಸಾಗರ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳು



–ಗೀತಾ ವಸಂತ
ಮತ್ತು ಕುಟುಂಬ
ತುಮಕೂರು

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಕ್ರಿಸ್‌ಮಸ್ ಹಬ್ಬದ ಹಾರ್ದಿಕ ಶುಭಾಶಯಗಳು**




## ಶ್ರೀ ಶಾರದಾದೇವಿ ಪದವಿಪೂರ್ವ ಕಾಲೇಜು

**ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-೮೩**


## ಕೊನೆಯ ಸಾಲುಗಳು



"ಸಂವಿಧಾನ ಮಾಡಿದವನು ನಾನೆಂದು ನನ್ನ ಸ್ನೇಹಿತರು ಹೇಳುತ್ತಾರೆ. ಆದರೆ ಈ ಸಂವಿಧಾನವನ್ನು ಸುಟ್ಟು ಹಾಕಬಯಸುವ ಮೊದಲಿಗ ನಾನೇ ಆಗಿರುತ್ತೇನೆ ಎಂದು ನಿಮಗೆ ಹೇಳಬಯಸುವೆ... ನಾನೊಬ್ಬ ಅಸಹಾಯಕ ಅಪಿಕಾರನಾಗಿದ್ದೆ. ನನಗೆ ಏನು ಮಾಡಲು ಹೇಳಲಾಯಿತೋ ಅದನ್ನು ನನ್ನ ಇಚ್ಛೆಗೆ ವಿರುದ್ಧವಾಗಿ ನಾನು ಮಾಡಿದೆ.."

**-ಡಾ. ಬಿ. ಆರ್ ಅಂಬೇಡ್ಕರ್** (ರಾಜ್ಯ ಸಭೆಯ ಚರ್ಚೆ, ೧೯೫೩)


**ಶುಭಾಶಯಗಳೊಂದಿಗೆ**

**ಎಸ್. ಉಷಾಲತಾ**

**ಮತ್ತು ತಂದೆ ತಾಯಿಗಳು**

ಮಂಗಳೂರು



HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**


ಇವರಿಗೆ \ To


If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)